ಸಂಪುಟ 20 ಸಂಚಿಕೆ 41
ಅಕ್ಟೋಬರ್ 3, 1999 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ

ಚೀನಾ ಕ್ರಾಂತಿಯ ಚಿನ್ನದ ಹಬ್ಬ



ಬರದಬವಣೆ ವಿದ್ಯುತ್ ಬರ ರೋಗಗ್ರಸ್ತ ಸರ್ಕಾರ

ಬಳ್ಳಾರಿಯಲ್ಲಿ ಮತ್ತೆ ರೈತರ ಆತ್ಮಹತ್ಯೆ



ಲಕ್ನೋದಲ್ಲಿ 'ಸಹಮತ್' ಮೇಲೆ ವಾಜಪೇಯಿ ಗೂಂಡಾಗಳ ದಾಳಿ

ಬರದಬವಣೆ, ವಿದ್ಯುತ್ ಬರ: ರೋಗಗ್ರಸ್ತ ಸರ್ಕಾರ

ಕರ್ನಾಟಕದ ೧೭೫ ತಾಲ್ಲೂಕುಗಳ ಪೈಕಿ ೧೨೪ ರಲ್ಲಿ ಸರಿಯಾಗಿ ಮಳೆ ಬೀಳದೆ, ಬರದ ಭೀತಿ ಆವರಿಸತೊಡಗಿದೆ. ಇದು ಕೇವಲ ಜನರ ಜೀವನ ಮಾತ್ರವಲ್ಲದೆ ದನ-ಕರುಗಳಿಗೆ ಕುಡಿಯುವ ನೀರು, ಮೇವು ಮುಂತಾದ ಗಂಭೀರ ಸಮಸ್ಯೆಗಳನ್ನು ತಂದೊಡ್ಡಿದೆ. ಇನ್ನೊಂದೆಡೆ ಕಳಪೆ ಬೀಜ, ಗೊಬ್ಬರ, ಬೆಳೆ ಹಾನಿ, ಸಾಲದ ಹೊರೆಯಿಂದ ತತ್ತರಿಸಿದ ಇಬ್ಬರು ರೈತರು ಬಳ್ಳಾರಿ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂತಹ ತೀವ್ರತರ ಪರಿಸ್ಥಿತಿ ಉಂಟಾಗುತ್ತಿರುವಾಗ ರಾಜ್ಯ ಸರ್ಕಾರದ ಸಿದ್ಧತೆ ಏನೇನು ಸಾಲದು. ಜನ, ಜಾನುವಾರುಗಳನ್ನು ಉಳಿಸುವ ಅಗತ್ಯ ಕಾಳಜಿ ಅವರಿಗೆ ಕಂಡು ಬರುತ್ತಿಲ್ಲ. ಇಂತಹ ಸಂಕಷ್ಟದ ಸ್ಥಿತಿಯಲ್ಲಿ ಸರ್ಕಾರ ಮಲಗಿದೆ. ಸರ್ಕಾರ ಈಗಲಾದರೂ ಎಚ್ಚೆತ್ತು ತುರ್ತು, ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕು. ಬರಗಾಲದ ಕಾಮಗಾರಿ ಆರಂಭಿಸಬೇಕು. ಮೇವು, ಕುಡಿಯುವ ನೀರು ಪೂರೈಕೆಗೆ ಪೂರ್ಣ ಸಿದ್ಧತೆ ನಡೆಸಬೇಕು. ದವಸ-ಧಾನ್ಯದ ಬೆಳೆ ಕಡಿಮೆಯಾಗುವ ಹಿನ್ನೆಲೆಯಲ್ಲಿ ಕೆಲವು ವ್ಯಾಪಾರಿಗಳು ಈಗಾಗಲೇ ಅಕ್ರಮ ದಾಸ್ತಾನು ಮತ್ತು ಬೆಲೆ ಏರಿಕೆಯ ಅಪಾಯದಾಟದಲ್ಲಿ ತೊಡಗಿದ್ದು ರೈತರು ಸಾವು-ಬದುಕಿನ ಸ್ಥಿತಿ ಎದುರಿಸುವರು.

ಬರ ತನ್ನ ನಾಲಿಗೆ ಚಾಚುತ್ತಿರುವ ಹೊತ್ತಿನಲ್ಲಿ ರಾಜ್ಯದ ಎಲ್ಲಾ ಮೂಲೆಗಳಲ್ಲಿಯೂ ವಿದ್ಯುತ್ ಶಕ್ತಿಯ ತೀವ್ರ ಕೊರತೆಯಿಂದ ಕಂಗಾಲಾಗಿರುವ ರೈತರು ಚಳುವಳಿ ನಡೆಸುತ್ತಿರುವುದು ನಿತ್ಯದ ಮಾತಾಗುತ್ತಿದೆ. ಕೊರತೆಯ ಪ್ರಮಾಣ ಹಾಗೂ ಪರಿಣಾಮ ಗಮನಿಸಿದರೆ ದುಸ್ಥಿತಿಯ ಗಂಭೀರತೆ ಅರ್ಥವಾದೀತು. ವಿದ್ಯುತ್‌ನ ಉತ್ಪಾದನೆಯ ಸ್ಥಿತಿಯ ಬಗ್ಗೆ ಭಾರೀ ಹೇಳಿಕೊಳ್ಳುತ್ತಿದ್ದ ಪಟೇಲ್ ಸರ್ಕಾರದ ನಿಜ ಹೂರಣ

ಸಂಪಾದಕೀಯ

ಹೊರಬಿದ್ದಿದೆ. ಈ ಕುರಿತು ವಾಸ್ತವ ಏನು ಎಂಬುದನ್ನು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ಮಳೆಯಿಲ್ಲದೇ, ಬೆಳೆ ಒಣಗಿರುವಾಗ, ಪಂಪ್ ಸೆಟ್‌ಗಳಿದ್ದರೂ ವಿದ್ಯುತ್ ಕಡಿತದಿಂದ ನೀರು ಸಿಗದೇ ರೈತ ಸಮೂಹ ಪರಿತಪಿಸುತ್ತಿದ್ದಾರೆ.


ಆದ್ದರಿಂದ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯ ಹೆಚ್ಚಳಕ್ಕೆ ತುರ್ತುಕ್ರಮ, ಅದರ ಕ್ರೋಢೀಕರಣ ಹಾಗೂ ಅಗತ್ಯ ರಂಗಗಳಿಗೆ ಮಾತ್ರ ವಿತರಣೆ ಮತ್ತು ಇದನ್ನು ಸರಿದೂಗಿಸಲು ನೆರೆ ರಾಜ್ಯಗಳೊಂದಿಗೆ ಸಮಾಲೋಚಿಸಿ, ವಿದ್ಯುತ್ ಪಡೆಯುವುದರತ್ತ ಸರ್ಕಾರ ಕ್ರಮವಹಿಸಬೇಕು.

ಲಭ್ಯವಿರುವ ವಿದ್ಯುತ್‌ನ್ನು ವೈಭೋಗದ ಸಮಾರಂಭಗಳು,ಬೋಗ-ಲಾಲಸೆ, ಅಲಂಕಾರದಂತಹ ಅನಗತ್ಯ ಕೆಲಸಗಳಿಗೆ ಬಳಸಲು ನಿರ್ಬಂಧ ಹೇರಬೇಕು. ಟ್ರಾನ್ಸ್‌ಪಾರ್ಮರ್ ಖರೀದಿ ಮತ್ತು ರಿಪೇರಿಗಳಲ್ಲಿ ದೊಡ್ಡ ಹಗರಣವೇ ನಡೆಯುತ್ತಿವೆ. ಉತ್ತಮ ಗುಣಮಟ್ಟದ ಟ್ರಾನ್ಸ್‌ಫಾರ್ಮರ್‌ಗಳ ಖರೀದಿ ಮತ್ತು ಸೂಕ್ತ ಕಾಲದಲ್ಲಿ ರಿಪೇರಿಗೆ ಆದ್ಯ ಗಮನ ನೀಡಬೇಕು. ವಿದ್ಯುತ್ ವಿತರಣೆಯಲ್ಲಿ ಸೋರಿಕೆ ತಡೆಯಲು ಕ್ರಮಗಳಿಲ್ಲ. ಹದಗೆಟ್ಟ ವ್ಯವಸ್ಥೆ ದುರಸ್ತಿ ಮಾಡಲು ಅಗತ್ಯ ಸಿಬ್ಬಂದಿ ಕೊರತೆ ಇದೆ. ಇದನ್ನು ನಿರ್ಲಕ್ಷಿಸಲಾಗಿದೆ.

ಕೃಷಿ ಮತ್ತು ಕೈಗಾರಿಕಾ ರಂಗಗಳಿಗೆ ವಿದ್ಯುತ್ ಪೂರೈಸಲು ನಿಷ್ಟುರ ಕ್ರಮ ವಹಿಸಬೇಕು. ಇಲ್ಲವಾದಲ್ಲಿ ಆಸ್ಫೋಟಕಾರಿ ಸನ್ನಿವೇಶ ಸೃಷ್ಟಿಯಾಗಲಿದೆ. ಈಗ ಎದ್ದು ಬರುತ್ತಿರುವ ಪ್ರತಿಭಟನೆಗಳನ್ನು ಪೋಲೀಸರ ದಬ್ಬಾಳಿಕೆ ಅಥವಾ ಇತರೆ ತಂತ್ರಗಳಿಂದ ಬಗ್ಗು ಬಡಿಯುವ ಕ್ರಮ ಅನುಸರಿಸದೇ ಜನತೆಯ, ರಾಜ್ಯದ ಪೂರ್ಣ ಹಿತಾಸಕ್ತಿ ಕಾಪಾಡಲು ಪ್ರಾಮಾಣಿಕವಾಗಿ ಮುಂದಾಗಬೇಕು.

ಗಾಯದ ಮೇಲೆ ಬರೆ ಎಳೆಯುವಂತೆ ರಾಜ್ಯ ವಿದ್ಯುತ್ ಮಂಡಳಿ, ವಿದ್ಯುತ್ ಬಳಕೆದಾರರಿಂದ ಮೂರು ತಿಂಗಳ ಮುಂಗಡ ಬಿಲ್ ಮೊತ್ತವನ್ನು ಸಂಗ್ರಹಿಸತೊಡಗಿದೆ. ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಹಂತಹಂತವಾಗಿ ಜಾರಿಯಾಗತೊಡಗಿದೆ. ಸಾಮಾನ್ಯ ಜನರನ್ನು ಸುಲಿಯುವ ಈ ನೀತಿ ಖಂಡನೀಯ. ಈ ಹಿಂದೆ ಇಂತಹ ಸುಲಿಗೆ ನೀತಿಯನ್ನು ಸರ್ಕಾರ ಮಂಡಿಸಿದಾಗ ಭಾರೀ ಪ್ರತಿಭಟನೆ ಮತ್ತು ಶಾಸಕರ ಸಮಿತಿಯ ಶಿಫಾರಸ್ಸಿನಂತೆ ತನ್ನ ಶಿಫಾರಸು ಕೈಬಿಟ್ಟಿತ್ತು. ಆದರೆ ಮತ್ತೆ ಅದನ್ನು ಹೇರತೊಡಗಿದೆ. ಈ 'ಅಡ್ವಾನ್ಸ್' ಸುಲಿಗೆಯನ್ನು ವಾಪಸ್ಸು ಪಡೆಯಬೇಕು.

ಸರ್ಕಾರ ಎಚ್ಚೆತ್ತು ಪರಿಹಾರಾತ್ಮಕ ಕ್ರಮ ವಹಿಸದಿದ್ದಲ್ಲಿ ರಾಜ್ಯಾದ್ಯಂತ ಜನತೆಯ ವ್ಯಾಪಕ ಪ್ರತಿಭಟನೆ ಹೋರಾಟಗಳು ಬೆಳೆಯಲಿವೆ ಎಂಬುದನ್ನು ಆಳುವ ಸರ್ಕಾರ ತಿಳಿಯಬೇಕು. ಕೊನೆಯ ನಿಮಿಷದವರೆಗೂ ಅಧಿಕಾರದ ಸವಿಉಣ್ಣಲು ಹಾತೊರೆಯುವ ಪಟೇಲರಿಗೆ ಇದು ಅರ್ಥವಾಗುವುದೇ?



ಕೃಪೆ : ಜನವಾಹಿನಿ

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಪ್ರಶ್ನೆ: ಇತ್ತೀಚಿಗೆ ಸಿಪಿಐ(ಎಂ) ರಾಷ್ಟ್ರ ನಾಯಕರಾದ ಸುರ್ಜಿತ್, ಜ್ಯೋತಿಬಸು, ಯೆಚೂರಿ, ಕಾರಟ್ ಮೊದಲಾದವರೆಲ್ಲಾ ಈ ಚುನಾವಣೆಯ ನಂತರ ಮೂರನೇ ಶ... ಅಧಿಕಾರಕ್ಕೆ ಬರುತ್ತದೆ ಎಂದು ಹೇಳುತ್ತಿದ್ದಾರೆ. ಚುನಾವಣೆಗೆ ಮೊದಲಿನ ದಿನಗಳಲ್ಲಿ... ಮುಂದೆ ಬರದ ಮೂರನೇ ರಂಗದ ಪ್ರಶ್ನೆ ಎರಡು ಹಂತದ ಚುನಾವಣೆಗಳು ಮುಗಿದ... ನಂತರ ಈಗ ಹೆಚ್ಚಾಗಿ ಕೇಳಿಬರುತ್ತಿರುವ ಹಿನ್ನಲೆ ಏನು? ಮೂರನೇ ಶಕ್ತಿ ಅಧಿಕಾರ... ಬರುವ ಸಾಧ್ಯತೆಗಳಿವೆಯೇ?

– ಬಿ.ರಾಜಶೇಖರಮೂರ್ತಿ...

ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಮೂಲಕ ಜನಪ್ರಿಯವಾಗಿದ್ದ ಕಾಂಗ್ರೆಸ್ ಆವೊಂದು ಪ್ರಭಾವಳಿಯಿಂದಾಗಿ ಜನರಿಂದ ಆರಿಸಲ್ಪಟ್ಟು ಅಧಿಕಾರಕ್ಕೆ ಬಂದಿತು. ಆದರೂ ನಂತರದ ವರ್ಷಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಆಶಯಗಳನ್ನು ಕೈಬಿಟ್ಟು, ಆರಿಸಿದ ಜನತೆಯ ಆಶೋತ್ತರಗಳನ್ನು ಈಡೇರಿಸುವ ಹೊಣೆಯಿಂದ ಜಾರಿಕೊಂಡು ಕೇವಲ ಘೋಷಣೆ, ಭಾಷಣಗಳಲ್ಲಿಯೇ ಜನತೆಯನ್ನು ತೃಪ್ತಿಪಡಿಸಲು ಪ್ರಯತ್ನಿಸುತ್ತಾ ನಮ್ಮ ದೇಶದ ಅತ್ಯಂತ ಶ್ರೀಮಂತ ಗುತ್ತೇದಾರಿ ಬಂಡವಾಳಿಗರ ಹಾಗೂ ಕ್ರೂರ ಪಾಳೆಗಾರಿ ಧಣಿಗಳ ಶೋಷಣೆಗೆ ಅವಕಾಶ ನೀಡುವ ಅನುಕೂಲ ಕಲ್ಪಿಸುವ ರೀತಿಯಲ್ಲಿ ಆಡಳಿತ ನಡೆಸತೊಡಗಿದಾಗ ಜನತೆಯಿಂದ ದೂರವಾಗತೊಡಗಿತು. ಆಗ ಕಾಂಗ್ರೆಸ್ಸೇತ ಆಡಳಿತವೊಂದನ್ನು ಅಧಿಕಾರಕ್ಕೆ ತರುವ ಪ್ರಶ್ನೆ ದೇಶದ ಮುಂದೆ ಬಂದಿತು.

ಈ ಪರ್ಯಾಯ ಎಂತಹದಿರಬೇಕು? ಕಾಂಗ್ರೆಸ್‌ನ ದೋರಣೆಗಳನು ಅಂದರೆ ಅವರಂತೆಯೇ ಗುತ್ತೇದಾರಿ ಬಂಡವಾಳಶಾಹಿಗಳ, ಪಾಳೇಗಾರಿ ದಣಿಗಳ ಶೋಷಣೆಗೆ ಅವಕಾಶ ಕಲ್ಪಿಸಿಕೊಡುವ ಮತ್ತೊಂದು ಪಕ್ಷ ಅಥವಾ ಪಕ್ಷಗಳ ಕೂಡಲೇ ಅಥವಾಕಾಂಗ್ರೆಸ್‌ನ ಧೋರಣಗಳಿಗೆ ವಿರುದ್ಧವಾದ ಜನಪರ ಧೋರಣೆಗಳನ್ನುಳ್ಳ ಪರ್ಯಾಯವೇ?


1957 ರಲ್ಲಿ ಕೇರಳದಲ್ಲಿ ಪ್ರಪ್ರಥಮ ಬಾರಿಗೆ ಕಮ್ಯುನಿಸ್ಟ್ ಸರ್ಕಾರವೊಂದು ಇಎಂಎಸ್ ರವ ನೇತೃತ್ವದಲ್ಲಿ ಅಧಿಕಾರ ವಹಿಸಿಕೊಂಡಾಗಲಿಂದ ಆರಂಭವಾಗಿ 1967-1977 ಮಹಾ ಚುನಾವಣೆಗಳಲ್ಲಿ ಮತ್ತಷ್ಟು ಬಲಗೊಂಡ ಎಡಪಂಥೀಯ ಪರ್ಯಾಯ ಒಂದುಕಡೆ. ಕೇಂದ್ರದಲ್ಲಿಯೇ ಎಲ್ಲಾ ಅಧಿಕಾರವನ್ನು ಕೇಂದ್ರೀಕರಿಸಿಕೊಂಡು ವಿವಿಧ ರಾಜ್ಯಗಳ ಪ್ರಾದೇಶಿಕ ಅಭಿವೃದ್ಧಿಯ ಪ್ರಶ್ನೆ, ಭಾಷೆ, ಸಂಸತಿಗಳ ಪ್ರಶ್ನೆ ಇವುಗಳನ್ನು ಪ್ರಮುಖ ಪ್ರಶ್ನೆಯನ್ನಾಗಿಸಿಕೊಂಡು ಪ್ರಾದೇಶಿಕ ಪಕ್ಷಗಳು ಮತ್ತೊಂದು ಕಡೆ ದೇಶದ ಜನತೆಯ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳಿಗೆ ಮತ್ತು ಕಾಂಗ್ರೆಸ್‌ನ ದುರಾಡಳಿತದಿಂದ ಬಿಡಿಸಿ ದೇಶವನ್ನು ಮುಂದಕ್ಕೊಯ್ಯುವ ಅವರ ಬಯಕೆಯ ರೂಪವಾಗಿ ಮೂಡಿಬಂದಿತು.

ಇದರಿಂದ ಜನರ ಬಯಕೆಯ ಈ ಪ್ರಬಲ ಅಭಿವ್ಯಕ್ತಿಯಿಂದ ಅದರಲ್ಲಿಯೂ ಎಡಪಕ್ಷಗಳ ವಿಜಯ ಮತ್ತು ಅವರಿಂದ ಎಡಪಂಥೀಯ ಪರ್ಯಾಯ ಅಭಿವೃದ್ಧಿ ಮಾರ್ಗದ ಶೋಧ ಅದು ದೇಶಾದ್ಯಂತ ಭೂಸುಧಾರಣೆಗಳ ಮೂಲಕ ಹಾಗೂ ಪಂಚಾಯತ್ ರಾಜ್ಯದ ಮೂಲಕ ಪಡೆದುಕೊಂಡ ಪ್ರಭಾವ ಒಂದು ಕಡೆ. ಮತ್ತು ಪ್ರಾದೇಶಿಕ ಪಕ್ಷಗಳ ಮೂಲಕ ಕೇಂದ್ರ, ರಾಜ್ಯ ಸಂಬಂಧಗಳು ಹಾಗೂ ಸಾಮಾಜಿಕ ನ್ಯಾಯದ ಪ್ರಶ್ನೆ ಬಲವಾಗತೊಡಗಿದ್ದು. ಮತ್ತೊಂದು ಕಡೆ ಈ ಗುತ್ತೇದಾರಿ ಹಾಗೂ ಭೂಮಾಲಕ ಧಣಿಗಳಿಗೆ ದೇಶದ ಆರ್ಥಿಕತೆ ಮತ್ತು ಬದುಕಿನ ಮೇಲೆ ತಮಗಿರುವ ಹಿಡಿತಕ್ಕೆ ಕೊಡಲಿಪೆಟ್ಟಾಗುತ್ತಿದೆ ಎಂದು ಕಂಡಾಗ ಅವರು ಬಿಜೆಪಿಯನ್ನು ಬಲಪಡಿಸುವ ಮೂಲಕ ದೇಶದ ಚಲನೆಯನ್ನು ತಡೆಹಿಡಿಯಲು ಪ್ರಯತ್ನಿಸಿದರು. ಅದೇ ರೀತಿ ಬಿಜೆಪಿ ಪಕ್ಷವು ದೇಶದ ಜನಮಾನಸದಲ್ಲಿ ಗಟ್ಟಿಯಾಗತೊಡಗಿದ್ದ ಈ ಮೇಲೆ ಸೂಚಿಸಿದ ಪ್ರಜಾಸತ್ತಾತ್ಮಕ ಆಶಯಗಳನ್ನು ನಾಶಮಾಡಲು ಹಾಗೂ ಭಾರತದಲ್ಲಿ ಪಾಳೆಗಾರಿ ವ್ಯವಸ್ಥೆಯನ್ನು ಕಾಂಗ್ರೆಸ್ ಉಳಿಸಿಕೊಂಡು ಬಂದದ್ದರಿಂದ ಇನ್ನೂ ವ್ಯಾಪಕವಾಗಿರುವ ಹಿಂದುಳಿದ ಚಿಂತನೆಗಳನ್ನು ಬಲಗೊಳಿಸಲು ತನ್ನ ಕೋಮುವಾದಿ ಅಜೆಂಡಾ(ಕಾರ್ಯಸೂಚಿ) ವನ್ನು ರಾಮಮಂದಿರ, ಕಾಶ್ಮೀರ ಸಮಾನ ನಾಗರೀಕ ಸಂಹಿತೆ, ಅಲ್ಪಸಂಖ್ಯಾತರ ಮೇಲಿನ ದಾಳಿ ಇವುಗಳ ಮೂಲಕ ಜಾರಿಗೆತಂದಿತು. ದೇಶದ ಅತ್ಯಂತ ಹಿಂದುಳಿದ ಕೆಲ ಭಾಗಗಳಲ್ಲಿ ಪ್ರಬಲವಾಗಿ ಕಾಲೂರಿ ಅದರಆಧಾರದ ಮೇಲೆ ಕಾಂಗ್ರೆಸ್‌ಗೆ ಪರ್ಯಾಯವಾಗಲು ನಿರಂತರವಾಗಿ ಪ್ರಯತ್ನಿಸುತ್ತಿದೆ. ಇದು ದೇಶವನ್ನು ಹಿಂದಕ್ಕೊಯ್ಯುವ ಪ್ರತಿಗಾಮಿ ರಾಜಕೀಯದ ಮೂಲಕ ಗುತೇದಾರಿ ಬಂಡವಾಳಶಾಹಿಗಳು ಹಾಗೂ ಪಾಲೇಗಾರಿ ಭೂಮಾಲಕ ಧಣಿಗಳು ದೇಶವನ್ನು ತಮ್ಮ ಹಿಡಿತದಲ್ಲಿ ಉಳಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನ.

ಹೀಗೆ ಕಾಂಗ್ರೆಸ್‌ನ ದುರಾಡಳಿ... ಬದಲಿಯಾಗಿ ಮೂಡಿಬಂದ ಎರ... ಪರ್ಯಾಯಗಳು ಒಂದು ಪ್ರಜಾಸತ್ತಾ... ಜಾತ್ಯಾತೀತ ಪರ್ಯಾಯ ಮತ್ತೊಂ... ಕೋಮುವಾದಿ ಪ್ರತಿಗಾ... ಪರ್ಯಾಯ .

1996 ರ ಚುನಾವಣೆಯ ನಂ... ಕಾಂಗ್ರೆಸ್ಸೇತರ ಜಾತ್ಯಾತೀ... ಪರ್ಯಾಯಕ್ಕಾಗಿ ಸಂಯುಕ್ತ ರ... ರೂಪದಲ್ಲಿ ಮೂರನೇ ರಂಗ ಮೂ... ಬಂದಿತು. ಆದರೆ ಕಾಂಗ್ರೆಸ್... ನೀತಿಗಳಿಗೆ ಪರ್ಯಾಯವಾದ ಜನಪ... ನೀತಿಗಳನ್ನು ಪ್ರಬಲವಾಗಿ ದೇಶ... ಜನರ ಮನಸ್ಸಿನಲ್ಲಿ ಅಚ್ಚೊತ್ತುವ... ಅನುಷ್ಠಾನಕ್ಕೆ ತರದ ಕಾರಣದಿಂದ ... ರ ಚುನಾವಣೆಗಳ ನಂತ... ವಿಘಟನೆಹೊಂದಿತು. ಹೀಗಾಗಿ 99 ... ಚುನಾವಣೆಗಳಿಗೆ ದೇಶ ಸಾಗುವಾ... ಮೂರನೇ ರಂಗ ಅಸ್ತಿತ್ವದಲ್ಲಿ ಇರಲಿ... ಆದರೆ ಮೊದಲ ಸುತ್ತಿ... ಚುನಾವಣೆಗಳು ನಡೆದ ನಂ... ಬಿಜೆಪಿಯ ಪ್ರಭಾವ ಎಲ್ಲಿಯೂ ಆದ... ಹೆಚ್ಚಿನ ಸ್ಥಾನವನ್ನು ಕೊಡು... ಸಂಭಾವನೀಯತೆ ಕಾಣುತ್ತಿಲ್ಲ.

ಇಂತಹ ಸಂದರ್ಭದಲ್ಲಿ ಕೇವ... ಅಧಿಕಾರಕ್ಕಾಗಿ ಮಾತ್ರ... ಜೊತೆಗೂಡಿರುವ ಬಿಜೆಪಿಯ... ಸಹಪಕ್ಷಗಳು ಬಿಜೆಪಿ ಕೂ... ಅಧಿಕಾರದ ಗದ್ದುಗೆ ಏರುವುದಿ... ಎನ್ನುವ ಸಂದರ್ಭದಲ್ಲಿಯೂ ಅವ... ಜೊತೆಗೇ ಉಳಿಯುತ್ತಾರೆಯೇ ಎ... ಪ್ರಶ್ನೆ ಚುನಾವಣೆಯ ನಂತ... ಉದ್ಭವಿಸುತ್ತದೆ. ಅದೇ ಸಂದರ್ಭ... ದೇಶದ ವಾಸ್ತವ ಪರಿಸ್ಥಿತಿಯ... ಅರಿತುಕೊಳ್ಳದ ಕಾಂಗ್ರೆಸ್ ಒಂ... ಪಕ್ಷದ ಆಡಳಿತವನ್ನು ನಡೆಸ... ಭ್ರಮೆಯಲ್ಲಿಯೇ ಮುಳುಗಿರ... ಹಿನ್ನೆಲೆಯಲ್ಲಿ ಚುನಾವಣೆ... ಫಲಿತಾಂಶಗಳು ಪ್ರಕಟವಾದ ನಂ... ಮೂರನೇಯ ರಂಗ ಪ್ರಶ್ನೆ ಮ... ಪ್ರಸ್ತುತವಾಗುವ ಎಲ್ಲಾ ಸೂಚನೆಗ... ಕಾಣುತ್ತಿವೆ.



ಕೃಪೆ: ಜನವಾಹಿ...

ಬಿಜೆಪಿ ಕೂಟದ ಆಟ ನಡೆಯದು

ಅಕ್ಟೋಬರ್ 3ರ ಮತದಾನ ಐದನೆಯ ಸುತ್ತಿನದು. ಅತ್ಯಂತ ನಿರ್ಣಾಯಕ, ಹಾಗೂ ದೇಶದ ಭವಿಷ್ಯತ್ತಿನ ಸೂಚಕ ಎಂಬುದನ್ನು ವರದಿಗಳು ಹೇಳಿವೆ.

ಜನರಿಂದ ಹಿಂದುತ್ವದ ನಿರಾಕರಣೆ

ಬಿಜೆಪಿಯ ಅಬ್ಬರದ ಪ್ರಚಾರಕ್ಕೆ ಮಿತಿಯೆಂಬುದೇ ಇಲ್ಲ. ಇದು ಕೊಚ್ಚಿಕೊಂಡ ಬಡಾಯಿ ಬಯಲಾಗುವಂತೆ ನಾಲ್ಕು ಸುತ್ತುಗಳಲ್ಲಿಯೂ ಜನರ ನಡುವೆ ಅವರ ವಿರುದ್ಧದ ಮನೋಭಾವವೇ ವ್ಯಕ್ತಗೊಂಡಿತು. ತಮ್ಮ ಮಿತಿಗಳ ಬಗ್ಗೆ ಬಿಜೆಪಿಗೂ ಅರಿವಿದೆ. ಭಾರತದ ವಿಶಾಲ ಜನ ಸಮೂಹಕ್ಕೆ ತನ್ನ 'ಹಿಂದುತ್ವ'ದ ಸಿದ್ಧಾಂತ ಒಪ್ಪಿಗೆ ಇಲ್ಲ ಎಂಬುದೂ ತಿಳಿದಿದೆ. 1998ರ ತಮ್ಮ ಕೋಮುವಾದಿ ಚುನಾವಣಾ ಪ್ರಣಾಳಿಕೆಯನ್ನು ಅಧಿಕಾರಕ್ಕೆ ಬಂದ ಕೂಡಲೇ ಮುಚ್ಚಿಟ್ಟರು. ತಮ್ಮ ಸರ್ಕಾರದ ರಾಷ್ಟ್ರೀಯ ಕಾರ್ಯಸೂಚಿಯನ್ನು ಪ್ರಕಟಿಸಿದರು. ಈ ಬಾರಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕೂಟ'ವನ್ನು ರಚಿಸಿಕೊಂಡು ಸಾಮಾನ್ಯ ಚುನಾವಣಾ ಪ್ರಣಾಳಿಕೆಯನ್ನು ಪ್ರಕಟಿಸಿದೆ. ಬಹುತೇಕ ಭಾಗೀದಾರ ಪಕ್ಷಗಳು ತಮ್ಮದೇ ಪ್ರಣಾಳಿಕೆ ಹೊಂದಿಲ್ಲ. ಆದರೆ ಇದು ಬಿಜೆಪಿಯ ಕರಾಮತ್ತುಗಳನ್ನು ಮರೆಮಾಚುವ ಹೊದಿಕೆಯಾಗಿದೆ. ಒಂದೆಡೆ, ಬಿಜೆಪಿಯ ಭಾಗಿದಾರರು ಬಿಜೆಪಿಯ ಕಾರ್ಯಕ್ರಮ ಮತ್ತು ನೀತಿಗಳಿಂದ ದೂರ ನಿಂತಿದ್ದಾರೆ. ಮತ್ತೊಂದೆಡೆ ಬಿಜೆಪಿ ತನ್ನ ಇತರ ರಕ್ತ ಸಂಬಂಧಿಗಳಾದ ಆರ್.ಎಸ್.ಎಸ್. ಬಜರಂಗದಳ, ವಿಶ್ವಹಿಂದೂ ಪರಿಷತ್ ಮುಂತಾದವುಗಳ ಮೂಲಕ ತನ್ನದೇ ನಿಜವಾದ ಅಜೆಂಡಾವನ್ನು ಮುಂದೊಡ್ಡುತ್ತಿದೆ. ಅಯೋಧ್ಯ, ಮಥುರಾ, ಕಾಶಿಗಳಲ್ಲಿನ ಮೂರು ದೇವಸ್ಥಾನಗಳನ್ನು ಹಿಂದುಗಳಿಗೆ ಮುಸ್ಲಿಂರು ಒಪ್ಪಿಸಬೇಕು ಎಂದು ಆರ್.ಎಸ್.ಎಸ್.ನ ಮುಖ್ಯಸ್ಥ ರಾಜೇಂದ್ರಸಿಂಗ್ ಹೇಳುತ್ತಿದ್ದಾರೆ. ಇದು ತಮ್ಮ ಬೇಡಿಕೆಯಲ್ಲ ಎಂದು ಬಿಜೆಪಿ ನಾಯಕರು ಹೇಳಬಲ್ಲರೇ? ಇಲ್ಲ. ಆರ್.ಎಸ್.ಎಸ್. ಬಿಜೆಪಿಯ ಮುಖ್ಯ ಅಂತಸತ್ವವೇ ಆಗಿದೆ. ದ್ವಿಸದಸ್ಯತ್ವದ ಪ್ರಶ್ನೆಯಾಧಾರದಲ್ಲೇ ಜನತಾಪಕ್ಷವು 1979ರಲ್ಲಿ ವಿಭಜನೆ ಆದದ್ದನ್ನೂ ಅವರು ನೆನಪಿಸಿಕೊಳ್ಳುವರೋ? ಅಂದಿನ ಜನಸಂಘದ ಸದಸ್ಯರು ಆರ್.ಎಸ್.ಎಸ್.ನಿಂದ ತಮ್ಮನ್ನು ಪ್ರತ್ಯೇಕಗೊಳಿಸಿಕೊಳ್ಳಲು ನಿರಾಕರಿಸಿದರು. ಮುಂದೆ ಅವರೇ ಭಾರತೀಯ ಜನತಾಪಕ್ಷವನ್ನು ರಚಿಸಿದರು.

ಎನ್.ಡಿ.ಎ. ಎಂಬ ಪರಸ್ಪರ ವಿರೋಧಿಕೂಟ

ನಂತರ ಶತ ಪ್ರಯತ್ನಗಳನ್ನು ನಡೆಸಿದರೂ ಅಧಿಕಾರಗಳಿಸಲು ಆಗಲಿಲ್ಲ. ಆದರೀಗ ಗದ್ದುಗೆಗೆ ಏರಿದ್ದೇ ತಡ ಅದನ್ನು ಉಳಿಸಿಕೊಳ್ಳಲು ಆಡಿದ ಆಟಗಳಿಗೆ ಲೆಕ್ಕವಿಲ್ಲ. ಸಂದರ್ಭ ಸಾಧಕ ನಿಲುವುಗಳ ವ್ಯಕ್ತಿಗಳು ಮತ್ತು ಪಕ್ಷಗಳ ಅರೆ-ಬರೆ ಸಮೀಕರಣ ಎನ್.ಡಿ.ಎ ಆಗಿದೆ. ಹಿಂದೆ ಮಂಡಲ್ ಕಮಿಷನ್‌ನ ಸಾಮಾಜಿಕ ನ್ಯಾಯ ಶಿಫಾರಸುಗಳನ್ನು ಜಾರಿಗೊಳಿಸ ಹೊರಟಾಗ, ಬಿಜೆಪಿಯೊಂದಿಗೆ ಹಣಾಹಣಿಗೆ ಇಳಿದ ಕೆಲವು ಮಹನೀಯರು ಮತ್ತು ಪಕ್ಷಗಳು ಇದೀಗ ಬಿಜೆಪಿ ಕಂಪನಿಯಲ್ಲಿ ಜಾಗ ಗಿಟ್ಟಿಸಿಕೊಂಡಿದ್ದಾರೆ. ಮಂಡಲ್ ಕಮಿಷನ್ ಶಿಫಾರಸ್ಸಿಗೆ ವಿರುದ್ಧವಾಗಿ, ಅಂದಿನ ಬಿಜೆಪಿ ಅಧ್ಯಕ್ಷರಾದ ಎಲ್.ಕೆ. ಆಡ್ವಾನಿಯವರು ಬಾಬ್ರಿ ಮಸೀದಿ ಜಾಗದಲ್ಲೇ ರಾಮಮಂದಿರ ಕಟ್ಟುವುದಾಗಿ ಸಾರಿ ರಥಯಾತ್ರೆಯನ್ನು ಆರಂಭಿಸಿದರು ಎಂಬುದನ್ನು ನೆನಪಿಸಿಕೊಳ್ಳಬೇಕು. ಮುಂದೆ ಬಿಹಾರದ ಸಮಷ್ಟಿಪುರದಲ್ಲಿ ರಥಯಾತ್ರೆ ತಡೆದು ಅಡ್ವಾನಿಯನ್ನು ಬಂಧಿಸಿದ್ದು, ಅದೇ ಕಾರಣವೊಡ್ಡಿ ವಿ.ಪಿ.ಸಿಂಗ್ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಬಿಜೆಪಿ ವಾಪಾಸು ಪಡೆದದ್ದು ತಿಳಿದ ವಿಷಯ. ನಿನ್ನೆ-ಮೊನ್ನೆಯವರೆಗೂ ಬಿಜೆಪಿ ತಮ್ಮ ಶತ್ರುವೆಂದೇ ಬಣ್ಣಿಸುತ್ತಿದ್ದವರು ಇದೀಗ ಅವರ ಆಶ್ರಯದಲ್ಲೇ ಬೀಡುಬಿಟ್ಟಿದ್ದಾರೆ.

ಬಿಜೆಪಿ ಕೂಟದ ನೆಲೆ ವಿಸ್ತಾರವಾಗುತ್ತಿಲ್ಲ

ಅದೇನೇ ಇರಲಿ, ದೇಶದ ಜನ ಸಮೂಹದಲ್ಲಿ ಉತ್ಸಾಹ ಮತ್ತು ದೃಢ ವಿಶ್ವಾಸ ತುಂಬಿ, ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುವಲ್ಲಿ ಬಿಜೆಪಿ ಮತ್ತು ಎನ್.ಡಿ.ಎ ಕೂಟ ಯಶಸ್ವಿಯಾಗಲಿಲ್ಲ ಎಂಬುದನ್ನು ಈಗ ನಡೆದಿರುವ ನಾಲ್ಕು ಸುತ್ತಿನ ಮತದಾನಗಳು ಎತ್ತಿತೋರಿಸಿವೆ. ಚುನಾವಣಾ ಫಲಿತಾಂಶಗಳು ಪ್ರಕಟವಾಗಿ ಬಿಜೆಪಿ-ಕೂಟ ಅಧಿಕಾರಗಳಿಸುವ ಸ್ಥಿತಿಯಲ್ಲಿಲ್ಲವೆಂಬುದು ಸ್ಪಷ್ಟವಾಗುತ್ತಿರುವಂತೆ ಅಥವಾ ತಮ್ಮ ಆಕಾಂಕ್ಷೆಯಂತೆ ಅಧಿಕಾರದಲ್ಲಿ ಪಾಲು ಪಡೆಯಲಾರದೇ ಹೋಗುವೆವು ಎಂದಾದಾಗ, ಅವರ ಕೂಟದಿಂದ ಹೊರಬೀಳುವುದು ನಿಶ್ಚಿತ. ಬಿಜೆಪಿಯ ಮುಖ್ಯ ಭಾಗಿದಾರನಾಗಿದ್ದ ಎ.ಐ.ಎ.ಡಿ.ಎಂ.ಕೆ. ಯನ್ನು ತನ್ನ ಕೂಟದಲ್ಲಿರಿಸಿಕೊಳ್ಳಲು ಬಿಜೆಪಿ ವಿಫಲವಾದ ಅನುಭವ ತೀರಾ ಇತ್ತೀಚಿನದು. ಕೊನೆಗೆ 13 ತಿಂಗಳ ವಾಜಪೇಯಿ ಸರ್ಕಾರ ಪತನವಾಗಬೇಕಾಯಿತು. ಆದರೆ ಈ ಬಾರಿ ಬಿಜೆಪಿಗೆ ಅಂತಹ ಅವಕಾಶವೂ ಒದಗಿಬರಲಾರದು.

ಇಬ್ಬರು ವ್ಯಕ್ತಿಗಳ ಚುನಾವಣೆ

ಮತದಾರರ ಮುಂದೆ ಹೋಗುವಾಗ, ಬಿಜೆಪಿಯ 'ಪ್ರಚಾರ ತಜ್ಞರು' ಇಡೀ ಚುನಾವಣಾ ಹೋರಾಟವನ್ನು ಪ್ರಧಾನಿ ಹುದ್ದೆಗಾಗಿ ಇಬ್ಬರು ವ್ಯಕ್ತಿಗಳ ಹೋರಾಟವೆಂಬುದಾಗಿ ಬಿಂಬಿಸಿದರು. 'ಅಟಲ್' ವಿರುದ್ಧ 'ಸೋನಿಯಾ' ಎಂದರು. ಇದು ಅವರ ಧೋರಣೆಗೆ ಒಗ್ಗುವಂತಹುದ್ದು. ಜನತೆಯ, ದೇಶದ ಎಲ್ಲಾ ನಿಜವಾದ ಪ್ರಶ್ನೆಗಳನ್ನು ಹಿಂದಕ್ಕೆ ತಳ್ಳಿ, ತುಳಿದು, ವಾಜಪೇಯಿ ಮುಖವಾಡವನ್ನೇ ತೋರಿಸಿದರು. ಜನತೆ ಹಾಗೂ ಪ್ರಜಾಸತ್ತಾತ್ಮಕ ಸಂಸ್ಥೆಗಳು, ಅಥವಾ ಅಂತಹ ವೇದಿಕೆಗಳನ್ನು ನಿರಾಕರಿಸಿ ವ್ಯಕ್ತಿಗಳಿಗೆ ಅತಿಯಾದ ಪ್ರಾಧಾನ್ಯತೆ ನೀಡುವುದು ಫ್ಯಾಸಿಸ್ಟ್ ಸಂಘಟನೆಗಳ ಕ್ರಮವಾಗಿದೆ ಎಂಬುದನ್ನು ಅರಿಯಬೇಕು. ಬಿಜೆಪಿಯು ಆರ್.ಎಸ್.ಎಸ್.ನ ಅಂಗ ಸಂಸ್ಥೆ. ಹೀಗಾಗಿ ಪ್ರಜಾಪ್ರಭುತ್ವ ಹಾಗೂ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಗ್ಗೆ ಅದರ ಕಟು ವಿರೋಧ ಅರ್ಥವಾಗುವಂತಹುದು. ಹಿಂದೆಲ್ಲಾ ಬಿಹಾರದ ಆರ್.ಜೆ.ಡಿ ಸರ್ಕಾರವನ್ನು ಉರುಳಿಸಲು ವಿಫಲರಾಗಿದ್ದರೂ, ಪುನಃ ಅದನ್ನು ವಜಾಗೊಳಿಸುವುದಾಗಿ ಸ್ವತಃ ವಾಜಪೇಯಿಯವರೇ ಬೆದರಿಕೆ ಹಾಕಿದರು. ಚುನಾಯಿತ ಸರ್ಕಾರವನ್ನು ಉರುಳಿಸುವುದು ಸರ್ವಾಧಿಕಾರದ ಆರಾಧಕರ ಕ್ರಮ.

ಸುರ್ಜಿತ್

ಸ್ವಾತಂತ್ರ್ಯಕ್ಕೆ ದ್ರೋಹ ಬಗೆದ ಸ್ವಾತಂತ್ರ್ಯ ಹೋರಾಟಗಾರರು ಎಂದು ಬಿಂಬಿಸಲು ಬಿಜೆಪಿ ಪೋಸ್ಟರ್‌ಗಳನ್ನು ಹೊರತಂದಿತು. ಆದರೆ ಸ್ವಾತಂತ್ರ್ಯ ಹೋರಾಟಗಾರರನ್ನು ಆರೋಪಿಗಳೆಂದು ಸಾಕ್ಷಿ ನೀಡಿದ ಅವರ ಕುಖ್ಯಾತ ಪಾತ್ರ ತಿಳಿಯದವರಾರು? ವಾಜಪೇಯಿ ಮಾತ್ರವಲ್ಲ ಅವರ ಇತರೆ ಯಾವ ಬಿಜೆಪಿ ಸಹವರ್ತಿಗಳೂ, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಪುರಾವೆ ಒದಗಿಸಲು ಸಾಧ್ಯವೇ ಇಲ್ಲ.

ಪ. ಬಂಗಾಳದ ಬಗ್ಗೆ ಅಸಂಬದ್ಧ ದೂಷಣೆ

ಈ ಸ್ವಯಂ ಸೃಷ್ಟಿಯ ಸ್ವಾತಂತ್ರ್ಯ ಹೋರಾಟಗಾರ ವಾಜಪೇಯಿ, ಪ.ಬಂಗಾಳದ ಚುನಾವಣಾ ಪ್ರಚಾರದಲ್ಲಿ ಬರಬರುತ್ತಾ ಅಸಂಬದ್ಧ ಭಾಷೆಯನ್ನೇ ಹರಿಬಿಟ್ಟರು. ಪ.ಬಂಗಾಳದಲ್ಲಿನ ಎಲ್ಲಾ 'ಕಾಯಿಲೆ'ಗಳಿಗೂ ಎಡರಂಗ ಸರ್ಕಾರವನ್ನು ಎಗ್ಗಿಲ್ಲದೇ ದೂಷಿಸಿದರು. ಇಡೀ ದೇಶದಲ್ಲಿ ಭೂ ಸುಧಾರಣೆಯನ್ನು ಅತ್ಯಂತ ಯಶಸ್ವಿಯಾಗಿ ಜಾರಿಗೆ ತಂದ ಕೀರ್ತಿ ಪ.ಬಂಗಾಳ, ಕೇರಳ, ತ್ರಿಪುರಾದ ಎಡ ನೇತೃತ್ವದ ಸರ್ಕಾರಗಳು ಮಾತ್ರ ಎಂಬುದನ್ನು ಬೇಕೆಂದೇ ಮರೆತರು. ಆಡಳಿತ ವಿಕೇಂದ್ರಿಕರಣದ ಯಶಸ್ಸು, ಹಾಗೂ ಸಮರ್ಥ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸಾಧ್ಯತೆ ಈ ರಾಜ್ಯಗಳಲ್ಲಿ ಬಿಟ್ಟರೆ ಬೇರೆ ಎಲ್ಲಿದೆ? ಉಳಿದ ರಾಜ್ಯಗಳು ಬರೀ ಪ್ರಚಾರಿಸಿಕೊಳ್ಳಬಹುದಷ್ಟೇ.

ಐದನೇ ಸುತ್ತಿನಲ್ಲಿ ಬಿಜೆಪಿ ಬಲಾಬಲ

ಐದನೆ ಸುತ್ತಿನಲ್ಲಿ 146 ಸ್ಥಾನಗಳಿಗೆ ಮತದಾನ ಆಗಲಿದೆ. ಇದು ಪ. ಬಂಗಾಳ, ತ್ರಿಪುರಾ ಮತ್ತು ಈಶಾನ್ಯ ಭಾರತದ ಒಳಗೊಂಡಿದೆ. ಇಲ್ಲಿ ಬಿಜೆಪಿ ಶಕ್ತಿ ಅತ್ಯಲ್ಪ. ಒರಿಸ್ಸಾದಲ್ಲಿ ಕಾಂಗ್ರೆಸ್‌ನ ಸಂಘಟನಾ ಸ್ಥಿತಿ ಕಷ್ಟದಲ್ಲಿದೆ. ಜನತಾದಳ ಹೋಳಾಗಿದೆ. ಉತ್ತರ ಪ್ರದೇಶ, ಬಿಹಾರದಲ್ಲಿ ಸ್ಪರ್ಧೆ ಬಿರುಸಿನದ್ದಾಗಿದೆ. ಬಿಹಾರ ಸರ್ಕಾರದ ವಿರುದ್ಧ ಬಿಜೆಪಿ ಮತ್ತು ಸಮತಾ ಪಕ್ಷಗಳು ಎಗ್ಗಿಲ್ಲದೇ ಆರೋಪಗಳ ಸುರಿಮಳೆಗರೆದರು. ಚುನಾವಣಾ ಆಯೋಗದ ನೈತಿಕತೆಯನ್ನು ಪ್ರಶ್ನಿಸಿದರು, ದೂಷಿಸಿದರು, ಬಿಜೆಪಿ ಕೂಟ ಎಷ್ಟೊಂದು ಚಿಂತಾಕ್ರಾಂತರಾಗಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ. ಎಡ ಮತ್ತು ಮತ ನಿರಪೇಕ್ಷ ಶಕ್ತಿಗಳ ಹಿಂದೆ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಪಂಗಡಗಳು ದೃಢವಾಗಿ ಅಣಿನೆರೆದಿವೆ. ಉತ್ತರ ಪ್ರದೇಶದಲ್ಲಂತೂ ಬಿಜೆಪಿಯ ನೆಲೆ ದೊಡ್ಡ ಪ್ರಮಾಣದಲ್ಲಿ ಅವರ ಕೈ ಬಿಟ್ಟು ಸ್ಥಳಾಂತರಗೊಂಡಿದೆ. ಇದು ಚುನಾವಣಾ ಫಲಿತಾಂಶದಲ್ಲಿ ಪ್ರತಿಫಲನ ಆಗಿಯೇ ತೀರುತ್ತದೆ.

ದೇಶದ ಭವಿಷ್ಯತ್ತನ್ನು ರೂಪಿಸುವ ಅಂತಿಮ ಸುತ್ತಿನ ಮತದಾನ ಮುಗಿಯುವುದನ್ನೇ ದೇಶದ ಜನತೆ ಎದುರು ನೋಡುತ್ತಿದ್ದಾರೆ. ಈ ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಮಿತ್ರಕೂಟಕ್ಕೆ ತಕ್ಕ ಪಾಠವನ್ನು ಜನತೆ ಕಲಿಸಲಿ. ದೇಶದ ಐಕ್ಯತೆ ರಕ್ಷಿಸಲಿ.

ಪರ್ಯಾಯ ಪಕ್ಷವೊಂದನ್ನು ಸ್ವಾಗತಿಸಿದ ಹಾನಗಲ್ ಮತದಾರರು

ಉದಾಸಿಯ ನಿದ್ದೆಗೆಡಿಸಿದ ಪ್ರಚಾರವೈಖರಿ

ಹಾನಗಲ್ ಕ್ಷೇತ್ರದ ಜನರಿಗೆ ಕೃಷಿಕೂಲಿಕಾರರ ಸಂಘಗಳ ಮೂಲಕ "ಕುಡುಗೋಲು ಸುತ್ತಿಗೆ"ಯ ಪರಿಚಯ ಇದೆ. ಆದರೆ ಕುಡುಗೋಲು ಸುತ್ತಿಗೆ ನಕ್ಷತ್ರದ ಚಿನ್ಹೆ ಇರುವ ಕೆಂಬಾವುಟ ಇಡೀ ವಿಧಾನ ಸಭಾ ಕ್ಷೇತ್ರದ ತುಂಬಾ ಹಾರಾಡಿದ್ದು ಮಾತ್ರ ಇದೇ ಮೊಟ್ಟಮೊದಲ ಬಾರಿ. ಹಾಗಾಗಿ ಎಲ್ಲರ ಕಣ್ಣು ಇವರ ಮೇಲೆ ನೋಡಿದ ಅನೇಕರ ಮನಸ್ಸಿನಲ್ಲಿ ಅನೇಕ ಅನಿಸಿಕೆಗಳು "ಯ್ಯಾವುದಿ ಹೊಸ ಪಕ್ಷ? ಇದು ಸ್ವತಂತ್ರ ಅಭ್ಯರ್ಥಿಯುದೆ? ಇವರಾದರೂ ನಮ್ಮ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬಹುದೆ? ಇದು ಕಮ್ಯುನಿಸ್ಟ್ ಪಕ್ಷವಲ್ಲವೆ? ಜ್ಯೋತಿ ಬಸು ಅವರ ಪಕ್ಷವಲ್ಲವೆ? ಹಾನಗಲ್ಲಿನಲ್ಲಿ ಬಡರೈತರಿಗೆ ಭೂಮಿಕೊಡಿಸಲು ಹೋರಾಡಿದ ಸಂಘದವರಲ್ಲವೆ ಇವರು? ಹೀಗೆ ಹೀಗೆ ಹತ್ತಾರು.

ಸುಮಾರು 140 ಹಳ್ಳಿಗಳಿರುವ ಹಾನಗಲ್ ಕ್ಷೇತ್ರದಲ್ಲಿ ಮೊಟ್ಟಮೊದಲಬಾರಿಗೆ ಪಕ್ಕೀರಪ್ಪ ಹೊತನಳ್ಳಿಯವರು ಸಿಪಿಐ(ಎಂ)ನ ಅಭ್ಯರ್ಥಿಯಾಗಿ ಚುನಾವಣೆಯ ಕಣಕ್ಕೆ ಇಳಿದಾಗ ಅನೇಕರು ಇದನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಇವರು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂದೇ ಇತರ ಪ್ರಮುಖ ರಾಜಕೀಯ ಪಕ್ಷಗಳು ಅಂದುಕೊಂಡವು. ಆದರೆ ನಮ್ಮ ರೈತಸಂಘದ ಸದಸ್ಯರು, ಕೃಷಿಕೂಲಿಕಾರ ಸಂಘಟನೆಯ ಮುಂದಾಳುಗಳು ಮತ್ತು ಸದಸ್ಯರು ಆ ಮಾತನ್ನು ಸುಳ್ಳುಮಾಡಬೇಕೆಂದು ದುಡಿದರು. ತಮ್ಮ ಮತವನ್ನು ಒಬ್ಬ ಭ್ರಷ್ಟನಿಗೆ ಹಾಕದೇ ಮೊದಲಬಾರಿಗೆ ಅವನ್ನು ಸಾರ್ಥಕಗೊಳಿಸಿಕೊಳ್ಳುವ ಹೆಮ್ಮೆ ಅವರದಾಯಿತು.

ಈವರೆಗೆ ಹಾನಗಲ್ಲಿನಲ್ಲಿ ಎರಡೇ ಪಕ್ಷಗಳು ಚುನಾವಣೆಯಲ್ಲಿ ಇರುತ್ತಿದ್ದವು. ಜನತಾದಳದಿಂದ ಈಗ ಸಂಯುಕ್ತಜಣದಿಂದ ಉದಾಸಿ ಮತ್ತು ತಹಶಿಲ್ದಾರರ ಮುಂದೆ ಯಾರೂ ನಿಲ್ಲುವ ಮನಸ್ಸು ಮಾಡುತ್ತಿರಲಿಲ್ಲ. ಕಾಂಗ್ರೆಸ್ಸಿನಿಂದ ನಿಂತರೂ ಇವರ ಗೂಂಡಾಗಿರಿ ಹಣದ ಥೈಲಿಯ ಮುಂದೆ ಮಸುಕಾಗಿ ಹೋಗಬೇಕಾಗಿತ್ತು. ಹಾಗಾಗಿ ಇಡೀ ಕ್ಷೇತ್ರವನ್ನು ಗುತ್ತಿಗೆ ಪಡೆದ ಪಾಳೆಯಗಾರರಂತೆ ಮರೆಯುತ್ತಿದ್ದವರಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮೊದಲ ಎಚ್ಚರಿಕೆ ಕೊಟ್ಟಿತು. ಜನಕೂಡ ಎಷ್ಟು ಸಂತೋಷಗೊಂಡಿದ್ದರೆಂದರೆ "ನೀವು ಗೆಲ್ಲುತ್ತಿರೋ ಇಲ್ಲವೋ ಎನ್ನುವುದು ಬೇರೆ ಪ್ರಶ್ನೆ. ಆದರೆ ಅವರ ಎದುರು ನಿಲ್ಲುವ ಸಾಹಸ ಮಾಡಿದಿರಲ್ಲ; ಅವರ ತಪ್ಪುಗಳನ್ನು ಬಹಿರಂಗವಾಗಿ ಹೇಳಲು ಮುಂದಾದಿರಲ್ಲಾ... ನಾವು ನಿಮ್ಮನ್ನು ಬೆಂಬಲಿಸುತ್ತೇವೆ" ಎಂದು ಬೆನ್ನು ತಟ್ಟಿಕಳುಹಿಸಿದರು.

ಸುಮಾರು 70-80 ಹಳ್ಳಿಗಳಲ್ಲಿ ಕೃಷಿ ಕೂಲಿಕಾರರ ಸಂಘಗಳ ಮೂಲಕ ನಮ್ಮ ಪಕ್ಷದ ಪರಿಚಯ ಇದೆ. ಹಾನಗಲ್ ಕ್ಷೇತ್ರದ ತುಂಬಾ ಸುಮಾರು 8000 ಎಕರೆ ಅರಣ್ಯ ಭೂಮಿಯನ್ನು ಕೆಂಬಾವುಟದ ಅಡಿಯಲ್ಲಿ ಒತ್ತುವರಿ ಮಾಡಿ ಅನೇಕ ರೈತರು ಸಾಗುವಳಿಮಾಡುತ್ತಿದ್ದಾರೆ. ಹಾಗಾಗಿ 70-80 ಹಳ್ಳಿಯಲ್ಲಿ ಪ್ರಬಲ ಬೆಂಬಲ ಇದ್ದರೂ ಉಳಿದ 70-75 ಹಳ್ಳಿಗಳಿಗೆ ಪಕ್ಷವನ್ನು ಪರಿಚಯ ಮಾಡಿಕೊಡುವ ಹೊಣೆ ಪ್ರಚಾರಕ್ಕೆ ಹೊರಟ ಕಾರ್ಯಕರ್ತರ ಮೇಲಿತ್ತು.

ದಿನಾಂಕ 29 ರಿಂದ ಎರಡು ಪ್ರತ್ಯೇಕ ವಾಹನಗಳಿಗೆ ಮೈಕ್ ಏರಿಸಿ ಚುನಾವಣಾ ಯುದ್ಧ ಸಾರುವ ಕಾಯಕಕ್ಕೆ ಮುನ್ನುಗ್ಗಿತು. ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐನ ವಿದ್ಯಾರ್ಥಿ ಯುವಜನರ ತಂಡ ಒಂದಾದರೆ ಅಭ್ಯರ್ಥಿ ಪಕ್ಕೀರಪ್ಪನವರು ಮತ್ತು ರೈತ, ಕೃಷಿಕೂಲಿಕಾರ ಮುಂದಾಳುಗಳ ತಂಡ ಇನ್ನೊಂದು ಕೇವಲ ಎರಡೇ ಎರಡು ವಾಹನ ನಮ್ಮ ಪ್ರಚಾರಕ್ಕೆ ಸಿದ್ಧವಾಗಿದ್ದರೆ ಎದುರ ಪಕ್ಷಗಳ 40-50 ವಾಹನಗಳು, ಹತ್ತಾರು ಮೈಕ್‌ಗಳು ಊರಿಗೆ 10-12 ಬ್ಯಾನರ್‌ಗಳು, ಬಣ್ಣಬಣ್ಣದ ಪೋಸ್ಟರ್‌ಗಳು, ಬಹುವರ್ಣದ ಮನವಿ ಪತ್ರ, ಸಾಧನೆಯನ್ನು ಹೇಳುವ ಪುಸ್ತಕಗಳ ಮುದ್ರಣ, ನೂರಾರು ಬೈಕ್‌ಗಳು, ಮೆರವಣಿಗೆಗೆ ಸಭೆಗೆ ಜನರನ್ನು ತರುವ ಟ್ರಾಕ್ಟರ್, ಲಾರಿ, ಸಾರಾಯಿ ಹಂಚುವ ಟ್ರಾಕ್ಸ್ ಹೀಗೆ ವಾಹನಗಳ ದಂಡೇ ಇತ್ತು. ಲಕ್ಷಾಂತರ ರೂಪಾಯಿಗಳು ನೀರಿನಂತೆ ಚೆಲ್ಲಿದರು ಕೆಲಸಕ್ಕೆ ಹರಿಯುತ್ತಿತ್ತು. ಎಲ್ಲಾ ಬಾರುಗಳು ಮಿಲ್ಟ್ರಿ ಹೋಟೇಲ್‌ಗಳು ತುಂಬಿದ್ದವು. ಅವರ ಕಾರ್ಯಕರ್ತರಿಂದ.


ಪ್ರತಿದಿನ ಕನಿಷ್ಠ 7-10 ಹಳ್ಳಿಗಳಿಗೆ ಟ್ರಾಕ್ಸ್ ಹೋಗುತ್ತಿತ್ತು. ಪ್ರತಿಹಳ್ಳಿಯಲ್ಲಿ ಕನಿಷ್ಠ ಎರಡು ಸಭೆ, ಭಾಷಣ ಹಾಡು ನಡೆಯುತ್ತಿತ್ತು. ಇದಕ್ಕಿಂತ ಹೆಚ್ಚಾಗಿದ್ದೂ ಇದೆ.

ಮುತ್ತಳ್ಳಿ, ಬಾಳಂಬೀಡು ಹನುಮನಕೊಪ್ಪ, ತಿಳುವಳ್ಳಿ, ಜಂಗಿನ ಕೊಪ್ಪ, ವರ್ದಿ, ಕಾಡಶೆಟ್ಟಿಹಳ್ಳಿ, ಯಳ್ಳೂರು ಮುಂತಾದ ನೂರಾರು ಹಳ್ಳಿಗಳಲ್ಲಿ ಹಾಡಿನ ಮೂಲಕ ಗಮನ ಸೆಳೆದವರು ರಾಮದುರ್ಗದ

ಪುಟ 10 ನೋಡಿ



ಚುನಾವಣೆ-99



ಜಾರ್ಜ್ ಫರ್ನಾಂಡಿಸರ ಇನ್ನೊಂದು ಸುಳ್ಳು!

ಉಸ್ತುವಾರಿ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್ ಸುಳ್ಳು, ಅಸತ್ಯಗಳನ್ನು ಹರಡುವಲ್ಲಿ ಹೊಸ-ಹೊಸ ದಾಖಲೆಗಳನ್ನೇ ನಿರ್ಮಿಸುತ್ತಿದ್ದಾರೆ. ಮೊದಲು ಭಾರತ ನೆಲದಲ್ಲಿ ಚೀಣೀ ಹೆಲಿಕಾಪ್ಟರ್ ನಿಲ್ದಾಣವಿದೆ ಎಂದರು. ಅದು ಸುಳ್ಳೆಂದು ಬಯಲಾಯಿತು. ಕಾರ್ಗಿಲ್‌ನಲ್ಲಿ ತಾನು ನೀಡಿದ ಪ್ರತಿಯೊಂದು ಹೇಳಿಕೆಯನ್ನು ನಿರಾಕರಿಸುವುದೇ ಅವರ ಕೆಲಸವಾಯಿತು. ಈಗ ಬಿಹಾರದ ತನ್ನ ಚುನಾವಣಾ ಕ್ಷೇತ್ರದಲ್ಲಿ ಹೆಚ್ಚುವರಿ ಖೋಟಾ ಮತಪತ್ರಗಳು ಮುದ್ರಣಗೊಂಡಿವೆ ಎಂದು ಗುಪ್ತಚರ ಇಲಾಖೆಯ ಮುಖ್ಯಸ್ತರು ಹೇಳಿರುವುದಾಗಿ ಆಪಾದನೆ ಮಾಡಿದ್ದಾರೆ.

ಸೋಲು ಖಚಿತವೆಂಬುದನ್ನು ಕಂಡ ಫರ್ನಾಂಡೀಸ್ ಬಿಹಾರ ಮತ್ತು ಪಶ್ಚಿಮ ಬಂಗಾಳ ಸರಕಾರಗಳು ಖೋಟಾ ಮತ ಪತ್ರಗಳನ್ನು ಮುದ್ರಿಸುವ ಪಿತೂರಿ ನಡೆಸಿವೆ ಎಂದು ಚುನಾವಣಾ ಆಯೋಗಕ್ಕೆ ಬರೆದರು. ಗುಪ್ತಚರ ಇಲಾಖೆಯ ನಿರ್ದೇಶಕರು ಇದನ್ನು ದೃಢೀಕರಿಸಿದ್ದಾರೆ ಎಂದು ಅವರು ತಮ್ಮ ಪತ್ರದಲ್ಲಿ ಹೇಳಿಕೊಂಡರು.

ಚುನಾವಣಾ ಆಯೋಗ ಅಮೂಲಾಗ್ರ ತನಿಖೆ ನಡೆಸಿತು. ಹೆಚ್ಚುವರಿ ಮತಪತ್ರಗಳ ಮುದ್ರಣವಾಗಿಲ್ಲ; ಅಲ್ಲದೆ ಗುಪ್ತಚರ ಇಲಾಖೆ ಫರ್ನಾಂಡೀಸರಿಗೆ ಇಂತಹ ಯಾವುದೇ ಮಾಹಿತಿ ನೀಡಿಲ್ಲ ಎಂದು ಕೇಂದ್ರ ಗೃಹ ಕಾರ್ಯದರ್ಶಿ ತಿಳಿಸಿರುವುದಾಗಿಯೂ ಚುನಾವಣಾ ಆಯೋಗ ಪ್ರಕಟಿಸಿತು. ಫರ್ನಾಂಡೀಸ್ ಇನ್ನೊಂದು ಸುಳ್ಳು ಬಯಲಾಯಿತು. ಇಂತಹ ಆಪಾದನೆ ಬಿಹಾರದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಅಸ್ತವ್ಯಸ್ತಗೊಳಿಸುವ ಪ್ರಯತ್ನವಾಗುತ್ತದೆ ಎಂದೂ ಚುನಾವಣಾ ಆಯೋಗ ಛೀಮಾರಿ ಹಾಕಿತು. ಇದೊಂದು ಗಂಭೀರ ಆಪಾದನೆ. ಇದನ್ನು ಕೇಳಿದ ಮೇಲೆ ಫರ್ನಾಂಡೀಸ್ ತನ್ನ ಉಸ್ತುವಾರಿ ಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕಾಗಿತ್ತು.

ಕೆಲವು-ಸಿನಿಕರು ಕೇಳಬಹುದು - ಎಷ್ಟು ಬಾರಿ ಶ್ರೀಯುತ ಫರ್ನಾಂಡೀಸ್ ರಾಜೀನಾಮೆ ನೀಡಬೇಕು? ಒಂದು ರೀತಿಯಲ್ಲಿ ಸರಿಯಾದ ಪ್ರಶ್ನೆಯೇ. ಲೋಕಸಭೆಯಲ್ಲಿ ಅಲ್ಪ ಮತಕ್ಕಿಳಿದಾಗ ಅವರು ಸಮಾಜದ ಇತರ ಮಂತ್ರಿಗಳೊಂದಿಗೆ ಕೆಳಗಿಳಿಯಲಿಲ್ಲವೇ? ನಂತರ ಕಾರ್ಗಿಲ್ ಬಗ್ಗೆ ವಿವಿಧ ಹೇಳಿಕೆಗಳನ್ನು ನೀಡಿದ ಮೇಲೆ, ಅದರಲ್ಲೂ ಪಾಕಿಸ್ತಾನಿ ಪ್ರಧಾನಿ ಮತ್ತು ಅಲ್ಲಿಯ ಐ.ಎಸ್.ಐ. ಈ ಅತಿಕ್ರಮಣದಲ್ಲಿ ಏನೂ ಪಾತ್ರ ವಹಿಸಲಿಲ್ಲ ಎಂಬ ಸರ್ಟಿಫಿಕೇಟ್ ನೀಡುವಾಗ, ಅತಿಕ್ರಮಣಕೋರರಿಗೆ ಹಿಂದಕ್ಕೆ ಹೋಗಲು ಸುರಕ್ಷಿತ ದಾರಿ ಒದಗಿಸಲಾಗುವುದು ಎಂದಾಗ....?

ಆದರೆ ಈ ಬಾರಿಯ ಅವರ ಆಪಾದನೆ ಇವೆಲ್ಲಕ್ಕೂ ಮುಕುಟವಿಟ್ಟಂತಿದೆ. ಸ್ವಂತ ರಾಜಕೀಯ ಅಥವಾ ಚುನಾವಣಾ ಲಾಭಕ್ಕಾಗಿ ಸಂಸದೀಯ ಪ್ರಜಾಪ್ರಭುತ್ವದ ಪ್ರತಿಯೊಂದು ಸಂಸ್ಥೆಯನ್ನು ನಾಶ ಮಾಡುವ ಫ್ಯಾಸಿಸ್ಟ್ ಮಾದರಿಯ ಮನೋಭಾವದ ಪ್ರದರ್ಶನವಿದು. ಹೇಗಾದರೂ ಅಧಿಕಾರಕ್ಕೆ ಮರಳಲು ಈ ಕೂಟ ರಾಷ್ಟ್ರಪತಿ, ನ್ಯಾಯಾಂಗ, ಚುನಾವಣಾ ಆಯೋಗ, ಸಿ.ಎ.ಜಿ. ಹಾಗೂ ಈಗ ಗುಪ್ತಚರ ವಿಭಾಗ ಯಾವುದನ್ನು ಗುರಿ ಮಾಡಲೂ ಹೇಸುತ್ತಿಲ್ಲ. ಇಂತಹವರಿಗೆ ಜನಗಳೇ ಚುನಾವಣೆಗಳಲ್ಲಿ ತಕ್ಕ ಪಾಠ ಕಲಿಸಬೇಕು.

ಫರ್ನಾಂಡೀಸ್ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಒಂದು ಕ್ರಿಮಿನಲ್ ಪಿತೂರಿಗಿಳಿದಿದೆ ಎಂದು ಹೇಳುವ ಭಂಡತನ ತೋರಿದ್ದಾರೆ. ದೇಶದಲ್ಲಿರುವ ಪ್ರತಿಯೊಬ್ಬರಿಗೂ ಗೊತ್ತು - ಒಮ್ಮೆ ಚುನಾವಣೆ ಘೋಷಣೆಯಾಯಿತೆಂದರೆ ಈ ಬಗ್ಗೆ ಏನೇ ನಿರ್ಣಯ ಕೈಗೊಳ್ಳುವುದಿದ್ದರೂ ಅದು ಚುನಾವಣಾ ಆಯೋಗ ಮಾತ್ರವೇ ಎಂದು. ಫರ್ನಾಂಡೀಸ್‌ರಿಗೂ ಇದು ಗೊತ್ತಿಲ್ಲದಿಲ್ಲ. ಆದರೂ ದುರುದ್ದೇಶಪೂರ್ವಕವಾಗಿಯೇ ಅವರು ಈ ಆಪಾದನೆ ಮಾಡಿದ್ದಾರೆ - ಅಧಿಕಾರಕ್ಕೆ ಮರಳುವ ಕಾವಿಪಡೆಗಳ ಹಗಲುಗನಸನ್ನು ಎಡಪಕ್ಷಗಳು ಮತ್ತು ಆರ್.ಜೆ.ಡಿ. ಒಟ್ಟಾಗಿ ವಿಫಲಗೊಳಿಸುತ್ತಿದ್ದಾರೆ ಎಂದು.

ನಿಜವಾಗಿ ಇನ್ನೊಂದು ರೀತಿಯ ಪಿತೂರಿ ನಡೆಯುತ್ತಿದೆ. ಅದು ಕೋಮುವಾದಿ ಶಕ್ತಿಗಳು ಭಾರತೀಯ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ವಿರುದ್ಧ ನಡೆಸಿರುವ ಪಿತೂರಿ. ಇದರಲ್ಲಿ ಫರ್ನಾಂಡೀಸ್ ಒಬ್ಬರೇ ಇಲ್ಲ. ಈ ನಿರ್ದಿಷ್ಟ ವಿಷಯದಲ್ಲಿ ಹೇಳುವುದಾದರೆ ಗುಪ್ತಚರ ಕಚೇರಿ ನೇರವಾಗಿ ಪ್ರಧಾನಮಂತ್ರಿಗಳ ಕೈಯಲ್ಲಿರುವುದರಿಂದ ವಾಜಪೇಯಿಯವರು ಯಾರು ಸುಳ್ಳು ಹೇಳುತ್ತಿದ್ದಾರೆ ಎಂದು ದೇಶಕ್ಕೆ ಸ್ಪಷ್ಟೀಕರಣ ನೀಡಬೇಕಿತ್ತು. ತನಗೆ ಮಾಹಿತಿ ನೀಡಲಾಗಿದೆ ಎನ್ನುವ ಫರ್ನಾಂಡೀಸ್ ಸುಳ್ಳು ಹೇಳುತ್ತಿದ್ದಾರೆ, ಈ ವಿವಾದದಲ್ಲಿ ತಮ್ಮ ಗುಪ್ತಚರ ಕಚೇರಿಯ ಪಾತ್ರವೇನೂ ಇಲ್ಲ ಎನ್ನುವ ಗೃಹ ಕಾರ್ಯದರ್ಶಿ ಸುಳ್ಳು ಹೇಳುತ್ತಿದ್ದಾರೆಯೇ? ಇಬ್ಬರೂ ಸತ್ಯವನ್ನಂತೂ ಹೇಳುತ್ತಿರಲಿಕ್ಕಿಲ್ಲ. ಈ ಬಗ್ಗೆ ಪ್ರಧಾನಿ ಸ್ಪಷ್ಟೀಕರಣ ನೀಡುತ್ತಿಲ್ಲವಾದರೆ ಅವರೂ ಈ ಪಿತೂರಿಯಲ್ಲಿ ಭಾಗೀದಾರರಾಗಿರಬಹುದೇ?

ಭಾರತದ ಜನತೆ ಖಂಡಿತಾ ಈ ಪಿತೂರಿಗಾರರನ್ನು ಸೋಲಿಸುತ್ತಾರೆ. ಏಕೆಂದರೆ ಇಂತಹ ಸ್ಪರ್ಧಿಗಳು ಅಧಿಕಾರ ಪಡೆಯುವುಕ್ಕೆ ಅನರ್ಹರು.

(ಪೀಪಲ್ಸ್ ಡೆಮಾಕ್ರಸಿ)

ಸುರ್ಜಿತ್ ಮೇಲೆ ತೃಣಮೂಲ-ಬಿಜೆಪಿ ಗೂಂಡಾ ದಾಳಿ

ಅಕ್ಟೋಬರ್ 3 ರ ಮತದಾನದಲ್ಲಿ ತಮ್ಮ ಪರಾಭವದ ಭೀತಿಯಿಂದ ಹತಾಶರಾದ ತೃಣಮೂಲ-ಬಿಜೆಪಿ ಕೂಟದ ಗೂಂಡಾಗಳು ಹಲ್ಲೆ ರಾಜಕೀಯವನ್ನು ನಡೆಸಿವೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರ ಮೇಲೆ ಹಲ್ಲೆ ನಡೆಸಲು ಈ ಕೂಟದ ಗೂಂಡಾಗಳು ಪ್ರಯತ್ನಿಸಿದ್ದಾರೆ.

ಉತ್ತರ 24 ಪರಗಣ ಜಿಲ್ಲೆಯಲ್ಲಿ ಸೆಪ್ಟೆಂಬರ್ 23 ರಂದು ಸುರ್ಜಿತ್‌ರವರು ಚುನಾವಣಾ ಸಭೆಗಳಲ್ಲಿ ಭಾಗವಹಿಸಲು ಹೋಗುತ್ತಿದ್ದಾಗ ಬಿರತಿ ಎಂಬಲ್ಲಿ ಅವರ ಕಾರಿನ ಮೇಲೆ ಈ ಕ್ರಿಮಿನಲ್‌ಗಳು ದಾಳಿ ನಡೆಸಿದರು. ಆ ದಿನ ಸಂಜೆ ಟಿಟಾಗಢ್‌ನಿಂದ ಬದಾನಗರ್‌ಗೆ ಹೋಗುತ್ತಿದ್ದಾಗ ಅವರ ಕಾರಿನ ಮೇಲೆ ಕಲ್ಲು ತೂರಾಟ ನಡೆಸಿದರು. ಸುರ್ಜಿತ್‌ರವರು ಅಪಾಯದಿಂದ ಪಾರಾದರೂ ಅವರ ಜೊತೆಗಿದ್ದ ಮೋಟಾರು ಸೈಕಲ್ ಸವಾರರಿಗೆ, ಹಲವು ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಗಾಯವಾಗಿದೆ.

ಸಿಪಿಐ(ಎಂ) ನ ಹಿರಿಯ ಮುಖಂಡರ ಮೇಲೆ ಈ ರೀತಿ ದಾಳಿಗಳನ್ನು ನಡೆಸಿ ಈ ಕೋಮುವಾದಿ ಕೂಟ ರಾಜ್ಯದಲ್ಲಿ ಗಲಭೆ ಎಬ್ಬಿಸುವ ಪಿತೂರಿ ನಡೆಸಿದ್ದಾರೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್ ಈ ಹಲ್ಲೆಗಳನ್ನು ಖಂಡಿಸಿದ್ದಾರೆ. ರಾಜ್ಯದ 12 ಜಿಲ್ಲೆಗಳು ಈಗ ಇತ್ತೀಚಿನ ಎರಡು ದಶಕಗಳಲ್ಲೇ ಅತಿ ತೀವ್ರವಾದ ಮಳೆಗೆ ತುತ್ತಾಗಿದ್ದರೂ ಸುರ್ಜಿತ್ ಮೇಲೆ ಗೂಂಡಾದಾಳಿಗಳ ವಿರುದ್ಧ ಎಲ್ಲೆಡೆ ಭಾರಿ ಪ್ರತಿಭಟನೆ ನಡೆದಿದೆ.

ಡಾರ್ಜಿಲಿಂಗ್‌ನಲ್ಲಿ ಸಿಪಿಐ(ಎಂ)ನದ್ದೇ ಮೇಲುಗೈ

ಡಾರ್ಜಿಲಿಂಗ್‌ನಲ್ಲಿ ಈ ಬಾರಿ ಎಡರಂಗದ ಪರವಾಗಿ ಸಿಪಿಐ(ಎಂ)ನ ಎಸ್.ಪಿ.ಲೇಪ್ಚಾ ಸ್ಪರ್ಧಿಸುತ್ತಿದ್ದಾರೆ. ಅಲ್ಲಿ ಈಗ ಲೇಪ್ಚಾ ಗೆಲುವಿನ ಪ್ರಶ್ನೆಯಿಲ್ಲ, ಎರಡನೇ ಸ್ಥಾನ ಕಾಂಗ್ರೆಸ್‌ಗೋ ತೃಣಮೂಲ-ಬಿಜೆಪಿ ಕೂಟಕ್ಕೋ ಎಂಬುದಷ್ಟೇ ಪ್ರಶ್ನೆ ಎಂದು ಹೇಳಲಾಗುತ್ತಿದೆ.

ಕಾಂ. ಲೇಪ್ಚಾ ಇದೇ ಪ್ರದೇಶದಲ್ಲಿ ಹುಟ್ಟಿ, ಬೆಳೆದು ಹೋರಾಟ ನಡೆಸಿದವರು. ಅಧ್ಯಾಪಕರಾಗಿದ್ದು ರಾಜಕಾರಣಕ್ಕೆ ಬಂದವರು, ಇಲ್ಲಿಯ ಜನಗಳ ಜೀವನದೊಂದಿಗೆ ನಿಕಟ ಸಂಪರ್ಕ ಹೊಂದಿರುವವರು. ಅತ್ತ ತೃಣಮೂಲ-ಬಿಜೆಪಿ ಕೂಟದ ಅಭ್ಯರ್ಥಿಗೆ ಈ ಪ್ರದೇಶದ ಪರಿಚಯವೂ ಇಲ್ಲ. ಕಾಂಗ್ರೆಸ್ ಮತ್ತು ಈ ಕೂಟ ತಮ್ಮ ಅಭ್ಯರ್ಥಿಗಳನ್ನು ನಿರ್ಧರಿಸಿದ್ದೇ ಕೊನೇ ವೇಳೆಗೆ. ಕಳೆದ ಲೋಕಸಭಾ ಚುನಾವಣೆಗಳ ನಂತರ ಇಲ್ಲಿ ಗುಡ್ಡಗಾಡು ಮಂಡಳಿಗೆ ಚುನಾವಣೆ ನಡೆದಿದೆ. ಎರಡರಲ್ಲೂ ಬಿಜೆಪಿ-ತೃಣಮೂಲದ ನಿಜಸ್ವರೂಪ ಬಟ್ಟಬಯಲಾಗಿದೆ.

ಕಾರ್ಗಿಲ್ ಬಗ್ಗೆ ಇಲ್ಲಿ ಜನ ಕೇಳುವ ಪ್ರಶ್ನೆಗಳು ಬಿಜೆಪಿ-ತೃಣಮೂಲ ಕೂಟಕ್ಕೆ ಇರುಸುಮುರುಸು ತಂದಿವೆ. ಗೂರ್ಖಾಸೈನಿಕರ ಹೆಣಗಳು ಬರುತ್ತಲೇ ಇವೆ. ನಿಜವಾಗಿಯೂ ಯುದ್ಧ ಮುಗಿದಿದೆಯೇ, ಅಲ್ಲಿ ಶಾಂತಿ ನೆಲೆಸಿದೆ ಎಂದು ಪ್ರಧಾನಿಗಳು ಸುಳ್ಳು ಹೇಳುತ್ತಿದ್ದಾರೆಯೇ - ಜನಗಳ ಈ ಪ್ರಶ್ನೆಗಳಿಗೆ ತೃಪ್ತಿಕರ ಉತ್ತರ ನೀಡಲು ಅವರಿಗಾಗುತ್ತಿಲ್ಲ.

ಮಿಡ್ನಾಪುರ: ಇಂದ್ರಜಿತ್ ಗುಪ್ತಾರ ಜತೆಗೆ ಇದೆ

ಕಳೆದ ಬಾರಿ ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ಮೈತ್ರಿ ಮಾಡಿಕೊಳ್ಳುವಾಗ ಎರಡು ಕಡೆ ತಿಕ್ಕಾಟಗಳು ನಡೆದು ಮೈತ್ರಿ ಏರ್ಪಟ್ಟಿರಲಿಲ್ಲ. ಮಿಡ್ನಾಪುರ ಅಂತಹ ಕ್ಷೇತ್ರಗಳಲ್ಲಿ ಒಂದು . ಆ ನಂತರ ಬಹಳಷ್ಟು ಬೆಳವಣಿಗೆಗಳು ನಡೆದಿವೆ. ಈ ಬಾರಿ ಮೈತ್ರಿ ಏರ್ಪಟ್ಟಿದೆ - ಆದರೂ ಬಿಜೆಪಿ ಅಭ್ಯರ್ಥಿ ಮನೋರಂಜನ್ ದತ್ತ ನಿದ್ದೆಗೆಟ್ಟಿದ್ದಾರೆ. ಯಾಕೆಂದರೆ ಇಲ್ಲಿಂದ ಸ್ಪರ್ಧಿಸುತ್ತಿರುವ ಎಡರಂಗದ ಅಭ್ಯರ್ಥಿ ಸಿಪಿಐನ ಹಿರಿಯ ಮುಖಂಡ ಇಂದ್ರಜಿತ್ ಗುಪ್ತಾ.

1977 ರಲ್ಲಿ ಈ ಕ್ಷೇತ್ರದಲ್ಲಿ

ಇಣುಕು ನೋಟ

ಜನತಾಪಾರ್ಟಿಯ ಅಭ್ಯರ್ಥಿ ಸುಧೀರ್ ಘೋಷಾಲ್ ಎಡರಂಗ ಬೆಂಬಲದಿಂದ ಸಿಪಿಐನ ನಾರಾಯಣ ಚೌವೆಯವರನ್ನು ಸೋಲಿಸಿದ್ದರು. ಆಗ ಸಿಪಿಐ ಎಡರಂಗದಲ್ಲಿರಲಿಲ್ಲ. 1980 ರಲ್ಲಿ ಸಿಪಿಐ ಎಡರಂಗ ಸೇರಿದಾಗ ಚೌವೆಯವರು ಘೋಷಾಲ್‌ರನ್ನು ಸೋಲಿಸಿದರು. ಅದೂ ಒಂದು ಲಕ್ಷ ಮತಗಳ ಅಂತರದಲ್ಲಿ. ಆ ನಂತರ ಈ ಪರಂಪರೆ ಈಗಲೂ ಮುಂದುವರೆದಿದೆ. 1984 ರಲ್ಲಿ ಇಂದಿರಾ ಹತ್ಯೆಯ ಹಿನ್ನೆಲೆಯಲ್ಲಿ ಎಲ್ಲೆಡೆ ಅಪ್ಪಳಿಸಿದ ಸಹಾನುಭೂತಿಯ ಅಲೆ ಈ ಕ್ಷೇತ್ರದ ಗಡಿಯೊಳಗೆ ಪ್ರವೇಶಿಸಲಾಗಲಿಲ್ಲ. ಚೌವೆಯವರು 56000 ಮತಗಳಿಂದ ಮತ್ತೆ ಗೆದ್ದರು. 1989 ರಿಂದ ಈ ಕ್ಷೇತ್ರದಲ್ಲಿ ಇಂದ್ರಜಿತ್ ಗುಪ್ತಾ ಸ್ಪರ್ಧಿಸಿ ಸತತ ನಾಲ್ಕು ಬಾರಿ ಗೆದ್ದಿದ್ದಾರೆ. ಪ್ರತಿ ಬಾರಿ ಅವರ ವಿಜಯದ ಅಂತರ ಹೆಚ್ಚುತ್ತಾ ಬಂದಿದೆ. ಕಳೆದ ಬಾರಿ 2.75 ಲಕ್ಷ ಮತಗಳ ಅಂತರದಿಂದ ಗೆದ್ದರು.

ಕಳೆದ ಬಾರಿ ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ತಂತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸಿದ್ದರು. ತೃಣಮೂಲ ಅಭ್ಯರ್ಥಿಗೆ 28.53% ಬಿಜೆಪಿಯ ಮನೋರಂಜನ್ ಸೇನ್ ಗುಪ್ತಾಗೆ 12.32% ಮತ ದೊರೆತಿತ್ತು.

ಈ ಬಾರಿ ಬಿಜೆಪಿ-ತೃಣಮೂಲ ಮೈತ್ರಿ ಏರ್ಪಟ್ಟಿದ್ದರೂ ಮಮತಾ ಬ್ಯಾನರ್ಜಿ ಈ ಕಡೆ ತಲೆ ಹಾಕಿಲ್ಲ. ಬಿಜೆಪಿ ಅಭ್ಯರ್ಥಿಗೆ ಆಕೆಯನ್ನು ಭೇಟಿ ಮಾಡಲು ಆಗಿಲ್ಲವಂತೆ. ಅದೇನೇ ಇರಲಿ, ಜನಗಳು ಎಡ-ವಿರೋಧಿ ಕೂಟಗಳು ಎರಡೂ ಇಲ್ಲಿಯ ಜನ ಸಮೂಹಗಳ ಮೇಲೆ ಪ್ರಭಾವ ಬೀರಿಲ್ಲ.


ತೃಣಮೂಲ ಕಾಂಗ್ರೆಸ್ಸಿನ ಪ್ರಣಾಳಿಕೆ ಮತ್ತು ಮಮತಾ ಬ್ಯಾನರ್ಜಿಯ ಖೋಟಾ ಡಾಕ್ಟರೇಟ್

1984 ರಲ್ಲಿ ದಕ್ಷಿಣ ಕಲ್ಕತ್ತಾದಲ್ಲಿ ಒಂದು ಭಾರಿ ಪ್ರಚಾರ - ಅತ್ಯುನ್ನತ ಶಿಕ್ಷಣ ಪಡೆದ ಅಮೆರಿಕಾದಲ್ಲಿ ಡಾಕ್ಟರೇಟ್ ಪಡೆದ ಒಬ್ಬ ಮಹಿಳೆ ಚುನಾವಣೆಗೆ ನಿಂತಿದ್ದಾರೆ! ಆಕೆ ಗೆದ್ದ ಮೇಲೆ ಲೋಕಸಭಾದ ವ್ಯಕ್ತಿ ಪರಿಚಯದಲ್ಲಿ ಡಾ.ಮಮತಾ ಬ್ಯಾನರ್ಜಿ ಎಂದೇ ಬರೆಸಿದರು. ಆದರೆ ಯಾರಿಗೊ ಸಂಶಯದ ವಾಸನೆ ಹೊಡೆಯಿತು. ಈಕೆ ಅಮೆರಿಕಾಕ್ಕೆ ಹೋಗೇ ಇಲ್ಲ, ಡಾಕ್ಟರೇಟ್ ಹೇಗೆ ಬಂತು? ನಿಜ ಸಂಗತಿ ಅಗೆದು ತೆಗೆದಾಗ ಹೊರಬಂದ ಸತ್ಯ ಎಂದರೆ ಮಮತಾಬ್ಯಾನರ್ಜಿ ಡಾಕ್ಟರೇಟ್ ಕೇವಲ ಸುಳ್ಳಿನ ಕಂತೆ ಎಂದು. ಆಕೆ ತಾನು ಡಾಕ್ಟರೇಟ್ ಪಡೆದದ್ದು ಅಮೆರಿಕಾದ ಈಸ್ಟ ಜಾರ್ಜಿಯಾ ವಿಶ್ವವಿದ್ಯಾಲಯದಲ್ಲಿ ಎಂದು ಹೇಳಿಕೊಂಡಿದ್ದರು. ಅಂತಹ ವಿಶ್ವವಿದ್ಯಾಲಯವೇ ಇಲ್ಲ ಎಂದು ಬಯಲಿಗೆ ಬಂದರೂ ಆಕೆ ಇತ್ತೀಚಿನವರೆಗೂ ಡಾಕ್ಟರ್ ಮಮತಾ ಬ್ಯಾನರ್ಜಿಯಾಗಿಯೇ ಮುಂದುವರೆದಿದ್ದರು. ಆದರೆ ಇತ್ತೀಚಿಗೆ ಆ 'ಡಾಕ್ಟರ್' ಅಭಿದಾನವನ್ನು ಬಳಸುತ್ತಿಲ್ಲ. ತೃಣಮೂಲ ಕಾಂಗ್ರೆಸ್ಸಿನ ಇಂಟರ್‌ನೆಟ್‌ನ ವೆಬ್‌ಸೈಟ್‌ನಲ್ಲಿ ಆಕೆಯ ವ್ಯಕ್ತಿಯ ಪರಿಚಯದಲ್ಲಿ 'ದೀದಿ'(ಅಕ್ಕ)ಜತೆ 'ಡಾ.' (ಡಾಕ್ಟರ್) ಮಾಯವಾಗಿದೆ. ಬಹುಶಃ ಜನಗಳನ್ನು ಮರುಳು ಮಾಡಲು ಸಾಧ್ಯವಿಲ್ಲ ಎಂದು ಖಚಿತವಾಗಿರಬೇಕು.

ಸಿಪಿಐ(ಎಂ) ಮತ್ತು ಸ್ವತಃ ಜ್ಯೋತಿಬಸುರವರು ಈ ಬಗ್ಗೆ ಕೇಳಿದಾಗ ಕೋಪೋದ್ರಿಕ್ತಳಾದ ಮಮತಾ ಬ್ಯಾನರ್ಜಿ ಜ್ಯೋತಿಬಸುರವರಿಗೆ ನಿಮ್ಮ ವಿದ್ಯಾರ್ಹತೆ ಏನು ಎಂದು ಪ್ರಶ್ನಿಸಿ ಬೆಪ್ಪತಕ್ಕಡಿಯಾಗಿ ಬಿಟ್ಟರು. ಜ್ಯೋತಿಬಸು ತನ್ನ ಬಗ್ಗೆ ವಿವರಗಳನ್ನು ನೀಡಿ 'ನಿಮ್ಮ ಬಗ್ಗೆ ತಿಳಿಸುತ್ತೀರಾ? ಎಂದು ಕೇಳಿದಾಗ ಮಮತಾ ಮತ್ತೆ ಮೌನ. ಇದು ಫೋರ್‌ಟ್ವೆಂಟಿ (420) ಅಂದರೆ ಜನವಂಚನೆಯ ಕೆಲಸ ಎಂದು ಜ್ಯೋತಿಬಸುರವರ ಟೀಕೆಯನ್ನು ಪ್ರಮೋದ್ ಮಹಾಜನ್ -ಫರ್ನಾಂಡೀಸ್‌ರು ಹೊಲಸು ವೈಯಕ್ತಿಕ ಟೀಕೆಯೊಡನೆ ಹೋಲಿಸುವ ಕೆಲವು ದೊಡ್ಡ ಪತ್ರಿಕೆಗಳ ಪತ್ರಕರ್ತರ ಪ್ರಯತ್ನವೂ ವಿಫಲವಾಯಿತು.

ಅಂದು, ಡಾಕ್ಟರೇಟ್ ಇರಲಿ, ಇರದಿರಲಿ ಮಮತಾ ಬ್ಯಾನರ್ಜಿ ತನ್ನ 'ಪಾಂಡಿತ್ಯ'ದ ಪ್ರದರ್ಶನವನ್ನು ಮಾತ್ರ ನಿಲ್ಲಿಸಲಿಲ್ಲ. ತೃಣಮೂಲ ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆ ಇದಕ್ಕೊಂದು ಉದಾಹರಣೆ. ಕೇವಲ ಸಿಪಿಐ(ಎಂ)ನ್ನು ಥೇಡಿಸಲೆಂದೇ ಆ ಪ್ರಣಾಳಿಕೆಯಲ್ಲಿ ಒಂದು ವಾಕ್ಯವಿದೆ - "ಮಲೇರಿಯಾ ಗುಣಪಡಿಸಲು ಔಷಧಿ ಹುಡುಕಿದ್ದಕ್ಕಾಗಿ 300 ವರ್ಷಗಳ ಹಿಂದೆಯೇ ರೊನಾಲ್ಡ್ ರೋಸ್‌ಗೆ ನೋಬೆಲ್ ಬಹುಮಾನ ದೊರೆತರೂ ಕಲ್ಕತ್ತಾ ಇಂದೂ ಕೂಡಾ ಮಲೇರಿಯಾ ಪಿಡುಗಿನಿಂದ ಮುಕ್ತಿ ಪಡೆದಿಲ್ಲ" ನೊಬೆಲ್ ಬಹುಮಾನ ಆರಂಭಿಸಿದ ಆಲ್ಫ್ರೆಡ್ ನೊಬೆಲ್ ಹುಟ್ಟಿದ್ದೇ 1833 ರಲ್ಲಿ. ಸತ್ತದ್ದು 1896 ರಲ್ಲಿ. ಆ ನಂತರವೇ ನೊಬೆಲ್ ಬಹುಮಾನಗಳು ಆರಂಭವಾದದ್ದು. 300 ವರ್ಷ ಎಲ್ಲಾಗಿದೆ? ಸರ್ ರೊನಾಲ್ಡ್ ರೋಸ್ ಕೂಡಾ ಸತ್ತದ್ದು 1857 ರಲ್ಲಿ. ಆತನಿಗೆ ನೊಬೆಲ್ ಬಹುಮಾನ ಸಿಕ್ಕಿದ್ದು 1902 ರಲ್ಲಿ - 300 ವರ್ಷಗಳ ಹಿಂದೆ ಅಲ್ಲ. ಮತ್ತು ಆ ಬಹುಮಾನ ಸಿಕ್ಕಿದ್ದು ಮಲೇರಿಯಾ ರೋಗಕ್ಕೆ ಔಷಧಿ ಕಂಡುಹಿಡಿದದ್ದಕ್ಕಲ್ಲ, ಮಲೇರಿಯಾ ಬ್ಯಾಕ್ಟೀರಿಯಾಗಳಿಗೆ ಕರುಳುಭಾಗದಲ್ಲಿ ಆಶ್ರಯ ದೊರೆಯುತ್ತದೆ ಎಂದು ಕಂಡು ಹಿಡಿದದ್ದಕ್ಕಾಗಿ. ಮಮತಾ ಬ್ಯಾನರ್ಜಿಯ ಟೊಳ್ಳು ಅಬ್ಬರದ ಹಿಂದಿರುವ ಅಜ್ಞಾನಕ್ಕೆ



ಐಕ್ಯರಂಗ

ದು ಒಂದು ಉದಾಹರಣೆಯಷ್ಟೆ.

ಕಳೆದ ಬಾರಿಯ ಪ್ರಣಾಳಿಕೆಯಲ್ಲಿ ಂತಹುದೇ ಇನ್ನೊಂದು ಪಾಂಡಿತ್ಯ ಪ್ರದರ್ಶನವಿತ್ತು 'ಬಂಗಾಳ ಇಂದು ಯೋಚಿಸುವುದನ್ನು ಭಾರತ ನಾಳೆ ಯೋಚಿಸುತ್ತದೆ' - ಇದು ಗೋಪಾಲಕೃಷ್ಣ ಗೋಖಲೆಯವರ ಉದ್ಗಾರ. ಆದರೆ ತೃಣಮೂಲ ಪ್ರಣಾಳಿಕೆ ಇದನ್ನು ಬಾಲ ಗಂಗಾಧರ ತಿಲಕರ ಮಾತು ಎಂದು ಹೇಳಲಾಗಿತ್ತು! ಇದರ ಅರ್ಥ ಇಷ್ಟೇ - ತೃಣಮೂಲ ಕಾಂಗ್ರೆಸ್ ಮತ್ತು ಮಮತಾ ಬ್ಯಾನರ್ಜಿಗೆ ತಾವು ಏನು ಹೇಳುತ್ತಿದ್ದೇವೆ, ಏನು ಬರೆಯುತ್ತಿದ್ದೇವೆ ಎಂಬ ಅರಿವು ಕೂಡಾ ಇರುವುದಿಲ್ಲ ಎಂದು.

ಉತ್ತರ ಪ್ರದೇಶದಲ್ಲಿ ಬಿಜೆಪಿ ಮುಖಂಡರಿಗೆ ಕಸಿವಿಸಿ

ಉತ್ತರ ಪ್ರದೇಶದಲ್ಲಿ ಎರಡನೇ ಹಂತದ ಮತದಾನದ ವೇಳೆಗೆ ಬಿಜೆಪಿ ಮುಖಂಡರಲ್ಲಿ ಕಸಿವಿಸಿ, ಹತಾಶೆ ಮೂಡಿದಂತಿದೆ. ಒಬ್ಬೊಬ್ಬ ಮುಖಂಡರು ಒಂದೊಂದು ಅಭಿಪ್ರಾಯ ಪ್ರಕಟಿಸುತ್ತಿದ್ದಾರೆ. ಮೊದಲ ಹಂತದ ಮತದಾನ ನಡೆದ ಎಲ್ಲಾ ಸೀಟುಗಳನ್ನು ಬಿಜೆಪಿಯೇ ಗೆಲ್ಲುತ್ತದೆ ಎಂದು ಒಬ್ಬ ಹೇಳಿದರೆ, ಇಲ್ಲ ಐದಕ್ಕಿಂತ ಹೆಚ್ಚು ಸಿಗಲಿಕ್ಕಿಲ್ಲ ಎಂದು ಇನ್ನೊಬ್ಬರು ಹೇಳುತ್ತಿದ್ದಾರೆ. ರಾಜ್ಯದ ಪ್ರಮುಖ ಬಿಜೆಪಿ ಮುಖಂಡ ಕಲ್ರಾಜ್ ಮಿಶ್ರಾ ಕೂಡಾ ಬಿಜೆಪಿ ಕೆಲವು ಸೀಟುಗಳನ್ನು ಕಳೆದುಕೊಳ್ಳುತ್ತದೆ, ಆದರೆ ಇದು ಕಾಂಗ್ರೆಸ್ ಅಥವಾ ಸಮಾಜವಾದಿ ಪಕ್ಷಕ್ಕೆ ಹೋಗುವುದಿಲ್ಲ. ಬಿ.ಎಸ್.ಪಿ. ಗೆ ಹಾಲಾಗುತ್ತದೆ ಎಂದಿರುವುದಾಗಿ ವರದಿಯಾಗಿದೆ.

ಇಲ್ಲಿ ಚುನಾವಣಾ ಪೈಪೋಟಿ ಮುಖ್ಯವಾಗಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ. ಹರಿದ್ವಾರ ಲೋಕಸಭಾ ಕೇಂದ್ರ ಇದಕ್ಕೊಂದು ಉದಾಹರಣೆ. ಇಲ್ಲಿ ಬಿಜೆಪಿಯವರು ಕಮಲದ ಪ್ರಿಂಟ್ ಇರುವ ಕಾವಿ ಸೀರೆಗಳನ್ನು ಹಂಚಿದರೆ. ಕಾಂಗ್ರೆಸ್ ಕಚೇರಿ ಸದ್ದುಗಳಿಂದ ತುಂಬಿದೆ.

ಬಿಜೆಪಿ ಇಲ್ಲಿ ಇನ್ನೊಂದು ತಂತ್ರ ಹೂಡಿದೆ. ಬಿಜೆಪಿ ಸ್ಪರ್ಧಿಸುವಲ್ಲಿ ಕೆಲವೆಡೆ ಹಿಂದೂ ಮಹಾಸಭಾ ಅಭ್ಯರ್ಥಿಗಳನ್ನು ಹಾಕಿಸಿ ಕಾಂಗ್ರೆಸ್ ಮತಗಳನ್ನು ಕಸಿಯುವ ಪ್ರಯತ್ನವನ್ನು ಮಾಡಿದೆ.

ಸಾಕ್ಷಿ ಮಹಾರಾಜರ ಸಾಕ್ಷಿ

ಕಳೆದ ಬಾರಿ ಬಿಜೆಪಿಯ ಅಭ್ಯರ್ಥಿಯಾಗಿದ್ದ ಸಾಕ್ಷಿ ಮಹಾರಾಜ್ ಈ ಬಾರಿ ಬಿಜೆಪಿಯ ವಿರುದ್ಧ ಪ್ರಚಾರದಲ್ಲಿದ್ದಾರೆ. ಬಿಜೆಪಿ ಉತ್ತರ ಪ್ರದೇಶದ ಮುಖಂಡರ ನಡುವಿನ ಕಿತ್ತಾಟಗಳಿಂದಾಗಿ ಸೀಟು ಸಿಗದಿರುವುದೇ ಕಾರಣವಂತೆ. ಅದೇನೇ ಇರಲಿ, ಈಗ ಬಿಜೆಪಿ ಮುಖಂಡರು ಸಾಕ್ಷಿ ಮಹಾರಾಜರ ಬಗ್ಗೆ ಏನು ಹೇಳುತ್ತಿದ್ದಾರೆ ಗೊತ್ತೆ? ಈತ ಬಾಬ್ರಿ ಮಸೀದಿ ಧ್ವಂಸದಲ್ಲಿ ಮುಂಚೂಣಿಯಲ್ಲಿದ್ದವರು. ಇವರ ಪ್ರಚಾರದಿಂದ ಬಿಜೆಪಿಗೇನೂ ತೊಂದರೆಯಿಲ್ಲ. ಏಕೆಂದರೆ ಅಲ್ಪಸಂಖ್ಯಾತರು ಇವರನ್ನು ನಂಬಲಾರರು! ಎಂತಹ ತರ್ಕ ಅಲ್ಲವೇ? ಇತ್ತೀಚಿನವರೆಗೂ ಸಾಕ್ಷಿ ಮಹಾರಾಜರನ್ನು ಕಾವಿ ಪಡೆಗಳ ಪ್ರಶಂಸೆಗೆ ಪಾತ್ರವಾಗಿಸಿದ್ದ ಬಾಬ್ರಿ ಮಸೀದಿ ಧ್ವಂಸದ ಕೃತ್ಯ ಈಗ ಟೀಕೆಗೆ ಪಾತ್ರವಾಗಿದೆ! ಜನವಂಚನೆಯು ಬಿಜೆಪಿ ಗುರಿ!

ತ್ರಿಪುರಾ: ಮತ್ತೆ ಎಡ ಅಭ್ಯರ್ಥಿಗಳಿಗೆ ಭಾರಿ ಬೆಂಬಲ

ಎರಡು ತಿಂಗಳ ಹಿಂದೆಯಷ್ಟೇ ಪಂಚಾಯತಿ ಚುನಾವಣೆಗಳಲ್ಲಿ ಕಾಂಗ್ರೆಸ್, ಟಿಯುಜೆಎಸ್, ಟಿ.ಎನ್.ವಿ. ತಮ್ಮ ಗಟ್ಟಿ ನೆಲೆಯೆನಿಸಿದ ಜಾಗಗಳಲ್ಲೂ ಸೋತಿದ್ದರು. ಆ ನಂತರ ಈ ಪರಿಸ್ಥಿತಿ ಇನ್ನೂ ತೀವ್ರವಾಗಿದೆ. ಕಾಂಗ್ರೆಸ್‌ನ ಮಾಜಿ ಮುಖ್ಯಮಂತ್ರಿ ಸುಧೀರ್ ರಂಜನ್ ಮಜುಂದಾರ್ ನೇತೃತ್ವದಲ್ಲಿ ಕಾಂಗ್ರೆಸ್ ಪ್ರಮುಖ ಗುಂಪೊಂದು ತೃಣಮೂಲ ಕಾಂಗ್ರೆಸ್ ಸೇರಿತು. ಆದರೂ ರಾಜಧಾನಿ ಅಗರ್ತಲಾದಲ್ಲಿ ಮಮತಾ ಬ್ಯಾನರ್ಜಿ ಮಾತನಾಡಿದ ರ್‍ಯಾಲಿ ಬಿಟ್ಟರೆ ತೃಣಮೂಲ ಕಾಂಗ್ರೆಸ್ಸಿನ ಪ್ರಚಾರವೂ ಸಪ್ಪೆಯಾಗಿದೆ. ಆದರೆ ಎಡರಂಗ ರ್‍ಯಾಲಿಗಳು ಭಾರೀ ಸಂಖ್ಯೆಯಲ್ಲಿ ಜನಗಳನ್ನು ಆಕರ್ಷಿಸಿ ಜನರ ಒಲವು ಎತ್ತ ಇದೆ ಎಂಬುದನ್ನು ಮತ್ತೊಮ್ಮೆ ಸಂಕೇತಿಸಿದೆ. ಉಗ್ರಗಾಮಿಗಳ ಬೆದರಿಕೆಗಳನ್ನು ಲೆಕ್ಕಿಸದೆ ಜನ ಸಿಪಿಐ(ಎಂ)ನ ರ್‍ಯಾಲಿಗಳಲ್ಲಿ ಭಾಗವಹಿಸುತ್ತಿದ್ದಾರೆ.

ಕೇಂದ್ರ ರ್‍ಯಾಲಿ ಅಗರ್ತಲಾದಲ್ಲಿ ಸೆಪ್ಟೆಂಬರ್ 19 ರಂದು ನಡೆಯಿತು. ಮುಖ್ಯ ಭಾಷಣಕಾರರಾಗಿ ಬಂದಿದ್ದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರಿಗೆ ಇಲ್ಲಿ ಭಾರೀ ಸ್ವಾಗತ ಕಾದಿತ್ತು. ಎಲ್ಲೆಲ್ಲೂ ಕಂಗೊಳಿಸುತ್ತಿದ್ದ ಕೆಲವು ಪತಾಕೆಗಳು ಎಡ-ವಿರೋಧಿ ರಾಜಕೀಯ ಶಕ್ತಿಗಳ ಸ್ಥಿತಿಯನ್ನು ಸಾರುತ್ತಿದ್ದವು. ಮುಖ್ಯಮಂತ್ರಿ ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ

ಇಣುಕು ನೋಟ

ಮಾಣಿಕ್ ಸರ್ಕಾರ್ ರಾಜ್ಯಾದ್ಯಂತ ಎಡರಂಗ ರ್‍ಯಾಲಿಗಳನ್ನು, ಸಭೆಗಳನ್ನುದ್ದೇಶಿಸಿ ಮಾತನಾಡುತ್ತಿದ್ದಾರೆ. ಇತರ ಹಲವು ಮಂತ್ರಿಗಳು, ಪಕ್ಷಗಳ ಮುಖಂಡರೂ ರಾಜ್ಯಾದ್ಯಂತ ಪ್ರಚಾರ ಕಾರ್ಯ ನಡೆಸುತ್ತಿದ್ದಾರೆ. ಈ ಎಲ್ಲಾ ಸಭೆಗಳಲ್ಲಿ, ರ್‍ಯಾಲಿಗಳಲ್ಲಿ ಜನ ಮಳೆ, ಬಿಸಿಲೆನ್ನದೆ ಭಾರೀ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಇತ್ತೀಚೆಗೆ ಧಲ್ಯಾ ಜಿಲ್ಲೆಯಲ್ಲಿ 16 ಸರ್ಕಾರಿ ನೌಕರರನ್ನು ಉಗ್ರಗಾಮಿಗಳು ಅಪಹರಣ ನಡೆಸಿದರೂ ಅಸ್ಸಾಂ ರೈಫಲ್ಸ್‌ನ ಸೈನಿಕರ ಮೇಲೆ ಧಾಳಿ ನಡೆಸಿದರೂ ಜನಗಳ ಉತ್ಸಾಹಕ್ಕೆ ಇದು ತಣ್ಣೀರೆರಚುವಲ್ಲಿ ವಿಫಲವಾಗಿದೆ.

ಒಂದೆಡೆ ಎಡ-ವಿರೋಧಿ ಶಕ್ತಿಗಳ ಅರ್ಥಹೀನ ದೂಷಣೆಗಳು, ಇನ್ನೊಂದೆಡೆ ಉಗ್ರಗಾಮಿಗಳ ಭಯೋತ್ಪಾದನೆ ಇವೆರಡಕ್ಕೂ ಮತಪೆಟ್ಟಿಗೆಗಳ ಮೂಲಕ ಸರಿಯಾದ ಉತ್ತರ ಕೊಡಬೇಕೆಂಬ ಜನರ ದೃಢ ನಿರ್ಧಾರವನ್ನು ಅಲುಗಾಡಿಸಲು ಆಗಿಲ್ಲ.

ಬಿಜೆಪಿಯ ಪಿತೂರಿಗಳಿಗೆ ತಕ್ಕ ಮಿತ್ರ!

ಜಮ್ಮು-ಕಾಶ್ಮೀರ: ಯುದ್ಧದ ನಡುವೆಯೂ ಮತದಾನ

ಕಾಶ್ಮೀರ ಬಹಳ ಮಂದಿಗೆ ಕೇವಲ ಸುಂದರ ಪ್ರವಾಸ ತಾಣ. ಕಾಶ್ಮೀರ ಕಣಿವೆ ಸಹಿಸಿದ ನೋವುಗಳು, ಕಾಶ್ಮೀರಿಗಳು ನೀವಿಕೊಳ್ಳುತ್ತಿರುವ ಗಾಯಗಳು ಈ ಭೂಸ್ವರ್ಗವನ್ನು ನರಕವಾಗಿ ಪರಿವರ್ತಿಸುವಂತವು. ಆದರೂ ಹಾಗಾಗಿಲ್ಲ. ಅದಿನ್ನೂ ವಿಶ್ವವಿಖ್ಯಾತ ಪ್ರವಾಸ ತಾಣವಾಗಿಯೇ ಉಳಿದಿದೆ. ಇದಕ್ಕೆ ಕಾರಣ ಭಾರತದ ಪ್ರಜಾಪ್ರಭುತ್ವ ಮತ್ತು ಕಾಶ್ಮೀರ ಉಳಿಸಿಕೊಂಡು ಬಂದಿರುವ ವ್ಯವಸ್ಥೆ. ಬುಲೆಟ್‌ಗಳಿಂದ ತಪ್ಪಿಸಲು ಬಾಗಿಲು ಹಾಕಿಕೊಂಡಿರಬೇಕಾದ ಪರಿಸ್ಥಿತಿಯಲ್ಲೂ ಕಾಶ್ಮೀರಿಗಳು ಮತಗಟ್ಟೆಗಳ ಮುಂದೆ ಸಾಲುಗಟ್ಟಿ ನಿಲ್ಲುತ್ತಾರೆ - ಸಂಖ್ಯೆ ಬೇರೆಡೆಗೆ ಹೋಲಿಸಿದರೆ ಬಹಳ ಕಮ್ಮಿಯಿದ್ದರೂ.

ಜಮ್ಮು-ಕಾಶ್ಮೀರದಲ್ಲಿ 6 ಲೋಕಸಭಾ ಕ್ಷೇತ್ರಗಳಿವೆ. 5 ರಲ್ಲಿ ಚುನಾವಣೆಗಳು ನಡೆದಿವೆ. ಅನಂತ್‌ನಾಗ್‌ನಲ್ಲಿ ಬಿಜೆಪಿ ಅಭ್ಯರ್ಥಿಯ ಕೊಲೆಯಿಂದಾಗಿ ಮುಂದೂಡಲ್ಪಟ್ಟ ಚುನಾವಣೆ ಅಕ್ಟೋಬರ್ 4 ರಂದು ನಡೆಯಲಿದೆ.

ಸಿಪಿಐ(ಎಂ) ಪರವಾಗಿ ಇಲ್ಲಿ ಕೇಂದ್ರ ಸಮಿತಿ ಸದಸ್ಯ ಹಾಗೂ ರಾಜ್ಯ ಕಾರ್ಯದರ್ಶಿ ಮಹಮ್ಮದ್ ಯೂಸುಫ್ ತರಿಗಾಮಿ ಸ್ಪರ್ಧಿಸುತ್ತಿದ್ದಾರೆ. ಪ್ರತಿಸ್ಪರ್ಧಿಗಳೆಂದರೆ ಪ್ರಗತಿಪರ ಪ್ರಜಾಸತ್ತಾತ್ಮಕ ರಂಗದ ಮುಫ್ತಿಮಹಮ್ಮದ್ ಸೈಯದ್ ಮತ್ತು ನ್ಯಾಶನಲ್ ಕಾನ್ಫರೆನ್ಸ್‌ನ ಲೈ ಮಹಮ್ಮದ್ ನಾಯೆಕ್.

ಸಿಪಿಐ(ಎಂ) ನ ಪ್ರಚಾರ ಇಲ್ಲಿ ವಿಶಿಷ್ಟ. ತರಿಗಾಮಿ ಉಗ್ರಗಾಮಿಗಳ ಪಟ್ಟಿಯಲ್ಲಿರುವ ವ್ಯಕ್ತಿ. ಆದ್ದರಿಂದ ಯಾವುದೇ ರ್‍ಯಾಲಿ ನಡೆಯುವ ಒಂದು ಗಂಟೆ ಮೊದಲಷ್ಟೇ ಆ ಬಗ್ಗೆ ತಿಳಿಸಲಾಗುತ್ತದೆ. ಸಹಜವಾಗಿಯೇ ಜನ ಅಪಾರ ಸಂಖ್ಯೆಯಲ್ಲಿ ಸೇರುವುದಿಲ್ಲ. ಆದರೂ ಜನ ಸೇರುತ್ತಾರೆ, ಪ್ರಚಾರ ನಡೆಯುತ್ತದೆಂಬುದೇ ಕಾಶ್ಮೀರಿಗಳಿಗೆ ಏನು ಬೇಕಾಗಿದೆ ಎಂಬುದರ ಸಂಕೇತ.

ತರಿಗಾಮಿ ಈಗ ಶಾಸಕ- ಕೋಲ್ಗಾಂವ್ ವಿಧಾನಸಭಾ ಕ್ಷೇತ್ರದಿಂದ ಆರಿಸಿ ಹೋಗಿದ್ದವರು. ಕಳೆದ 50 ವರ್ಷ ಕಾಶ್ಮೀರ ಪ್ರವಾಸೋದ್ಯಮದಿಂದ ಬದುಕು ಸಾಗಿಸಿದೆ. ಅದೊಂದು ದಾರಿಯನ್ನು ನಾವು ಕಳಕೊಳ್ಳುವಂತಿಲ್ಲ. ಕಾಶ್ಮೀರದಲ್ಲಿ ಕಾಣಬರುತ್ತಿರುವ ರಾಜಕೀಯ ಅನಿಶ್ಚಿತತೆಯನ್ನು ತಪ್ಪಿಸಲು ನಿರ್ದಿಷ್ಟ ರಾಜಕೀಯ ಮುತುವರ್ಜಿ ಕಾಣುತ್ತಿಲ್ಲ. ಇದು ನನ್ನ ಮುಖ್ಯ ಪ್ರಚಾರ ವಿಷಯ' ಎನ್ನುತ್ತಾರೆ ತರಿಗಾಮಿ.

ಕಾಶ್ಮೀರಿ ಜನಗಳಲ್ಲಿ ಮತ್ತೆ ಭದ್ರತೆಯ ಭಾವನೆ ತರುವುದು ಮುಖ್ಯ ಕೆಲಸ. ಇದನ್ನು ಮಾಡಬಲ್ಲವರು ಈಗಲೂ ಇದ್ದಾರೆ. ಅವರಿಗೊಂದು ಅವಕಾಶ ಕೊಡಬೇಕು ಎನ್ನುತ್ತಾರೆ ಜನ. ತರಿಗಾಮಿ ಅಂತವರಲ್ಲೊಬ್ಬರು.

ಬಿಹಾರದಲ್ಲಿ ಹತಾಶೆಯ ಪ್ರದರ್ಶನ

ಬಿಹಾರದಲ್ಲಿ ಎರಡೆರಡು ಬಾರಿ ರಾಷ್ಟ್ರಪತಿ ಆಳ್ವಿಕೆ ಹೇರಲು ಪ್ರಯತ್ನಿಸಿ ಕೈಸುಟ್ಟುಕೊಂಡ ಬಿಜೆಪಿ ಕೂಟ ಈ ಚುನಾವಣಾ ಪ್ರಚಾರದಲ್ಲೂ ಅಂತಹುದೇ ಕುತಂತ್ರಗಳನ್ನು ನಡೆಸುತ್ತಿದೆ. ಸ್ವತಃ ಪ್ರಧಾನಮಂತ್ರಿಗಳೂ ಈ ಕುತಂತ್ರದಲ್ಲಿ ಭಾಗಿಯಾಗುವ ಮಟ್ಟಕ್ಕೆ ಇಳಿದಿದ್ದಾರೆ. ಚುನಾವಣೆಗಳ ನಂತರ ಆರ್.ಜೆ.ಡಿ. ಸರಕಾರವನ್ನು ವಜಾ ಮಾಡುವ ಬೆದರಿಕೆಯನ್ನು ಯಾವುದೇ ನಾಚಿಕೆಯಿಲ್ಲದೆ ಮತ್ತೆ ಹಾಕಿದ್ದಾರೆ.

ಅದರ ಬೆನ್ನ ಹಿಂದೆಯೇ ಸಮತಾ ಪಕ್ಷದ ಮುಖಂಡರು 'ಖೋಟಾ ಮತ ಪತ್ರಗಳ' ಬಗ್ಗೆ ಬೊಬ್ಬೆ ಎಬ್ಬಿಸಿ ಚುನಾವಣಾ ಆಯೋಗದಿಂದ ಕೂಡಾ ಛೀಮಾರಿ ಹಾಕಿಸಿಕೊಂಡಿದ್ದಾರೆ. ಬಿಹಾರ ಸರ್ಕಾರ ಪಶ್ಚಿಮ ಬಂಗಾಳ ಸರ್ಕಾರದೊಂದಿಗೆ ಪಿತೂರಿ ನಡೆಸಿ ಖೋಟಾ ಮತಪತ್ರ ಮುದ್ರಿಸಿದೆ ಎಂಬ ದೂರು ಶುದ್ಧ ಸುಳ್ಳು ಎಂದು ಚುನಾವಣಾ ಆಯೋಗ ಕಳಿಸಿದ ತನಿಖಾ ತಂಡದ ವರದಿಯಿಂದ ಸ್ಪಷ್ಟವಾಗಿದೆ. ವಾಸ್ತವವಾಗಿ ಇದು ಬಿಹಾರದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಹಳಿ ತಪ್ಪಿಸುವ ಬಿಜೆಪಿ-ಸಮತಾ ಕೂಟದ ಪಿತೂರಿ ಎಂಬ ಸಂದೇಹ ಎದ್ದಿದೆ. ಪ್ರಧಾನಮಂತ್ರಿಗಳು ಈ ಬಗ್ಗೆ ಮುಗುಮ್ಮಾಗಿದ್ದು ಈ ಪಿತೂರಿಯಲ್ಲಿ ಭಾಗಿಯಾದಂತಿದೆ. ಜತೆಗೆ ಬಿಹಾರದ ರಾಜ್ಯಪಾಲರೂ ರಾಜ್ಯ ಸರ್ಕಾರ ಮತ್ತು ಚುನಾವಣಾ ಆಯೋಗವನ್ನು ಬದಿಗೊತ್ತಿ ಕೇಂದ್ರ ಗೃಹಮಂತ್ರಿಗಳಿಗೇ ಪತ್ರ ಬರೆದಿರುವುದಂತೂ ಈ ಸಂದೇಹ ನಿಜ ಎಂದು ಸ್ಪಷ್ಟಪಡಿಸಿದೆ. ಬಿಜೆಪಿ-ಸಮತಾ ಕೂಟದ ಈ ತಂತ್ರ ಅವರ ಹತಾಶೆಯ ಸಂಕೇತ. ಆದ್ದರಿಂದ ಬಿಹಾರ ಸರ್ಕಾರವನ್ನು ಮಾತ್ರವಲ್ಲ, ಚುನಾವಣಾ ಆಯೋಗವನ್ನೂ ಅವರು ದೂರಲಾರಂಭಿಸಿದ್ದಾರೆ. ○

ಪಶ್ಚಿಮ ಬಂಗಾಳದಲ್ಲಿ ಭಾರೀ ಮಳೆ
ವ್ಯಾಪಕ ರಕ್ಷಣೆ, ಪರಿಹಾರ ಮತ್ತು ಮರು ವಸತಿ ಕಾರ್ಯ

ನಡುವೆ ಪ್ರಧಾನಿಗಳ ಕೂಟದ ರಾಜಕೀಯ

ಮೊನ್ನೆ ಪ್ರಧಾನ ಮಂತ್ರಿಗಳು ಕಲ್ಕತ್ತಾದಲ್ಲಿ ಚುನಾವಣಾ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ವ್ಯಂಗ್ಯವಾಡಿದರು "ಸ್ವಲ್ಪ ಮಳೆ ಸುರಿಯಿತೆಂದರೆ ಬಂಗಾಳದಲ್ಲಿ ಜೀವನ ಅಸ್ತವ್ಯಸ್ತಗೊಳ್ಳುತ್ತದೆ. ಎಡರಂಗ ಸರ್ಕಾರದ ಅಸಮರ್ಥತೆಯನ್ನು ಇದು ತೋರಿಸುತ್ತದೆ! ಪ್ರಧಾನಿಗಳು ಹೇಳಿದರೆಂದರೆ ದೊಡ್ಡ ಪತ್ರಿಕೆಗಳ, ಟಿ.ವಿ.ಚಾನೆಲ್‌ಗಳ ವಂದಿಮಾಗಧರು ಹಿಂದೆ ಬೀಳುತ್ತಾರೆಯೇ? ಅವರು ಪ್ರಚಾರ ಮಾಡಿದ್ದೆ ಮಾಡಿದ್ದು. ಚುನಾವಣೆಯ ಸಮಯ ತಾನೆ? ಆದರೆ ಪಾಪ, ದೇಶದ ಪ್ರಧಾನ ಮಂತ್ರಿಯೆನಿಸಿಕೊಂಡವರಿಗೆ ಬಂಗಾಳ ಕಳೆದವಾರ ಕಂಡ ಮಳೆ ಹಿಂದೆಂದೂ ಕಾಣದಷ್ಟು ಭೀಕರವಾದ ಮಳೆ ಎಂದು ಗೊತ್ತಿರಲಿಲ್ಲ. ಚೀತಾ ಹೆಲಿಕಾಪ್ಟರ್‌ಗಳಲ್ಲಿ ಅಡ್ಡಾಡುತ್ತಾ ಏರ್‌ಕಂಡಿಷನ್ಡ್ ವಸತಿಗಳಲ್ಲಿ ಉಳಕೊಳ್ಳುವವರಿಗೆ ಇದು ಹೇಗೆ ತಾನೇ ತಿಳಿಯಬೇಕು? ಹತ್ತಿರದ ಹವಾಮಾನ ಕಚೇರಿಯಲ್ಲಿ ವಿಚಾರಿಸಿದರೂ ತಿಳಿಯುತ್ತಿತ್ತು.

ಹವಾಮಾನ ಕಚೇರಿಯ ಪ್ರಕಾರ ಬಂಗಾಳದಲ್ಲಿ ಮಳೆಗಾಲ 'ಅಧಿಕೃತ'ವಾಗಿ ಮುಗಿದಿತ್ತು. ಆದರೂ ಈ 48 ಗಂಟೆಗಳ ಕಾಲ ಸುರಿದ ಮಳೆ ಮಳೆಗಾಲದ ತೀವ್ರ ಮಳೆಯ ಕಾಲದ ಸರಾಸರಿ ಮಳೆಗಿಂತಲೂ ಹೆಚ್ಚು.

ಇದರಿಂದ ಆಡಳಿತಕ್ಕೆ ಆಶ್ಚರ್ಯವಾಗಿದೆಯೇ, ಹೌದು. ಆದರೆ ಈ ತುರ್ತು ಪರಿಸ್ಥಿತಿಯನ್ನು ಎದುರಿಸಲು ಸೂಕ್ತ ತಯಾರಿ ಇರಲಿಲ್ಲ ಎಂಬುದೇ ನಿಜವೇ? ಇಲ್ಲ, ಸುಳ್ಳು. ಬಂಗಾಳದಲ್ಲಿ ತಮ್ಮ ಬೆಂಬಲಿಗರ ಶೋಚನೀಯ ಓಡಾಟವನ್ನು ಕಂಡು ಸುಸ್ತಾಗಿದ್ದ ವಾಜಪೇಯಿಯವರ ಬಾಯಿಂದ ಬಂದ ಇಂತಹ ಮಾತಿನಿಂದ ಬಂಗಾಳದ ಜನತೆಗೇನೂ ಆಶ್ಚರ್ಯವಾಗಿಲ್ಲ. ಏಕೆಂದರೆ ಇಂತಹ ಪ್ರಾಕೃತಿಕ ಮತ್ತಿತರ ವಿಪತ್ತುಗಳನ್ನು ಎದುರಿಸುವುದು ಬಂಗಾಳದ ಜನತೆಗೆ ಕಷ್ಟದ ಕೆಲಸವೇನಲ್ಲ.

ಕಾರ್ಮೋಡಗಳು ಮುಸುಕಿ, ಮಿಂಚು-ಗುಡುಗುಗಳು ಬರುತ್ತಿದ್ದಂತೆಯೇ ಎಡಪಕ್ಷಗಳ ನೇತೃತ್ವದ ಸಾಮೂಹಿಕ ಸಂಘಟನೆಗಳ ಸಾವಿರಾರು ಕಾರ್ಯಕರ್ತರು, ಇತರ ಹಲವಾರು ಸ್ವಯಂಸೇವಕ ಸಂಘಟನೆಗಳ ನೆರವಿನಿಂದ ನೀರಿಗೆ ಇಳಿದೇ ಬಿಟ್ಟರು. ನೀರು ತೂರಲಾರಂಭಿಸಿದ ಮೊಹಲ್ಲಾಗಳಿಗೆ ಎಲ್ಲಾ ರಕ್ಷಣಾ ಪರಿಕರಗಳೊಂದಿಗೆ ಧಾವಿಸಿದರು. ಸಾಮೂಹಿಕ ಅಡಿಗೆ ವ್ಯವಸ್ಥೆ ಏರ್ಪಟ್ಟಿತ್ತು. ಶಾಲಾ ಕಟ್ಟಡಗಳಲ್ಲಿ ತಾತ್ಕಾಲಿಕ ವಸತಿ ಏರ್ಪಾಡಾಯಿತು. ವೈದ್ಯಕೀಯ ತಂಡಗಳು ಬರಲಾರಂಭಿಸಿದವು. ಇದನ್ನು ಕಂಡು ಕೆಲವು ಖಾಸಗೀ ಆಸ್ಪತ್ರೆಗಳೂ ತಮ್ಮ ವೈಭವೋಪೇತ ವಾರ್ಡುಗಳಲ್ಲಿ ಮಳೆಪೀಡಿತರಿಗೆ ಆಶ್ರಯ ಕೊಡಲಾರಂಭಿಸಿದವು.


ಮುಖ್ಯಮಂತ್ರಿ ಜ್ಯೋತಿಬಸು ವ್ಯಾಪಾರಸ್ಥರಿಗೆ ಎಚ್ಚರಿಕೆ ನೀಡಿದರು - ಪರಿಸ್ಥಿತಿಯ ದುರುಪಯೋಗ ಪಡೆದು ಕಳ್ಳ ದಾಸ್ತಾನು ಮಾಡೀರಿ, ಜೋಕೆ ಎಂದು. ಪೋಲೀಸ್, ಮಿಲಿಟರಿ ರಕ್ಷಣಾ ತಂಡಗಳು ವೇಗದ ದೋಣಿಗಳೊಂದಿಗೆ, ಜೀವರಕ್ಷಕ ಸಾಧನಗಳೊಂದಿಗೆ ಕಾರ್ಯಾಚರಣೆಗಿಳಿಯುವಂತೆ ಕೇಳಿಕೊಳ್ಳಲಾಯಿತು. ಅವರೆಲ್ಲಾ ತಕ್ಷಣ ನೆರವಿಗೆ ಧಾವಿಸಿ ಬಂದರು. ಶಿಸ್ತಿನ ಸಿಪಾಯಿಗಳ ಹೆಗಲ ಮೇಲೆ ಸೊಣಕಲು ಮಕ್ಕಳ ಚಿತ್ರ ಫೋಟೋಗ್ರಾಫರುಗಳಿಗೆ ಅವಕಾಶಗಳನ್ನು ಕಲ್ಪಿಸಿಕೊಟ್ಟಿತು.

ನಿಜ ಕೆಲವು ದುರಂತಗಳನ್ನು ತಪ್ಪಿಸಲಾಗಲಿಲ್ಲ. 50 ಜನ ಪ್ರಾಣ ಕಳಕೊಂಡರು. ಕಲ್ಕತ್ತಾ ನಗರವೊಂದರಲ್ಲೇ 50 ಸಾವಿರ ಮಂದಿಯ ಮನೆಮಾರು ಜಲಾವೃತವಾಯಿತು.

ಎಡರಂಗ ಸರಕಾರ ಈಗಾಗಲೇ ನೆರೆ ಪರಿಹಾರಕ್ಕೆ 3 ಕೋಟಿ ರೂಪಾಯಿಗಳ ಪರಿಹಾರ ಪ್ರಕಟಿಸಿದೆ. ಆದರೆ ರಾಜಭವನದಲ್ಲಿ ಆರಾಮಾಗಿ ಸುಸ್ತು ನಿವಾರಿಸಿಕೊಳ್ಳುತ್ತಿರುವ ಪ್ರಧಾನಿ ಮುಖ್ಯಮಂತ್ರಿಗಳನ್ನು ಸಂಪರ್ಕಿಸಿ ಕೇಂದ್ರದ ನೆರವೇನಾದರೂ ಬೇಕೆ ಎಂದು ಕೇಳುವ ಸೌಜನ್ಯವನ್ನಾದರೂ ಪ್ರದರ್ಶಿಸಬೇಕು ಎಂದನಿಸಲಿಲ್ಲ. ಅದರ ಚುನಾವಣಾ ಲಾಭ ಪಡೆಯುವುದು ಹೇಗೆ ಎಂದಷ್ಟೇ ಅವರಿಗೆ ಕಂಡಿರಬೇಕು.

(ಐಎನ್‌ಎನ್)

ಚೀನಾದ ಜನತಾಪ್ರಜಾಪ್ರಭುತ್ವ



ಮರೆತೆನೆಂದರ

ಚೀನಾದ ಜನತಾಪ್ರಜಾಪ್ರಭು
1 ಕ್ಕೆ. ಚೀನಾದ ಕ್ರಾಂತಿ ಈ ಶತಮ
ಕ್ರಾಂತಿ ಈ ಶತಮಾನದ ಪೂರ್ವಾ
ಬೀರಿದರೆ, ಉತ್ತರಾರ್ಧದ ಹೊಸ್ತಿಲ
ಪ್ರತಿಬಿಂಬಿಸಿತು. ಎರಡು ಸಾವಿರ
ಚೀನಿಯರನ್ನು ಸಮಾನ ಸಮೃದ್ಧ
ವರ್ಷಗಳ ನಂತರವೂ ಪ್ರಸ್ತುತ. ಆದ
ಭಾರತದಲ್ಲಿ. ಆ ಕ್ರಾಂತಿಯ ಸುದಿ
ಇನ್ನೂ ಅಪೂರ್ಣವಾಗಿರುವ ಸ
ದೀಪವಾಗಬಹುದಾದ ಕಥೆ.

ಚೀನಾದ ಮೊದಲ ಕ್ರಾಂತಿ ನಡೆದದ್ದು 1911 ರಲ್ಲಿ. ಡಾ, ಸನ್-ಯಾಟ್-ಸೆನ್ ಎಂಬುವನ ನೇತೃತ್ವದಲ್ಲಿ. ಚೀನಾವನ್ನು ಆಧುನೀಕರಿಸಿ ಗೌರವಪುದ ಸ್ಥಾನದಲ್ಲಿ ನಿಲ್ಲಿಸಬೇಕೆಂದು ಆತನ ಬಯಕೆ. ಯುರೋಪ್ ದೇಶಗಳ ರೀತಿಯಲ್ಲಿ ಸಂಸದೀಯ ಗಣತಂತ್ರ ಪ್ರಭುತ್ವ ಜಾರಿಗೊಳಿಸಬೇಕೆಂದು, ಚೀನಾದ ಬಂಡವಾಳವನ್ನು ಚೀನೀಯರೇ ಬಳಸಿಕೊಂಡು ಅಭಿವೃದ್ಧಿ ಪಡಿಸಬೇಕೆಂಬ ರಾಷ್ಟ್ರೀಯ ಕ್ರಾಂತಿಕಾರಿ ಆತ. ಆಗ ಚೀನಾ ಅರೆ -ಪಾಳೆಯಗಾರಿ, ಅರೆ-ವಸಾಹತು ಸಮಾಜವಾಗಿತ್ತು. ಡಾ|| ಸನ್-ಯಾಟ್-ಸೆನ್ ರಚಿಸಿದ ಪಕ್ಷ ಕೋಮಿಂಟಾಂಗ್. ಕೋಮಿಂಟಾಂಗ್ ಎಂದರೆ ಚೀನಿ ಭಾಷೆಯಲ್ಲಿ ರಾಷ್ಟ್ರೀಯವಾದಿ ಪಕ್ಷ ಅಂತ. 1912 ರಲ್ಲಿ ಅವರು ಚೀನಾ ಗಣತಂತ್ರ ಸರ್ಕಾರಕ್ಕೆ ಅಧ್ಯಕ್ಷರಾದರೂ, ಅವರ ಸರ್ಕಾರಕ್ಕೆ ಇಡೀ ದೇಶದ ಮೇಲೆ ಹತೋಟಿ ಇರಲಿಲ್ಲ. ಚೀನಾವನ್ನು ನಿಜವಾಗಿಯ ಆಳುತ್ತಿದ್ದದ್ದು ರಾಜನ ಕಾಲದಲ್ಲಿ ಪ್ರಾಂತಿಯ ಯುದ್ಧಕೋರ ಸೇನಾಧಿಕಾರಿಗಳು ಮತ್ತು ಅವರ ಬೆಂಬಲಕ್ಕಿದ್ದ ವಿದೇಶಿ ಲೂಟಿಗಾರರು. ಬ್ರಿಟಿಷರು, ಫ್ರೆಂಚರು, ಜರ್ಮನ್ನರು, ಅಮೆರಿಕನ್ನರು - ಪ್ರತಿ ದೇಶದ ವ್ಯಾಪಾರಿಗಳು ಕೆಲವು ಯುದ್ಧಕೋರ ಅಧಿಕಾರಗಳನ್ನು ಬಳಸಿಕೊಂಡು ಚೀನಾವನ್ನು ಆಳುತ್ತಿದ್ದರು. ಡಾ|| ಸನ್-ಯಾಟ್-ಸೆನ್‌ರಿಗೆ ಚೀನಾದ ಆಗಿನ ದಲ್ಲಾಳಿ ಬಂಡವಾಳಶಾಹಿ ಮತ್ತು ಪಾಳೆಯಗಾರಿ ಭೂಮಾಲಕರ ಬೆಂಬಲ ಸಿಗಲಿಲ್ಲ. ಚೀನಾದ ಆಗ ತಾನೇ ಉದಯವಾಗಿದ್ದ ಕಾರ್ಮಿಕ ವರ್ಗವಾಗಲಿ, ರೈತರಾಗಲಿ ಇನ್ನೂ ಗಣನೀಯ ರಾಜಕೀಯ ಶಕ್ತಿಯಾಗಿರಲಿಲ್ಲ. ನಂತರದ ಹತ್ತು ವರ್ಷಗಳಲ್ಲಿ ಚೀನಾ ಚಿಕ್ಕ ಚಿಕ್ಕ ಪಾಳೆಪಟ್ಟುಗಳಾಗಿ ವಿಭಜಿತವಾಯಿತು. ರಾಜರ ಕಾಲದಲ್ಲಿ ಪ್ರಾಂತೀಯ ಸೇನಾಧಿಕಾರಿಗಳಾಗಿದ್ದವರೆಲ್ಲಾ ಸ್ವತಂತ್ರ ಪಾಳೆಯಗಾರರಾದರು. ಈ ಪಾಳೇಗಾರರ ಸೈನ್ಯಗಳು, ಆಗ ಗ್ರಾಮೀಣ ಪ್ರಾಂತ್ಯಗಳಲ್ಲಿ ಹಬ್ಬಿಕೊಂಡಿದ್ದ ದರೋಡೆಕೋರ ಗುಂಪುಗಳು ಒಂದೇ ನಾಣ್ಯದ ಎರಡು ಮುಖಗಳಂತಿದ್ದವು.

ಇಂತಹ ನಿರಾಶದಾಯಕ ಪರಿಸ್ಥಿತಿಯಲ್ಲಿ ಚೀನಿ ಕಮ್ಯುನಿಸ್ಟ್ ಪಕ್ಷದ ಉದಯವಾಯಿತು. 1919 ರ ಮೇ 4 ವಿದ್ಯಾರ್ಥಿ ಚಳುವಳಿ, ಅಕ್ಟೋಬರ್ ಕ್ರಾಂತಿಯ ಸ್ಫೂರ್ತಿ ಮತ್ತು ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ನ ಪ್ರಯತ್ನಗಳಿಂದ ಇದು ಆಗಿತ್ತು. 1921 ರಲ್ಲಿ ಉದಯವಾದ ಚೀನಿ ಕಮ್ಯುನಿಸ್ಟ್ ಪಕ್ಷ 28 ವರ್ಷಗಳ ದೀರ್ಘ ಹೋರಾಟದ ನಂತರ ಜನತಾ ಪ್ರಜಾಪ್ರಭುತ್ವ ಕ್ರಾಂತಿ ಯಶಸ್ವಿಯಾಗಿತ್ತು. ಚೀನಿ ಜನತೆಯನ್ನು ಈ ಹೊಸ ಪ್ರಜಾಪ್ರಭುತ್ವದತ್ತ ಒಯ್ಯುವ ಹೋರಾಟದಲ್ಲಿ ಐದು ಪ್ರಮುಖ ಘಟ್ಟಗಳ ಮೂಲಕ ಹಾದು ಹೋಗಿದೆ. 1921-24 ರ ಅವಧಿಯಲ್ಲಿ ಚೀನಾದಲ್ಲಿ ಪ್ರಮುಖ ಪಕ್ಷವಾಗಿ ಹೊಮ್ಮಿದ ಚೀನಿ ಕಮ್ಯುನಿಸ್ಟ್ ಪಕ್ಷದ ಐದು ಪ್ರಮುಖ ಘಟ್ಟಗಳೆಂದರೆ

1. ಆರಂಭದ ಘಟ್ಟ(ಮೇ 1919- ಮೇ 1923
2. ರಾಷ್ಟ್ರೀಯ ಕ್ರಾಂತಿಯ ಹೋರಾಟ(ಜೂನ್ 1923-ಜುಲೈ 1927)
3. ಕೃಷಿಕ ಕ್ರಾಂತಿಯ ಸಮರ (ಆಗಸ್ಟ್ 1927-ಜುಲೈ1937)
4. ಜಪಾನ್-ವಿರೋಧಿ ಪ್ರತಿರೋಧ(ಜುಲೈ 1937-ಆಗಸ್ಟ್-ಸೆಪ್ಟೆಂಬರ್ 1945)
5. ಜನತಾ ವಿಮೋಚನಾ ಸಮರ (ಆಗಸ್ಟ್ 1945 ಸೆಪ್ಟೆಂಬರ್ 1949

ಈ ಐದು ಘಟ್ಟಗಳಲ್ಲಿ ಪಕ್ಷ ಹಲವು ಸೋಲು-ಗೆಲವು, ಏಳು-ಬೀಳುಗಳನ್ನು ಕಂಡಿದೆ. ಈ ಐದು ಹಂತಗಳ ಪ್ರಮುಖ ಘಟನೆಗಳು, ಚೀನಾ ಕ್ರಾಂತಿಯ ಬೆಳವಣಿಗೆಯಲ್ಲಿ ಅವುಗಳ ಪಾತ್ರದ ಬಗ್ಗೆ ನೋಡೋಣ.

1. ಆರಂಭದ ಘಟ್ಟ (1919-1923)


"ನನ್ನ ತಲೆ ಕಡಿಯಿರಿ, ಆದರೂ ಈ ಮುಷ್ಕರ ನಿಲ್ಲುವುದಿಲ್ಲ"

ಚೀನಾ ಕಮ್ಯುನಿಸ್ಟ್ ಪಕ್ಷ ರೈತರ ಪಕ್ಷ. ಮಾವೋ ಮಹಾನ್ ರೈತ ನಾಯಕ. ಚೀನಿ ಕ್ರಾಂತಿ ರೈತ ಕ್ರಾಂತಿ. ಚೀನಾದ ಕ್ರಾಂತಿಯಲ್ಲಿ ಕಾರ್ಮಿಕರಿಗೆ ಪಾತ್ರವಿಲ್ಲ. ಇದು ಜನಜನಿತವಾಗಿರುವ ಒಂದು ತಪ್ಪು ಅಭಿಪ್ರಾಯ. ಚೀನಿ ಕಮ್ಯುನಿಸ್ಟ್ ಪಕ್ಷದ ಸಹ ಜಗತ್ತಿನ ಎಲ್ಲೆಡೆಯಂತೆ ಕಾರ್ಮಿಕ ವರ್ಗದ ರಾಜಕೀಯ ಪಕ್ಷ. 1911 ರ ಕ್ರಾಂತಿಯ ಹೊತ್ತಿಗೆ ಚೀನಾದಲ್ಲಿ ಆರುವರೆ ಲಕ್ಷ ಕಾರ್ಮಿಕರು ಇದ್ದರು. ಮೊದಲ ಮಹಾಯುದ್ಧದ ಸಮಯದಲ್ಲಿ ಸಾಮ್ರಾಜ್ಯಶಾಹಿಗಳು ತಮ್ಮೊಳಗಿನ ಕದನದಲ್ಲಿ, ಚೀಣಾದ ಆರ್ಥಿಕದಲ್ಲಿ ಹಸ್ತಕ್ಷೇಪ ಕಡಿಮೆ ಮಾಡಿದಾಗ, ಚೀನಾದಲ್ಲಿ ರಾಷ್ಟ್ರೀಯಕೈಗಾರಿಕೆ ನಾಗಾಲೋಟದಲ್ಲಿ ಬೆಳೆಯಿತು. ಮೊದಲನೆಯ ಮಹಾಯುದ್ಧದ ಕೊನೆ ಹೊತ್ತಿಗೆ (1918) ಅದು ಇಪ್ಪತ್ತು ಲಕ್ಷ ದಾಟಿತ್ತು. ಈ ಹೊಸವರ್ಗ ಸಮಾಜದಲ್ಲಿ ಪ್ರಮುಖ ಪಾತ್ರ ವಹಿಸಲಾರಂಭಿಸಿದಂತೆ, ತನ್ನದೇ ರಾಜಕೀಯ ಪಕ್ಷ ಹುಟ್ಟುಹಾಕುವುದು ಸ್ವಾಭಾವಿಕವಾಗಿತ್ತು.

1919 ರ ಮೇ 4 ರಂದು ನಡೆದ ವಿದ್ಯಾರ್ಥಿ ದಂಗೆಯ ಹಿನ್ನಲೆ ಹೀಗಿತ್ತು. ಮೊದಲನೆಯ ಮಹಾಯುದ್ದದ ನಂತರ ನಡೆದ ಪ್ಯಾರಿಸ್ ಸಮ್ಮೇಳನದಲ್ಲಿ ಜರ್ಮನಿ ಆಕ್ರಮಿಸಿಕೊಂಡಿದ್ದ ಚೀನಾ ಉತ್ತರ ಭಾಗವನ್ನು ಜಪಾನಿಗೆ ಕೊಡಲು ನಿರ್ಧರಿಸಿತು. ಜಪಾನು ಚೀನಾವನ್ನು ವಸಾಹತುವಾಗಿ ಮಾಡಿಕೊಳ್ಳಲು ಹವಣಿಸುತ್ತಿತ್ತು. ಜಪಾನು ಮೊದಲ ಯುದ್ಧದಲ್ಲಿ ಆಂಗ್ಲೋ - ಫ್ರೆಂಚ್ ಮಿತ್ರ ಪಕ್ಷ ಕೂಟದ ಜತೆಗೆ ಇತ್ತು. ಇದಕ್ಕೆ ವಿದೇಶಿ ಶಕ್ತಿಗಳ ಅಡಿಯಾಳಾಗಿದ್ದ ಚೀನೀ ಯುದ್ಧಕೋರರ ಸರ್ಕಾರ ಪ್ರತಿರೋಧ ಒಡ್ಡದೆ ಸಮ್ಮತಿ ನೀಡಿತ್ತು. ಇದರ ವಿರುದ್ಧ ಮೇ 4, 1919 ರಂದು ಬೀಜಿಂಗ್‌ನಲ್ಲಿ ವಿದ್ಯಾರ್ಥಿಗಳಿಂದ ಆರಂಭವಾದ ಘಟನೆ ಇಡೀ ದೇಶಕ್ಕೆ ಹರಡಿತು. ಶಾಂಘಾಯಿ ಕಾರ್ಮಿಕ ವರ್ಗ ಈ ಚಳುವಳಿಗೆ ಸೇರಿತು. 20 ಪ್ರಾಂತ್ಯಗಳು ಹಾಗೂ 100 ನಗರಗಳಿಗೆ ಈ ಚಳುವಳಿ ಹಬ್ಬಿ ವಿದ್ಯಾರ್ಥಿ-ಕಾರ್ಮಿಕ ದಂಗೆಗಳಾದವು. ಚೀನಾದ ಈ ನಾಚಿಕೆಗೇಡು ಸರ್ಕಾರ ರಾಜೀನಾಮೆ ಕೊಡಬೇಕು. ಚೀನಾ ಈ ಅವಮಾನಕಾರಿ ಒಪ್ಪಂದಕ್ಕೆ ಸಹಿ ಹಾಕಬಾರದ್ದು ಎಂದು ಈ ವಿದ್ಯಾರ್ಥಿ - ಕಾರ್ಮಿಕರ ಚಳುವಳಿಯ ಮುಖ್ಯ ಬೇಡಿಕೆಯಾಗಿತ್ತು. ಶಾಂಘಾಯಿನಲ್ಲಿ ಒಂದೂವರೆ ಲಕ್ಷ ಕಾರ್ಮಿಕರು ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿದ್ದರು. ಅಷ್ಟುಹೊತ್ತಿಗೆ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಮಧ್ಯಮವರ್ಗದ ಹಲವರು ಮಾರ್ಕ್ಸ್‌ವಾದದತ್ತ ಆಕರ್ಷಿತರಾಗಿದ್ದು ಕಮ್ಯುನಿಸ್ಟ್ ಗುಂಪುಗಳು ಚೀನಾದ ಹಲವು ನಗರಗಳಲ್ಲಿ ಕೆಲಸ ಮಾಡುತ್ತಿದ್ದವು. ಮೊದಲ ಕಮ್ಯುನಿಸ್ಟ್ ಗುಂಪುಗಳು ಕಾರ್ಮಿಕರನ್ನು ಸಂಘಟಿಸುವ ಕೆಲಸದಲ್ಲಿ ಅವರ ಮಧ್ಯೆ ಮಾರ್ಕ್ಸ್‌ವಾದಿ ವರ್ಗಜಾಗೃತಿ ಹರಡುವ ಕೆಲಸ ಆರಂಭಿಸಿದರು. ಮೇ 4 ರ ಚಳುವಳಿ ಸರ್ಕಾರವನ್ನು ಈ ಅವಮಾನಕಾರಿ ಒಪ್ಪಂದಕ್ಕೆ ಸಹಿ ಹಾಕದಂತೆ ತಡೆಯಿತು. ಮಾತ್ರವಲ್ಲ, ಕಮ್ಯುನಿಸ್ಟ್ ಗುಂಪುಗಳಲ್ಲಿ ಮತ್ತು ಕಾರ್ಮಿಕ ವರ್ಗದಲ್ಲಿ ಪ್ರಚಂಡ ಆತ್ಮವಿಶ್ವಾಸ ಮೂಡಿಸಿತು. 1922-23 ರಲ್ಲಿ ಕಾರ್ಮಿಕರ ಮುಷ್ಕರಗಳ ಅಲೆಯೇ ಎದ್ದಿತ್ತು. ಒಂದೇ ವರ್ಷದಲ್ಲಿ 3 ಲಕ್ಷ ಕಾರ್ಮಿಕರು ಭಾಗವಹಿಸಿದ್ದ 100 ಕ್ಕೂ ಹೆಚ್ಚು ಮುಷ್ಕರಗಳು ನಡೆದವು. ಇದರಲ್ಲೆಲ್ಲಾ ಪ್ರಸಿದ್ಧವಾಗಿದ್ದು 1923 ಫೆಬ್ರವರಿ 7 ರ ಬೀಜಿಂಗ್ - ಹಂಕಾವು ರೈಲ್ವೆಯ 20 ಸಾವಿರ ಕಾರ್ಮಿಕರ ಮುಷ್ಕರ. 1200 ಕಿ.ಮಿ. ಉದ್ದದ ರೈಲ್ವೇ ಜಾಲವನ್ನು ಸ್ತಬ್ದಗೊಳಿಸಿದ ಈ ಮುಷ್ಕರದ ವಿರುದ್ಧ ಆಗಿನ ಬಿಜಿಂಗ
ಯುದ್ಧಕೋರ ಸರ್ಕಾರ ಅಷ್ಟೇ ಕ್ರೌರ
ತೋರಿಸಿತು. ಸರ್ಕಾರ ಕೈಗೊಂಡ ದಮನದ
50 ಕಾರ್ಮಿಕರು ಸತ್ತರು. ನೂರಾರು ಜ
ಗಾಯಗೊಂಡರು. ರೈಲ್ವೇ ಕಾರ್ಮಿಕರ
ಯೂನಿಯನ್ ಕಟ್ಟಿಕೊಂಡು ಅದರ ಮೊದ
ಸಭೆ ಮಾಡಿದ್ದೇ ಅಪರಾಧವಾಗಿತ್ತು. ಈ
ದಮನದ ವಿರುದ್ಧವೇ ಕಾರ್ಮಿಕರು ಮುಷ್ಕ
ಹೂಡಿದ್ದು. ಜಿಯಾಂಗ್‌ನ ರೈಲ್ವೇ ಸ್ಟೇಶನ
ಎದುರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗಿ
ರೈಲ್ವೇ ಕಾರ್ಮಿಕ ನಾಯಕನೊಬ್ಬನನ್ನು ದೀಪ
ಕಂಬಕ್ಕೆ ಕಟ್ಟಿಹಾಕಿ ಕಾರ್ಮಿಕರನ್ನು ಮುಷ್ಕ
ನಿಲ್ಲಿಸಲು ಹೇಳುವಂತೆ ಒತ್ತಾಯಿಸಲು ಏ
ಬಾರಿ ಚಾಕುವಿನಲ್ಲಿ ಇರಿಯಲಾಯಿತು.
ಆದರೂ "ನನ್ನ ತಲೆ ಕಡಿಯಿರಿ ಬೇಕಾದರ
ಆದರೆ ಈ ಮುಷ್ಕರ ನಿಲ್ಲುವುದಿಲ್ಲ" ಎಂದ
ಅವನ ಉದ್ಗಾರವಾಗಿತ್ತಂತೆ. ಅವನು ಅಲ್ಲ
ಹುತಾತ್ಮನಾದ.

1921 ಜುಲೈ 23 ರಂದು ಎಲ್ಲಾ ಕಮ್ಯುನಿ
ಗುಂಪುಗಳು ಚೀನಾ ಕಮ್ಯುನಿಸ್ಟ್ ಪಕ್ಷ
ಮೊದಲ ರಾಷ್ಟ್ರೀಯ ಅಧಿವೇಶನ ನಡೆ
ಪಕ್ಷವನ್ನು ವಿದ್ಯುಕ್ತವಾಗಿ ಸ್ಥಾಪಿಸಿದರು.
ಶಾಂಘಾಯ್ ಮನೆಯಲ್ಲಿ ಆರಂಭವಾದ
ಸಭೆಯನ್ನು 10 ನಿಮಿಷಗಳ
ನಿಲ್ಲಿಸಬೇಕಾಯಿತು. ಸಾಮ್ರಾಜ್ಯಶಾ
ಏಜೆಂಟ್‌ನೊಬ್ಬ ನೇರವಾಗಿ ಅಲ್ಲಿಗೆ ಬಂದ
ನೋಡಿ. ಶಾಂಘಾಯ ಹತ್ತಿರದ ಜಿಯಾಕ್ಸಿಂ
ಎಂಬ ಚಿಕ್ಕಪಟ್ಟಣದ ಬಳಿ
ಸರೋವರಒಂದರಲ್ಲಿರುವ ದೋಣಿಯ
ಮೊದಲ ರಾಷ್ಟ್ರೀಯ ಅಧಿವೇಶನ ಆಮೇ
ಮುಂದುವರೆಯಿತು. ಜುಲೈ 31 ರಂ
ಮುಗಿದ ಅಧಿವೇಶನದಲ್ಲಿ ಪಕ್ಷ
ಕಾರ್ಯಕ್ರಮವನ್ನು ಅಂಗೀಕರಿಸಲಾಯಿತು.

1923 ರ ಬೀಜಿಂಗ್-ಹಂಕೌ ರೈಲ್ವೇ ಕಾರ್ಮಿಕರ ಮುಷ್ಕರ





...ಕ್ರಾಂತಿ ಚಿನ್ನದ ಹಬ್ಬ (1949-99)



...ೆಯಲಿ ಹ್ಯಾಂಗ....

50 ವರ್ಷಗಳು ಕಳೆದಿವೆ - ಈ ಅಕ್ಟೋಬರ್ ... ಮಹಾನ್ ಘಟನೆ. ಮಹಾನ್ ಅಕ್ಟೋಬರ್ ... ಮನುಕುಲದ ಮುನ್ನಡೆ ಮೇಲೆ ಪ್ರಭಾವ ...ದ ಕ್ರಾಂತಿ ಸಮಾಜವಾದದ ಮುನ್ನಡೆಯನ್ನು ...ಕಾಲ ಪಾಳೆಯಗಾರಿ ಪದ್ಧತಿಯಲ್ಲಿ ನಲುಗಿದ ...ಲ್ಲಿ ಈ ಕ್ರಾಂತಿ ಹೇಗೆ ಆಯಿತು ಎಂಬುದು 50 ...ದ ಜತೆ ಹಲವು ಸಾಮ್ಯಗಳನ್ನು ಹೊಂದಿರುವ ...ಚಕ ಹೋರಾಟದ ಕಿರು ಪರಿಚಯ. ಭಾರತದ ...ದ್ಧ ಬದುಕಿಗಾಗಿ ಹೋರಾಟದಲ್ಲಿ ದಾರಿ

ಕ್ರಾಂತಿಕಾರಿಗಳನ್ನು ಕೊಮಿಂಟಾಂಗ್‌ಗೆ ಆಕರ್ಷಿಸಿ, ಅದನ್ನು ಚೀನಿ ರಾಷ್ಟ್ರೀಯ ಕ್ರಾಂತಿಯ ಪ್ರಧಾನ ಸಂಘಟನೆಯಾಗಿಸಬೇಕು ಎಂಬ ರಾಜಕೀಯ ತಿಳುವಳಿಕೆಯ ಆಧಾರದ ಮೇಲೆ ಪಕ್ಷ ಕೆಲಸ ಮಾಡಲಾರಂಭಿಸಿತು.

1924 ರ ಜನವರಿಯಲ್ಲಿ ಕೊಮಿಂಟಾಂಗ್‌ನ ಮೊದಲ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ನಡೆಯಿತು. ಕಮ್ಯುನಿಸ್ಟರು ಈ ಅಧಿವೇಶನದಲ್ಲಿ ಭಾಗವಹಿಸಿದರು. ಅದರ ಕೇಂದ್ರೀಯ ಕಾರ್ಯಕಾರಿ ಸಮಿತಿಗೆ ಆಗಿನ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಲಿ ದಝಾವೋ ಮತ್ತು ಮಾವೋ ಸೇರಿದಂತೆ ಹಲವು ಕಮ್ಯುನಿಸ್ಟರು ಆಯ್ಕೆಯಾದರು. 1911 ರ ರಾಷ್ಟ್ರೀಯ ಕ್ರಾಂತಿ ವಿಫಲವಾಗಲಿಕ್ಕೆ ಕ್ರಾಂತಿಕಾರಿ ಸೈನ್ಯ ಮತ್ತು ಸಾಮಾನ್ಯ ಜನತೆಯ ಬೆಂಬಲ ಗಳಿಸದ್ದು ಕಾರಣ. ಈ ಎರಡೂ ಕೊರತೆಗಳನ್ನು ಕೊಮಿಂಟಾಂಗ್ ತುಂಬಿಕೊಳ್ಳಬೇಕು ಎಂದು ಸನ್-ಯಾಟ್-ಸೆನ್. ರಾಷ್ಟ್ರೀಯ ಕ್ರಾಂತಿಕಾರಿ ಸೈನ್ಯವನ್ನು ಕಟ್ಟಲು ಒಂದು ಮಿಲಿಟರಿ ಅಕಾಡೆಮಿಯನ್ನು ಹುವಾಂಗ್‌ಪುದದಲ್ಲಿ ಸ್ಥಾಪಿಸಲು ನಿರ್ಧರಿಸಿದ್ದು! ಈ ಅಧಿವೇಶನದ ಪ್ರಮುಖ ನಿರ್ಣಯಗಳಲ್ಲಿ ಒಂದಾಗಿತ್ತು.

ಗುವಾಂಗ್‌ಡೊಂಗ್ ಪ್ರಾಂತ್ಯ ಚೀನಾದ ದಕ್ಷಿಣ ಪೂರ್ವ ತೀರದಲ್ಲಿದ್ದು ಈಗ ರಾಷ್ಟ್ರೀಯ ಕ್ರಾಂತಿಕಾರಿ ಚಳುವಳಿಯ ಪ್ರಬಲ ಪ್ರದೇಶವಾಗಿತ್ತು. ಹುವಾಂಗ್‌ಪು ಮಿಲಿಟರಿ ಅಕಾಡೆಮಿಯಲ್ಲಿ ರಾಜಕೀಯ - ಸೈದ್ಧಾಂತಿಕ

ಈ ದಂಡಯಾತ್ರೆಯಲ್ಲಿ ಸೈನ್ಯ ಎಷ್ಟು ವೇಗವಾಗಿ ಮುನ್ನಡೆಯಿತೆಂದರೆ ಆರು ತಿಂಗಳಲ್ಲಿ ಅರ್ಧ ಚೀನವನ್ನು ಪಾಳೆಯಗಾರ/ವಿದೇಶಿ ಸಾಮ್ರಾಜ್ಯಶಾಹಿ ಕಪಿಮುಷ್ಟಿಯಿಂದ ಬಿಡುಗಡೆ ಮಾಡಿತ್ತು. ಅದು ದಂಡಯಾತ್ರೆಯಲ್ಲಿ ಹೋಗುತ್ತಿದ್ದಂತೆ ಸ್ಥಳೀಯ ಕಾರ್ಮಿಕರ ಸಶಸ್ತ್ರ ದಂಗೆ ಪೂರಕವಾಗಿ ಕೆಲಸ ಮಾಡುತ್ತಿತ್ತು. ಸಶಸ್ತ್ರ ರೈತರ ದಂಗೆ ಸಹಾಯ ಮಾಡುತ್ತಿತ್ತು. ಇದರಲ್ಲಿ ಅತ್ಯಂತ ಹೆಸರುವಾಸಿಯಾಗಿದದ್ದು ಶಾಂಘಾಯ ಕಾರ್ಮಿಕರ ಸಶಸ್ತ್ರದಂಗೆ. ಅಕ್ಟೋಬರ್ 26 ಮತ್ತು ಮಾರ್ಚ್ 27 ರ ನಡುವೆ ಶಾಂಗಾಯ್ ಕಾರ್ಮಿಕರು ಮೂರು ಬಾರಿ ದಂಗೆಯೆದ್ದರು. ಮೂರನೇಯದು ಸಫಲವಾಗಿತ್ತು. 2 ದಿನಗಳ ಕಾಲ ಕಾರ್ಮಿಕರು ಸರ್ಕಾರ ನಡೆಸಿದ್ದರು. 8 ಲಕ್ಷ ಕಾರ್ಮಿಕರು ಮಹಾಯುದ್ಧದಲ್ಲಿ ಭಾಗವಹಿಸಿದರು.

ರಾಷ್ಟ್ರೀಯ ಕ್ರಾಂತಿಕಾರಿ ಹೋರಾಟ ಹೀಗೆ ತಾರಕಕ್ಕೇರುವುದರಲ್ಲಿ ಕಮ್ಯುನಿಸ್ಟ್-ಕೋಮಿಂಟಾಂಗ್ ಸಹಕಾರ ಮುಖ್ಯಕಾರಣವಾಗಿತ್ತು. ಆದರೆ ಅದೇ ಸಮಯದಲ್ಲೇ ಈ ರಾಷ್ಟ್ರೀಯ ಕ್ರಾಂತಿಯ ನಾಯಕತ್ವಕ್ಕಾಗಿ ಸಂಘರ್ಷವೂ ನಡೆದಿತ್ತು. ಕೊಮಿಂಟಾಂಗ್‌ನಲ್ಲಿ ಎಡವಿಭಾಗ ಕಮ್ಯುನಿಸ್ಟರ ಜತೆ ನಿಜವಾದ ಸಂಯುಕ್ತ ರಂಗ ಹೋರಾಟದ ಭಾವನೆ ಹೊಂದಿದ್ದರೆ ಬಲ ವಿಭಾಗ ಕಮ್ಯುನಿಸ್ಟರನ್ನು ಸಂಶಯದಿಂದ ನೋಡುತ್ತಿತ್ತು.

ಮೇಲೆ ಭಾರಿ ದಮನ ಹರಿಯಬಿಟ್ಟಿತು. ಕಮ್ಯುನಿಸ್ಟರ ಬೇಟೆಯಾಡಿ ಭಾರಿ ಸಂಖ್ಯೆಯಲ್ಲಿ ಕೊಲ್ಲಲಾಯಿತು. ಆತ ಮಿಲಿಟರಿ ಅಕಾಡೆಮಿಯನ್ನು ಪ್ರತಿಗಾಮಿ ಪ್ರತಿ-ಕ್ರಾಂತಿಕಾರಿ ಕೇಂದ್ರವಾಗಿ ಬದಲಾಯಿಸಲು ಪ್ರಯತ್ನಿಸಿದ. ಅದೇ ವರ್ಷ ಜುಲೈರ ವುಹಾನನಲ್ಲಿ ಕಮ್ಯುನಿಸ್ಟ್ ಕ್ರಾಂತಿಕಾರಿ ಸೈನಿಕರ ಮೇಲೆ ಧಾಳಿ ಮಾಡಿ ನರಮೇಧ ನಡೆಸಿದ. ನಾಂಜಿಂಗ್‌ನಲ್ಲಿ ಆತ ಕಮ್ಯುನಿಸ್ಟ್-ವಿರೋಧಿ ಸರ್ವಾಧಿಕಾರ ಸ್ಥಾಪಿಸಿದ. ಈ ದ್ರೋಹದಿಂದ ಉತ್ತರದ ದಂಡಯಾತ್ರೆ ವಿಫಲವಾಯಿತು. ಜುಲೈನಲ್ಲಿ ಕೊಮಿಂಟಾಂಗ್‌ನಿಂದ ಕಮ್ಯುನಿಸ್ಟರನ್ನು ಕಿತ್ತುಹಾಕುವ ನೀತಿಯನ್ನು ಎಡವಿಭಾಗದವರ ವಿರೋಧವಿದ್ದಾಗೂ ಜಿಯಾಂಗ್ ಜಾರಿ ಮಾಡಿದ. ಕಮ್ಯುನಿಸ್ಟ್ ಪಕ್ಷ ಸಹ ಕೊಮಿಂಟಾಂಗ್‌ನ ಈ ನೀತಿ ವಿರೋಧಿಸಿ ತನ್ನ ಸಹಕಾರವನ್ನು ಹಿಂತೆಗೆದುಕೊಂಡಿತು. ಈ ರೀತಿ ಚೀನಿ ಕ್ರಾಂತಿಯ ಉಜ್ವಲ ಅಧ್ಯಾಯ ದುರಂತದಲ್ಲಿ ಕೊನೆಗಂಡಿತು. 60 ಸಾವಿರಕ್ಕೇರಿದ್ದ ಪಕ್ಷದ ಸದಸ್ಯತ್ವ ಈ ದುರಂತದ ನಂತರ 10 ಸಾವಿರಕ್ಕೆ ಇಳಿಯಿತು.

ಈ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷ ರೈತ, ಕಾರ್ಮಿಕರ ಹೋರಾಟಗಳ ಸಂಘಟನೆಗೂ ಅಷ್ಟೇ ಮಹತ್ವ ನೀಡಿತ್ತು. ರಾಷ್ಟ್ರೀಯ ಮಟ್ಟದ ರೈತರ ಕಾರ್ಮಿಕರ ಸಂಘಟನೆಗಳನ್ನು ಕಟ್ಟಿ ಅಧಿವೇಶನಗಳನ್ನು ನಡೆಸಲಾಯಿತು. ಗುವಾಂಗ್‌ಝ್‌ನಲ್ಲಿ ಪಕ್ಷ ರೈತ ಚಳುವಳಿಯ ರಾಷ್ಟ್ರೀಯ ವಿದ್ಯಾಲಯವೊಂದನ್ನು ಸ್ಥಾಪಿಸಿತು. ರೈತ ನಾಯಕರನ್ನು, ಕಾರ್ಯಕರ್ತರನ್ನು ತರಬೇತಿ ಮಾಡಲು ಆರು ತಿಂಗಳುಗಳ ತೀವ್ರ ತರಬೇತಿ ಕೊಡಲಾಗುತ್ತಿತ್ತು. ಮಾವೋ ಇದರಲ್ಲಿ ಪ್ರಧಾನ ಪಾತ್ರ ವಹಿಸಿದರು. ರೈತ ಚಳುವಳಿಯ ಬಗೆಗಲ್ಲದೆ, ಮಾರ್ಕ್ಸ್‌ವಾದ-ಲೆನಿನ್‌ವಾದ, ಮಿಲಿಟರಿ ತಂತ್ರಗಳ ಬಗೆಗೂ ಕ್ಲಾಸುಗಳಿರುತ್ತಿದ್ದವು. ಮಿಲಿಟರಿ ತರಬೇತಿಯೂ ಇದರ ಭಾಗವಾಗಿತ್ತು. ರೈತ ಚಳುವಳಿ ಈ ಅವಧಿಯಲ್ಲಿ ಎಷ್ಟು ವೇಗವಾಗಿ ಬೆಳೆಯಿತೆಂದರೆ, ಜೂನ್ 1927 ರ ಹೊತ್ತಿಗೆ ರೈತ ಸಂಘಟನೆ 15 ಪ್ರಾಂತ್ಯಗಳಿಗೆ ಹರಡಿದ್ದು ಸದಸ್ಯತ್ವ ಒಂದು ಕೋಟಿಗೇರಿತ್ತು.

2. ರಾಷ್ಟ್ರೀಯ ಕ್ರಾಂತಿ ಸಮರ (1923-27)

'ಕೊಮಿಂಟಾಂಗ್ ಜತೆ ಸೇರಿ ಈ ಪಾಳೆಯಗಾರರ ಹುಟ್ಟಡಗಿಸೋಣ ಬನ್ನಿ'


ಚೀನಾ ಆಗ ನೂರಾರು ಪಾಳೆಯಗಾರರ, ಅವರನ್ನು ಕಪಿಮುಷ್ಟಿಯಲ್ಲಿಟ್ಟುಕೊಂಡ ವಿದೇಶಿ ಶಕ್ತಿಗಳ ಆಟದ ಕಣವಾಗಿತ್ತು. ಇದರ ವಿರುದ್ಧ ಡಾ|| ಸನ್-ಯಾಟ್-ಸೆನ್‌ರ ಕೊಮಿಂಟಾಂಗ್ ಹೋರಾಟದಲ್ಲಿ ತೊಡಗಿತ್ತು. ಹಲವು ಕಡೆ ಕೋಮಿಂಟಾಂಗ್ ಸ್ಥಳೀಯ ಪಾಳೆಯಗಾರರ ಜತೆ ಸಶಸ್ತ್ರ ಹೋರಾಟಕ್ಕೆ ರಿಪಬ್ಲಿಕನ್ ಸೈನ್ಯ ಕಟ್ಟಲು ಆರಂಭಿಸಿತ್ತು. ಚೀನಾದ ರೈತರು, ಕಾರ್ಮಿಕರು ತಮ್ಮ ಸಂಘ ಕಟ್ಟಿಕೊಂಡು ಹೋರಾಡಲು ಆರಂಭಿಸಿದಂತೆ ಅವರೂ ಈ ಪಾಳೆಯಗಾರರ ಪಡೆಯನ್ನು ಎದುರಿಸಲು ಸಶಸ್ತ್ರ ಸೈನ್ಯ ಕಟ್ಟುವ ಅನಿವಾರ್ಯತೆ ಒದಗಿ ಬಂದಿತ್ತು. ಈ ಎರಡೂ ಚಳುವಳಿಗಳು ಸಾಮಾನ್ಯ ಶತ್ರುವನ್ನು ಹೊಂದಿದ್ದು, ಪರಸ್ಪರ ಸಹಕರಿಸಿದರೆ ಪ್ರಯೋಜನ ಎಂದೆನಿಸತೊಡಗಿತ್ತು. ಡಾ. ಸನ್-ಯಾಟ್-ಸೆನ್‌ರ ಅಂಗೀಕರಿಸಿದ ಮೂರು ನೀತಿಗಳು - ಸೋವಿಯತ್ ಒಕ್ಕೂಟದ ಜತೆ ಮೈತ್ರಿ, ಕಮ್ಯುನಿಸ್ಟ್ ಪಕ್ಷದ ಜತೆ ಮೈತ್ರಿ, ಮತ್ತು ರೈತ-ಕಾರ್ಮಿಕರ ಹೋರಾಟಗಳಿಗೆ ಬೆಂಬಲ - ಇವುಗಳಿಂದ ಕಮ್ಯುನಿಸ್ಟ್ ಪಕ್ಷ ಸಹ ಪ್ರಭಾವಿತವಾಗಿತ್ತು. 1923 ಜೂನ್‌ನಲ್ಲಿ ನಡೆದ ಮೂರನೇ ಮಹಾಧಿವೇಶನದಲ್ಲಿ ಈಗಿನ ಅವಧಿಯಲ್ಲಿ 'ರಾಷ್ಟ್ರೀಯ ಕ್ರಾಂತಿಕಾರಿ ಚಳುವಳಿ' ಪ್ರಧಾನ ಕರ್ತವ್ಯ. ಕೊಮಿಂಟಾಂಗ್ ಈ ರಾಷ್ಟ್ರೀಯ ಕ್ರಾಂತಿಯ ನಾಯಕನಾಗಬೇಕು. ಇದಕ್ಕಾಗಿ ಅದರ ಜತೆಗೆ ಕಮ್ಯುನಿಸ್ಟ್ ಪಕ್ಷ ಸಹಕರಿಸಬೇಕು ಎಂದು ನಿರ್ಣಯಿಸಿತು. ಪಕ್ಷದ ಸದಸ್ಯರು ಕೊಮಿಂಟಾಂಗ್ ಸೇರಿ ಅದರ ಸದಸ್ಯರ ಹಾಗೆ ಕೆಲಸ ಮಾಡಬೇಕು. ಇಡೀ ದೇಶದ

ಯುದ್ಧ ತರಬೇತಿ ಪಡೆದ ಕಾರ್ಯಕರ್ತರೇ ರಾಷ್ಟ್ರೀಯ ಕ್ರಾಂತಿಕಾರಿ ಸೈನ್ಯದ ಬೆನ್ನೆಲುಬಾಗಿದ್ದರು. ಚೌ-ಎನ್-ಲಾಮ ಈ ಅಕಾಡೆಮಿಯ ರಾಜಕೀಯ ವಿಭಾಗದ ಡೈರೆಕ್ಟರ್ ಆಗಿ ಕೆಲಸ ಮಾಡಲು ಪಕ್ಷ ಕಳಿಸಿತು. ಈ ಸನ್ನಿವೇಶದಲ್ಲಿ ಗುವಾಂಗ್‌ಡೊಂಗ್ ಪ್ರಾಂತ್ಯದಲ್ಲಿ ಕಾರ್ಮಿಕರ, ರೈತರ ಸಂಘಟನೆಗಳು ಪ್ರಬಲವಾಗಿ ಏಳಲಾರಂಭಿಸಿದವು. ಈ ಅಕಾಡೆಮಿಯಲ್ಲಿ ತಯಾರಾದ ನಾಯಕರು ಒಂದು ಲಕ್ಷಕ್ಕೂ ಹೆಚ್ಚು ಸೈನಿಕರಿರುವ ಸೈನ್ಯ ಕಟ್ಟಿದರು. ಈ ಸೈನ್ಯವನ್ನು ಸೇರಿದ್ದು ಹೋರಾಟದಲ್ಲಿ ತೀವ್ರ ರಾಜಕೀಯ ಪ್ರಜ್ಞೆ ಪಡೆದ ಕಾರ್ಯಕರ್ತರು, ರೈತರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು 1923-27 ರ ಅವಧಿಯಲ್ಲಿ ಈ ಸೈನ್ಯ ಮೂರು ಮಹಾನ್ ದಂಡಯಾತ್ರೆಗಳನ್ನು ಹಮ್ಮಿಕೊಂಡಿತ್ತು. ಎರಡು ಪೂರ್ವಮುಖಿ ದಂಡಯಾತ್ರೆಯಲ್ಲಿ ಗುವಾಂಗ್ ಡೊಂಗ್‌ನ ಪಾಳೆಯಗಾರಿ ಯುದ್ಧಕೋರರನ್ನು ಸೋಲಿಸಿ ಹುಟ್ಟಡಗಿಸಿ, ಈ ಪ್ರಾಂತ್ಯ ಕ್ರಾಂತಿಕಾರಿ ನೆಲೆಯಾಗಿ ಪರಿವರ್ತಿಸಲಾಯಿತು. ಇದು ನಡೆದದ್ದು 1925 ರಲ್ಲಿ. 1926 ರಲ್ಲಿ ದಕ್ಷಿಣ-ಪೂರ್ವದ ಗುವಾಂಗ್ ಡೊಂಗ್ ಪ್ರಾಂತ್ಯದಿಂದ ಹೊರಟು ಉತ್ತರದ ಬಿಜಿಂಗ್ ಬಳಿ ಸೇರಿದ್ದ ಪಾಳೆಯಗಾರರ ಏಳೂವರೆ ಲಕ್ಷ ಬಲದ ಸೈನ್ಯದ ಮೇಲೆ ದಾಳಿ ಮಾಡಿ ಸೋಲಿಸಲು ಉತ್ತರದ ದಂಡಯಾತ್ರೆ ಆರಂಭವಾಯಿತು. ರಾಷ್ಟ್ರೀಯ ಕ್ರಾಂತಿಕಾರಿ ಸೈನ್ಯ ಮೂರು ಪ್ರತ್ಯೇಕ ಹಾದಿಗಳಲ್ಲಿ ಉತ್ತರದ ದಂಡಯಾತ್ರೆಗೆ ಮುನ್ನಡೆಯಿತು.

ದಲ್ಲಾಳಿ ಬಂಡವಾಳಶಾಹಿ, ದೊಡ್ಡ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಈ ಬಲ ವಿಭಾಗಕ್ಕೆ ಈ ಬೆಳವಣಿಗೆ ಇರಸುಮುರುಸಿನದಾಗಿತ್ತು. ಕೊಮಿಂಟಾಂಗ್‌ನ ಸದಸ್ಯರಲ್ಲಿ ಎಡ-ವಿಭಾಗ ಮತ್ತು ಕಮ್ಯುನಿಸ್ಟರಿಗೆ ಭಾರೀ ಬಹುಮತವಿತ್ತು. ಆದರೆ ಕೇಂದ್ರೀಯ ಸಮಿತಿಗಳಲ್ಲಿ ಬಲವಿಭಾಗ ಪಿತೂರಿಗಳನ್ನು ಮಾಡಿ ಅದರ ಬಲಕ್ಕಿಂತ ಹೆಚ್ಚಿನ ಸಂಖ್ಯೆ ಪಡೆಯುತ್ತಿತ್ತು. ಇದು ಸಾಧ್ಯವಾಗಲಿಕ್ಕೆ ಆಗಿನ ಕಮ್ಯುನಿಸ್ಟ್ ಪಕ್ಷದ ಚೆನ್ ದುಕ್ಸಿಯ ಶರಣಾಗತಿ ಧೋರಣೆಯೂ ಕಾರಣ. ನಮ್ಮ ಪ್ರದರ್ಶನ ಮಾಡಿದರೆ ಬಲ ವಿಭಾಗ ಈ ಸಂಯುಕ್ತ ರಂಗ ಮುರಿಯಬಹುದು. ಅದು ಕ್ರಾಂತಿಗೆಮಾರಕ ಎಂಬ ಧೋರಣೆಯ ಮೇರೆಗೆ ಬಲವಿಭಾಗ ಒಲ್ಲೆಸುವ ನೀತಿಯನ್ನು ಅನುಸರಿಸಿದ್ದೇ ಮುಂದೆ ದುರಂತಕ್ಕೆ ಕಾರಣವಾಯಿತು. ಈ ಬಲವಿಭಾಗದ ನಾಯಕ ಚಿಯಾಂಗ್-ಕೈ-ಶೇಕ್ ಆಗಿದ್ದ. 1925 ರ ಮಾರ್ಚ್‌ನಲ್ಲಿ ಸನ್-ಯಾಟ್-ಸೆನ್ ನಿಧನದ ನಂತರವಂತೂ ಚಿಯಾಂಗ್-ಕೈ-ಶೇಖ್‌ರ ಬಲವಿಭಾಗದ ಆಟಾಟೋಪ ಜಾಸ್ತಿಯಾಯಿತು.

ಏಪ್ರಿಲ್ 1927 ರಲ್ಲಿ ಶಾಂಘಾಯ್‌ನಲ್ಲಿ ಚಿಯಾಂಗ್-ಕೈ-ಶೇಕ್‌ರ ಬಲ ವಿಭಾಗ ಕಾರ್ಮಿಕರ

ಹುವಾಂಗ್ ಪು ಮಿಲಿಟರಿ ಅಕಾಡೆಮಿಯ ರಾಜಕೀಯ ವಿಭಾಗದ ಡೈರೆಕ್ಟರ್ ಆಗಿ ಚೌ-ಎನ್-ಲಾಯ್ (1924)



3. ಕೃಷಿಕ ಕ್ರಾಂತಿಯ ಸಮರ (1927-37)

'ಜಮೀನುದಾರರ ಭೂಮಿ ಕಿತ್ತುಕೊಂಡು ಬಡ ರೈತರಿಗೆ ಹಂಚೋಣಬನ್ನಿ!'

ಕಮ್ಯುನಿಸ್ಟ್ ಪಕ್ಷ ಚಿಯಾಂಗ್‌ನ ಈ ದ್ರೋಹವನ್ನು ನೋಡುತ್ತಾ ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ಚಿಯಾಂಗ್‌ನ ಈ ದ್ರೋಹ ಎದುರಿಸಬೇಕಾದರೆ ಪಕ್ಷ ತನ್ನದೇ ಕಾರ್ಮಿಕ, ರೈತರ ಕೆಂಪು ಸೈನ್ಯ ಕಟ್ಟಬೇಕು. ಜಮೀನುದಾರರ ಭೂಮಿ ಕಿತ್ತುಕೊಂಡು ಬಡ ರೈತರಿಗೆ ಹಂಚುವ ನೀತಿ ಮೂಲಕ ತೀವ್ರ ಕೃಷಿಕ ಕ್ರಾಂತಿ ತಂದು ಪ್ರಬಲ ಗ್ರಾಮೀಣ ನೆಲೆಗಳನ್ನು ಸ್ಥಾಪಿಸಬೇಕು ಎಂಬ ನಿರ್ಣಯಕ್ಕೆ ಪಕ್ಷ ಬಂತು. ಹಿಂದಿನ ಅವಧಿಯಲ್ಲಿ ರಾಷ್ಟ್ರೀಯ ಬೂರ್ಜ್ವಾ ವರ್ಗದ ಮತ್ತು ಕೋಮಿಂಟಾಂಗ್‌ಗಳ ಬಗ್ಗೆ ಇದ್ದ ತಮ್ಮ ಕಲ್ಪನೆ, ಭ್ರಮೆಗಳನ್ನು ಬಿಟ್ಟುಕೊಟ್ಟು ಹೊಸ ಸಮರಕ್ಕೆ ಸಜ್ಜಾಯಿತು. 1927 ರಲ್ಲೇ ಪ್ರಸಿದ್ಧ ನಾನ್ ಚಿಂಗ್ ದಂಗೆಯ ಮೂಲಕ ಜಿಯಾಂಗ್ ಕೈ-ಶೇಕ್‌ರ ಹತೋಟಿಯಲ್ಲಿರುವ ಪ್ರದೇಶಗಳ ಮೇಲೆ ಕೆಂಪು ಸೈನ್ಯದ ದಂಡಯಾತ್ರೆ ಆರಂಭವಾಯಿತು. ನಾನ್ ಚಿಂಗ್‌ನ ಮೇಲೆ ಆಗಸ್ಟ್ 1, 1927 ರಂದು ದಾಳಿ ಮಾಡಿದ ದಿನವನ್ನೇ ಕೆಂಪು ಸೈನ್ಯದ ಜನ್ಮದಿನವಾಗಿ ಪರಿಗಣಿಸಲಾಗುತ್ತದೆ. ಈಗಲೂ ಚೀನಾದಲ್ಲಿ ಅದನ್ನು 'ಕೆಂಪುಸೈನ್ಯ'ದ ಹುಟ್ಟು ದಿನವಾಗಿ ಆಚರಿಸಲಾಗುತ್ತದೆ.

ಸೆಪ್ಟೆಂಬರ್ 1927 ರಲ್ಲಿ ಮಾವೋರ ನೇರ ನಾಯಕತ್ವದಲ್ಲಿ ಹುನಾನ್ ಮತ್ತು ಜಿಯಾಂಗ್ ಕ್ಸಿ ಪ್ರಾಂತ್ಯಗಳ ಗಡಿ ಪ್ರದೇಶದ 'ಸುಗ್ಗಿ ದಂಗೆ'ಗಳು ನಡೆದು ಆ ಪ್ರದೇಶ ವಿಮೋಚಿತ ಕ್ರಾಂತಿಕಾರಿ ನೆಲೆಗಳಾದವು. ಇದೇ ರೀತಿ ಡಿಸೆಂಬರ್‌ನಲ್ಲಿ ಗುವಾಂಗ್ ಝುನಲ್ಲೂ ಸಶಸ್ತ್ರ ದಂಗೆಯಾಯಿತು. 1929 ಕೊನೆಯ ಹೊತ್ತಿಗೆ ಇಂತಹ ನೂರು ದಂಗೆಗಳನ್ನು ಪಕ್ಷ ಸಂಘಟಿಸಿತ್ತು. ಈ ದಂಗೆಗಳ ಸಂಘಟನೆಯಾಗುತ್ತಿದ್ದಂತೆ ಕೆಂಪು ಸೈನ್ಯದ ಹಲವಾರು ತುಕಡಿಗಳನ್ನು ರಚಿಸಲಾಯಿತು. ಇದು ಪಕ್ಷದ ನೇರ ನಿಯಂತ್ರಣದಲ್ಲಿದ್ದ ರೈತ, ಕಾರ್ಮಿಕರ ಸೈನ್ಯವಾಗಿತ್ತು. ಅನುಭವದ ಆಧಾರದ ಮೇಲೆ ಮಾವೋರ ಸೂಚನೆಯಂತೆ ಪಕ್ಷ ಗ್ರಾಮೀಣ ನೆಲೆಗಳನ್ನು ಸ್ಥಾಪಿಸಿ ನಗರಗಳನ್ನು ಸುತ್ತುವರೆಯುವ ಕ್ರಾಂತಿಕಾರಿ ರಣನೀತಿಯನ್ನು ಅಂಗೀಕರಿಸಿತು. ದೊಡ್ಡ ಭೂಮಾಲಕರ ಜಮೀನನ್ನು ಕಸಿದುಕೊಂಡು ಬಡ ಭೂಹೀನ ರೈತರಲ್ಲಿ ಹಂಚುವ ಸ್ಪಷ್ಟ ನೀತಿಯನ್ನು ಪಕ್ಷ ಮಾವೋ ಸೂಚನೆಯ ಮೇರೆಗೆ ಅಂಗೀಕರಿಸಿತು. ಹಿಂದಿನ ನಾಯಕತ್ವ ಇಂತಹ ರೈತ ಚಳುವಳಿಗಳನ್ನು ಎಡ ಪ್ರಮಾದಗಳೆಂದು ಟೀಕಿಸಿದ್ದರು. ಪಕ್ಷದ ಈ ಹೊಸ ನೀತಿಯಿಂದ ಕ್ರಾಂತಿಕಾರಿ ಚಳುವಳಿ ವೇಗವಾಗಿ ಬೆಳೆಯಿತು. ಜಿಯಾಂಗ್‌ಗಾಂಗ್ ಪರ್ವತ ಪ್ರದೇಶವಲ್ಲದೆ ಹುಬೆಯ, ಹುನಾನ್, ಹೆನಾನ್, ಲಿಗ್‌ಹುಯ, ಝುಜಿಯಾಂಗ್, ಗುವಾಂಗ್ ಡೊಂಗ್, ಗುವಾಂಗ್‌ಕ್ಸಿ, ಸಿಚುವಾನ್, ಶಾಂಕ್ಸಿ ಪ್ರಾಂತ್ಯಗಳಲ್ಲಿ ಹಲವು ಕ್ರಾಂತಿಕಾರಿ ನೆಲೆಗಳನ್ನು ಸ್ಥಾಪಿಸಿ ಪಕ್ಷ ಆಡಳಿತ ನಡೆಸಲು ಆರಂಭಿಸಿತು. ಇದು ಬಲ ಕೋಮಿಂಟಾಂಗ್ ನಿಯಂತ್ರಣದ ಪ್ರದೇಶಗಳ ಮೇಲೆ ದಂಡಯಾತ್ರೆ ಆರಂಭವಾಯಿತು. ಅಲ್ಲದೆ ಕೊಮಿಂಟಾಂಗ್ ಕ್ರಾಂತಿಕಾರಿ ನೆಲೆಗಳ ಮೇಲೆ ಮಾಡಿದ ದಾಳಿಯನ್ನು ಹಿಮ್ಮೆಟ್ಟಿಸಲಾಯಿತು. 1930 ರಲ್ಲಿ 1 ಲಕ್ಷ ಇದ್ದ ಸೈನ್ಯದ ಬಲ 1933 ರಲ್ಲಿ 3 ಲಕ್ಷಕ್ಕೇರಿತ್ತು. ಜಿಯಾಂಗ್ ಗಾಂಗ್ ಪರ್ವತ ಪ್ರದೇಶದಲ್ಲಿ ಹತ್ತಿದ ಕಿಡಿ ಇಡೀ ದೇಶದಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿತ್ತು.

ಮಾವೋರ ನೀತಿಗಳ ಆಧಾರದ ಮೇಲೆ ಪಕ್ಷ, ಕ್ರಾಂತಿಕಾರಿ ಚಳುವಳಿ ಭಾರೀ ಮುನ್ನಡೆ ಸಾಧಿಸಿದರೂ, ಕೇಂದ್ರೀಯ ನಾಯಕತ್ವದಲ್ಲಿ ವಾಂಗ್ ಮಿಂಗ್ ಎನ್ನುವನ ಪ್ರಭಾವ ಜಾಸ್ತಿಯಾಗುತ್ತಾ ಹೋಗಿ ತೀವ್ರ ಎಡಪಂಥವಾದಿ ತಪ್ಪುಗಳು ಆಗತೊಡಗಿದವು. ಅವರನ್ನು ವಿರೋಧಿಸಿದವರ ಮೇಲೆ ಶಿಸ್ತುಕ್ರಮ, ಅತಿರೇಕ ಮಾಡಿದ್ದರಿಂದ ಪಕ್ಷದ ಸಂಘಟನೆಗೆ ತೀವ್ರ ಅಪಾಯ ಒದಗಿತ್ತು. ಇದು ಕೆಂಪು ಸೈನ್ಯ, ಸೈನ್ಯದ ನಿಯಂತ್ರಣದಲ್ಲಿರುವ ಪ್ರದೇಶಗಳ ಮೇಲೂ ಪರಿಣಾಮ ಬೀರಿತು. ವಾಂಗ್‌ಮಿಂಗ್ ನಾಯಕತ್ವ ಮಾಡಿದ ಗಂಭೀರ ಕ್ರಾಂತಿಕಾರಿ ನೆಲೆಗಳಲ್ಲಿ ಶೇಕಡಾ 90 ರಷ್ಟು ಪ್ರದೇಶ ಕಳೆದುಕೊಳ್ಳಬೇಕಾಯಿತು. ಇದೇ ಅವಧಿಯಲ್ಲಿ ಚಿಯಾಂಗ್-ಕೈ-ಶೇಕ್‌ನ ಸೈನ್ಯ ಚೀನಾ ಕೇಂದ್ರ ಪ್ರದೇಶದ ಕ್ರಾಂತಿಕಾರಿ ನೆಲೆಗಳ ಮೇಲೆ ಐದು ಬಾರಿ ದಾಳಿ ನಡೆಸಿದ. ಪ್ರತಿ ಸರಿ ವಿಫಲವಾದಾಗ ಹೆಚ್ಚಿನ ಸೈನ್ಯದ ಜತೆ ಬರುತ್ತಿದ್ದ. ಮೊದಲ ಬಾರಿ 1 ಲಕ್ಷದಿಂದ ಆರಂಭಿಸಿ, ಐದನೇ ದಾಳಿಯಲ್ಲಿ ಹತ್ತು ಲಕ್ಷ ಸೈನ್ಯ ಬಳಸಿದ್ದ. ಆಗಿನ ಮಿಲಿಟರಿ ನಾಯಕತ್ವದ ತಪ್ಪುಗಳಿಂದ ಕೊನೆಯ ಬಾರಿಯ ದಾಳಿಯಲ್ಲಿ ಕೆಂಪು ಸೈನ್ಯ ಭಾರಿ ಏಟು ತಿಂದಿತು. ಈ ಅವಧಿಯ ಪ್ರಮಾದಗಳಿಂದ ಕೆಂಪು ಸೈನ್ಯ 80 ಸಾವಿರಕ್ಕಿಳಿಯಿತು. ಪಕ್ಷಧ ಸದಸ್ಯತ್ವ 3 ಲಕ್ಷ ದಿಂದ 40 ಸಾವಿರಕ್ಕಿಳಿಯಿತು.

ಇದರಿಂದಾಗಿಯೇ ಕೇಂದ್ರ ಪ್ರದೇಶದ ಕ್ರಾಂತಿಕಾರಿ ನೆಲೆ ಬಿದ್ದು ಕೆಂಪು ಸೈನ್ಯವನ್ನು ವೈರಿ ದುರ್ಬಲವಾಗಿರುವ ಝಾನ್‌ಯಿಗೆ ಒಯ್ಯುವ ನಿರ್ಧಾರವನ್ನು ಮಾಡಲಾಯಿತು. ಈ ಪ್ರಸಿದ್ಧ 'ದೀರ್ಘ ಪಯಣ'ದಲ್ಲಿ ನಾಲ್ಕು ಬಾರಿ ವೈರಿ ದಾಳಿಯಿಂದ ಅಲ್ಲಿಗೆ ತಲುಪಿದ ಕೆಂಪು ಸೈನ್ಯ 30 ಸಾವಿರಕ್ಕಿಳಿಯಿತು. ಝೂನ್‌ನಲ್ಲಿ ನಡೆದ ಪಕ್ಷದ ಅಧಿವೇಶನದಲ್ಲಿ ನಾಯಕತ್ವದಲ್ಲಿ ತೀವ್ರ ಮಾರ್ಪಾಟುಗಳಾದವು. ಮಾವೋರವರ ಪ್ರಭಾವ ಪಕ್ಷದಲ್ಲಿ ಬೆಳೆದು ಮಾವೋ ಚೌಎನ್‌ಲಾಯ-ಡೆಂಗ್ ಕ್ಸಿಯಾವೋ ಪಿಂಗ್‌ರ ನಾಯಕತ್ವ ಅಸ್ತಿತ್ವಕ್ಕೆ ಬಂತು. ಒಂದು ವರ್ಷದ ದೀರ್ಘ ಪಯಣ, ವೈರಿ ಸೈನ್ಯದ ವಿರುದ್ಧ ತಂತ್ರಗಾರಿಕೆಯ ಪ್ರದರ್ಶನದ ನಂತರ 1935 ರ ಅಕ್ಟೋಬರ್ ಉತ್ತರದ ಶಾಂಗ್ಸಿಗೆ ಬಂತು. ಇತರ ಕ್ರಾಂತಿಕಾರಿ ನೆಲೆಗಳಿಂದಲೂ ಕೆಂಪು ಸೈನ್ಯದ ತುಕಡಿಗಳು ಇಲ್ಲಿಗೆ ಬಂದು ಸೇರಿಕೊಂಡವು.

ಇಷ್ಟುಹೊತ್ತಿಗೆ ತೀವ್ರ ಅಂತರ್ರಾಷ್ಟ್ರೀಯ ಬದಲಾವಣೆಗಳ ಆಗಲಾರಂಭಿಸಿದ್ದವು. ಜಪಾನು ಪುನಃ ಚೀನಾದ ಉತ್ತರ ಪ್ರಾಂತ್ಯಗಳ ಮೇಲೆ ದಾಳಿ ನಡೆಸಲಾರಂಭಿಸಿದ್ದವು. ಮೂರು ಪ್ರಾಂತ್ಯಗಳಲ್ಲಿ ಕೋಮಿಂಟಾಂಗ್‌ನ ಆಗಲೇ ಹಿಡಿದು ದ್ರೋಹದ ಹಿನ್ನೆಲೆಯಲ್ಲೂ ಜಪಾನ್-ವಿರೋಧ ರಾಷ್ಟ್ರೀಯ ಸಂಯುಕ್ತ ರಂಗದ ತುರ್ತು ಅವಶ್ಯಕತೆ ಕಂಡು ಬರುತ್ತಿತ್ತು. ಕೊಮಿಂಟಾಂಗ್‌ನಲ್ಲೂ ಹಲವರಿಗೆ ಇದೇ ರೀತಿ ಅನ್ನಿಸಹತ್ತಿತ್ತು. ಕ್ಸಿಯಾನ್ ಡಿಸೆಂಬರ್ 1936 ಲ್ಲಿ ನಡೆದ ವಿಶೇಷ ಘಟನೆ ಚೀನಿ ಕ್ರಾಂತಿಯ ಹರಿವನ್ನು ಮುಂದಿನ ಘಟ್ಟಕ್ಕೆ ಒಯ್ದಿತು.

ಕಾರ್ಮಿಕರು ಮತ್ತು ರೈತರ ಕೆಂಪು ಸೈನ್ಯ ದೀರ್ಘ ಪಯಣದಲ್ಲಿ (1935)



4. ಜಪಾನ್-ವಿರೋಧಿ ಸಂಯುಕ್ತರಂಗ (1937-1945)

'ಕೊಮಿಂಟಾಂಗ್ ಜತೆ ಸೇರಿ ಜಪಾನಿ ಆಕ್ರಮಣಕಾರರನ್ನು ಹೊರದಬ್ಬೋಣ ಬನ್ನಿ'

1936 ರ ಡಿಸೆಂಬರ್‌ನಲ್ಲಿ ಕ್ಸಿಯಾನ್‌ಗೆ ಕೊಮಿಂಟಾಂಗ್‌ಗೆ ಕಮ್ಯುನಿಸ್ಟ್ - ವಿರೋಧಿ ಕಮಾಂಡ್ ತೆಗೆದುಕೊಳ್ಳಲು ಕಳಿಸಿದ ಜನರಲ್‌ಗಳೂ ಝಾಂಗ್ ಮತ್ತು ಯಾಂಗ್ ಬೇರೆ ಕೆಲಸ ಮಾಡಿದರು. ಝಾಂಗ್, ಯಾಂಗ್ ಮತ್ತು ಅವರ ಸೈನಿಕರ ಕೊಮಿಂಟಾಂಗ್ ಸೈನ್ಯದ ಸುಪ್ರೀಂ ಕಮಾಂಡ್ ಚಿಯಾಂಗ್ ಕೈ-ಶೇಕ್‌ನನ್ನು ಬಂಧನದಲ್ಲಿಟ್ಟರು. ಜಪಾನಿ ಆಕ್ರಮಣಕಾರರ ವಿರುದ್ಧ ಹೋರಾಡಲು ಕಮ್ಯುನಿಸ್ಟರ ಜತೆಗೆ ಸಂಯುಕ್ತ ರಂಗ ರಚಿಸಬೇಕೆಂಬುದು ಚಿಯಾಂಗ್ ಕೈ-ಶೇಕ್‌ರ ಮೇಲೆ ಒತ್ತಾಯ ತರಲು ಇದು ಅವರು ಹೂಡಿದ ಉಪಾಯವಾಗಿತ್ತು. ಇದು ಕೊಮಿಂಟಾಂಗ್ ಸರ್ಕಾರದಲ್ಲಿ ದಿಗಿಲು ಹರಡಿತು. ಕೊಮಿಂಟಾಂಗ್ ಒಳಗೆ ಪ್ರಭಾವ ಬೀರಿ ಕೆಲಸ ಮಾಡುತ್ತಿದ್ದ ವಿವಿಧ ವಿದೇಶಿ ಸಾಮ್ರಾಜ್ಯಶಾಹಿ ಬಾಲಬಡುಕರಲ್ಲೂ. ಚಿಯಾಂಗ್ ಕೈ-ಶೇಕನನ್ನು ಗೃಹ ಬಂಧನದಲ್ಲಿಟ್ಟು ಝಾಂಗ್ ಮತ್ತು ಯಾಂಗ್ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಕಚೇರಿಗೆ ತಂತಿ ಕಳಿಸಿ ಸಂಯುಕ್ತ ರಂಗದ ಬಗ್ಗೆ ಮಾತುಕತೆಗೆ ಬರಬೇಕೆಂದು ಕೇಳಿಕೊಂಡರು. ಕಮ್ಯುನಿಸ್ಟ್ ಪಕ್ಷ ಈ ಘಟನೆಯನ್ನು ಸರಿಯಾಗಿ ಬಳಸಿದರೆ, ಸಂಯುಕ್ತ ರಂಗ ಕಟ್ಟಲು ಸಹಾಯವಾದೀತು ಎಂದು ಗಮನಿಸಿ ಚೌ-ಎನ್-ಲಾಯ್ ನೇತೃತ್ವದಲ್ಲಿ ಪ್ರತಿನಿಧಿಗಳನ್ನು ಕಳಿಸಿತು. ಇಡೀ ದೇಶದಲ್ಲಿ ಉತ್ಸಾಹದ ಅಲೆ ಎದ್ದಿತು. ಜಪಾನಿನ ಗುಲಾಮಗಿರಿ ತಪ್ಪಿಸಬೇಕಾದರೆ ಸಂಯುಕ್ತ ರಂಗದ ಅವಶ್ಯಕತೆ ಬಗ್ಗೆ ಇಡೀ ಜನತೆಗೆ ಆಗಲೇ ಮನವರಿಕೆಯಾಗಿತ್ತು. ಇದರ ವಿರುದ್ಧ ಪ್ರತಿರೋಧ ಒಡ್ಡುತ್ತಿರುವ ಚಿಯಾಂಗ್-ಕೈ-ಶೇಕ್‌ನ ಮೇಲೆ ಇಡೀ ದೇಶ ಕೋಪಗೊಂಡಿತ್ತು. ಕೋಮಿಂಟಾಂಗ್‌ನಲ್ಲೇ, ಹಲವು ಉನ್ನತ ಮಿಲಿಟರಿ ಅಧಿಕಾರಿಗಳು, ಚಿಯಾಂಗ್ ಕೈ ಶೇಕ್‌ನ್ನು ಮುಗಿಸಿದರೆ ದೇಶಕ್ಕೆ ಒಳ್ಳೆಯದು ಎಂದು ನಂಬಿದವರಿದ್ದರು. ಆದರೆ ಅಂತಹದೇನಾದರೂ ಆದರೆ ದೇಶದ ಇನ್ನೊಂದು ಆಂತರಿಕ ಸಮರದಲ್ಲಿ ಮುಳುಗುವುದು ಖಚಿತ ಎಂದು ಪಕ್ಷಕ್ಕೆ ಗೊತ್ತಿತ್ತು. ಆದ್ದರಿಂದ ಚಾಕಚಕ್ಯತೆಯಿಂದ ದೀರ್ಘ ಮಾತುಕತೆಗಳ ನಂತರ ಸಂಯುಕ್ತ ರಂಗ ರಚಿಸುವ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಚಿಯಾಂಗ್ ಕೈ-ಶೇಕ್ ಮನಸ್ಸಿಲ್ಲದ ಮನಸ್ಸಿನಿಂದ ಅದಕ್ಕೆ ಒಪ್ಪಿದ. ಆದರೆ ಅಧಿಕಾರ ಸಿಕ್ಕಿದ ಕೂಡಲೇ ಝಾಂಗ್, ಯಾಂಗ್‌ರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಜೈಲಿಗೆ ಕಳಿಸಲು ತಪ್ಪಲಿಲ್ಲ.

ಮಾವೋ ಭಾರತದಿಂದ ಹೋದ ವೈದ್ಯಕೀಯ ತಂಡದ ನಂದನಲಾಲ ಮತ್ತು ಡಾಕ್ಟರ್ ಕೊಟ್ನಿಸ್ ಜತೆ



ಮುಂದಿನ ಏಳು ವರ್ಷಗಳ ಕಾಲ ಸಂಯುಕ್ತ ರಂಗ ಜಪಾನಿನ ಪ್ರಬಲ ಸೈನ್ಯದ ವಿರುದ್ಧ ಹೋರಾಡಿತು - ಈ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷ ಯೆನಾನ್‌ನ್ನು ತನ್ನ ನೆಲೆಯಾಗಿ ಆರಿಸಿಕೊಂಡಿತು. ಮಾವೋ ಯೆನಾನ್‌ನಿಂದ ಜಪಾನಿ-ವಿರೋಧಿ ಪ್ರತಿರೋಧದ ಸಮರದ ನಿರ್ದೇಶನ ಮಾಡಿದರು. ಉತ್ತರದ ಪ್ರಾಂತ್ಯಗಳಲ್ಲಿ ಜಪಾನಿ ಸೈನ್ಯ ಕೊಮಿಂಟಾಂಗ್ ಸೈನ್ಯವನ್ನು ಸುಲಭದಲ್ಲಿ ದಕ್ಷಿಣದತ್ತ ನಡೆಯಿತು. 1938 ರ ಹೊತ್ತಿಗೆ ಕೇಂದ್ರ ಚೀನಾದ ವುಹಾನ್‌ವರೆಗೆ ಜಪಾನಿ ಸೈನ್ಯ ಬಂದಿತ್ತು. ಜಪಾನಿ ಸೈನ್ಯ ಈಗ ಕೆಂಪು ಸೈನ್ಯ ಹಾಗೂ ಕಮ್ಯುನಿಸ್ಟ್ ನೆಲೆಗಳ ಮೇಲೆ ದಾಳಿ ಆರಂಭಿಸಿತು. ಕೊಮಿಂಟಾಂಗ್‌ನ ನಿರ್ಲಕ್ಷ್ಯ, ಅಸಹಕಾರದಿಂದ ಸಂಯುಕ್ತ ರಂಗ ದುರ್ಬಲವಾಗಿದ್ದು ಕೆಂಪು ಸೈನ್ಯ ತೀವ್ರ ಹೊಡೆತ ಅನುಭವಿಸಿತು. ಮೊದಲ ಹಂತದಲ್ಲಿ ಕ್ರಾಂತಿಕಾರಿ ನೆಲೆಗಳಲ್ಲಿದ್ದ ಜನಸಂಖ್ಯೆ 10 ಕೋಟಿಯಿಂದ 5 ಕೋಟಿಗೆ ಇಳಿಯಿತು. ಕೆಂಪು ಸೈನ್ಯ ತುಕಡಿ 5 ಲಕ್ಷದಿಂದ 3 ಲಕ್ಷಕ್ಕೆ ಕುಸಿಯಿತು.ದೇಶಪ್ರೇಮಿ ಜನ ಯೆನಾನ್‌ಗೆ ಧಾವಿಸಿದರು. ಅಂತರ್ರಾಷ್ಟ್ರೀಯವಾಗಿ ಯೆನಾನ್ ನೆಲೆಗೆ ಸಹಾಯ ಹರಿದು ಬಂತು. ವೈದ್ಯಕೀಯ ಸಹಾಯ, ಇತರ ವಸ್ತುರೂಪದ ಸಹಾಯ ಬಂದವು. ಈ ಅವಧಿಯಲ್ಲೇ ಕೆನಾಡದ ನಾರ್ಮನ್ ಬೆಥ್ಯೂನ್, ಭಾರತದ ಕೋಟ್ನೀಸ್ ನಂತರ ಆದರ್ಶವಾದಿ ಯುವಕರು ಚೀನಾದ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವಾಗಿ ನಿಂತರು. ಕಮ್ಯುನಿಸ್ಟ್ ಪಕ್ಷ ಇಡೀ ದೇಶದ ಜನತೆಯ ಬೆಂಬಲದಿಂದ ಜಪಾನಿಯರನ್ನು ಹಿಮ್ಮೆಟ್ಟಿಸಲು ಆರಂಭಿಸಿತು. 1945 ರ ಹೊತ್ತಿಗೆ ಸೋವಿಯತ್ ಒಕ್ಕೂಟ, ಇತರ ಮಿತ್ರ ಪಕ್ಷದ ದೇಶದ ಸಹಾಯದಿಂದ ಜಪಾನಿಯನ್ನು ಹಿಮ್ಮೆಟ್ಟಿಸಲು ಸಾಧ್ಯವಾಯ್ತು.

ಈ ಭೀಷಣ ಯುದ್ಧದ ಹಿನ್ನೆಲೆಯಲ್ಲೂ ಪಕ್ಷ ಸದಸ್ಯರ ತಪ್ಪು ನಿವಾರಣೆಗೆ 1942-44 ರಲ್ಲಿ ಚಳುವಳಿ ಹೂಡಿತು. ಇದರ ಫಲವಾಗಿ ಪಕ್ಷದ ಸದಸ್ಯತ್ವ 1937 ರಲ್ಲಿ 40 ಸಾವಿರದಿಂದ 1948 ರ ಹೊತ್ತಿಗೆ 12 ಲಕ್ಷಕ್ಕೇರಿತು. ಇಷ್ಟುಹೊತ್ತಿಗೆ ಕಮ್ಯುನಿಸ್ಟ್ ಪಕ್ಷ ಇಡೀ ದೇಶದ ನಾಯಕತ್ವ ಹೊಂದಿತ್ತು. ಕೊಮಿಂಟಾಂಗ್‌ನ ವರ್ಗಗುಣ ಸ್ಪಷ್ಟವಾಗಿತ್ತು. ಅದು ತನ್ನ ನೈತಿಕ ಬಲ ಕಳೆದುಕೊಂಡಿತ್ತು.

5. ಜನತಾ ವಿಮೋಚನಾ ಹೋರಾಟ (1945-49)

'ಕೊಮಿಂಟಾಂಗ್ ಕಿತ್ತುಹಾಕಿ ನವ ಪ್ರಜಾಪ್ರಭುತ್ವ ಸ್ಥಾಪಿಸೋಣ ಬನ್ನಿ'

ಜಪಾನಿ-ವಿರೋಧಿ ಸಮರ ಕೊನೆಗೊಳ್ಳುತ್ತಿದ್ದಂತೆ ಚಿಯಾಂಗ್-ಕೈ-ಶೇಕ್ ತನ್ನ ಬಣ್ಣ ಪುನಃ ತೋರಲು ಆರಂಭಿಸಿದರು. ಅತ್ಯಂತ ಹೆಚ್ಚು ಪ್ರದೇಶಗಳನ್ನು ಕಮ್ಯುನಿಸ್ಟ್ ಪಕ್ಷ ಹೊಂದಿದ್ದರೂ, ಪುನಃ ಆಂತರಿಕ ಯುದ್ಧಕ್ಕೆ ಮರಳಿದ ಶಾಂತಿಯುತ ಪ್ರಜಾಪ್ರಭುತ್ವ ಸ್ಥಾಪಿಸಲು ಕಮ್ಯುನಿಸ್ಟ್ ಪಕ್ಷ ಪ್ರಯತ್ನಿಸಿತು. ಇಷ್ಟರ ಹೊತ್ತಿಗೆ ಮಾವೋ ತ್ಸೆ ತುಂಗ್ ಚೌಎನ್‌ಲಾಯ್ ಪಕ್ಷದ, ದೇಶದ ನಾಯಕರಾಗಿ ಹೊಮ್ಮಿದ್ದರು. ಕೆಂಪು ಸೈನ್ಯ, ಕಮ್ಯುನಿಸ್ಟ್ ನೆಲೆಗಳಿಗೆ ಮಾನ್ಯತೆ ಮತ್ತು ಸಂಯುಕ್ತ ಸರಕಾರಕ್ಕೆ ಚಿಯಾಂಗ್ ತಯಾರಿಲ್ಲ. ಒಂದೂವರೆ ತಿಂಗಳುಗಳ ದೀರ್ಘ ಮಾತುಕತೆಗಳ ನಂತರ ಜನವರಿ 1946 ರಲ್ಲಿ ಕೊಮಿಂಟಾಂಗ್-ಕಮ್ಯುನಿಸ್ಟ್ ಪಕ್ಷಗಳ ನಡುವೆ ಒಪ್ಪಂದವಾಯಿತು.

ಆದರೆ ಕೆಲವೇ ಸಮಯದಲ್ಲಿ ಅಮೆರಿಕನ್ ಕುಮ್ಮಕ್ಕಿನಿಂದ ಚಿಯಾಂಗ್ ಕೈ ಶೇಕ ಕೆಂಪು ಸೈನ್ಯದ ಮೇಲ ದಾಳಿ ಆರಂಭಿಸಿದ. ಮುಂದಿನ ಮೂರು ವರ್ಷಕ್ಕೂ ಹೆಚ್ಚು ಆಂತರಿಕ ಯುದ್ಧದಲ್ಲಿ ಮಾವೋ ನಾಯಕತ್ವದಲ್ಲಿ ಪಕ್ಷ ಮತ್ತು ಕೆಂಪು ಸೈನ್ಯ ಭಾರಿ ರಾಜಕೀಯ-ಮಿಲಿಟರಿ ಚಾಕಚಕ್ಯತೆ ಪ್ರದರ್ಶಿಸಿತು. ಚಿಯಾಂಗ್ ತನ್ನ ಪೂರ್ಣ ಬಲದೊಂದಿಗೆ ಯೆನಾನ್ ಹಾಗೂ ಕಮ್ಯುನಿಸ್ಟ್ ನೆಲೆಗಳಿಗೆ ದಾಳಿ ಮಾಡಿದ. ಕಮ್ಯುನಿಸ್ಟ್ ಪಕ್ಷಮತ್ತು ಕೆಂಪು ಸೈನ್ಯವನ್ನು ಆರು ತಿಂಗಳಲ್ಲಿ ನಿರ್ನಾಣ ಮಾಡುತ್ತೇನೆ ಎಂದು ಕೊಚ್ಚುತ್ತಿದ್ದ. ಚಿಯಾಂಗ್ 7 ಲಕ್ಷ ಸೈನ್ಯವನ್ನು ಕೆಂಪು ಸೈನ್ಯ 8 ತಿಂಗಳಲ್ಲಿ ಕೊಚ್ಚಿ ಹಾಕಿತು. ಮಿಲಿಟರಿ ತಂತ್ರಗಾರಿಕೆ ಪ್ರದರ್ಶನ ಯೆನಾನ್‌ನಿಂದ ಕಾಲ್ತೆಗೆದ ಕೆಂಪು ಸೈನ್ಯ ಕೊಮಿಂಟಾಂಗ್ ಸೈನ್ಯಕ್ಕೆ ಗೆರಿಲ್ಲಾ ತಂತ್ರ ಬಳಸಿ ತೊಂದರೆ ಕೊಡಲಾರಂಭಿಸಿತು. ಜೂನ್ 1948 ರ ಹೊತ್ತಿಗೆ ಕೆಂಪು ಸೈನ್ಯ 12 ಲಕ್ಷದಿಂದ 28 ಲಕ್ಷಕ್ಕೆ ಏರಿತ್ತು. ಕೊಮಿಂಟಾಂಗ್ ಸೈನ್ಯ 43 ಲಕ್ಷದಿಂದ 36 ಲಕ್ಷಕ್ಕೆ ಕುಸಿದಿತ್ತು.

ಮುಂದಿನ ತಿಂಗಳುಗಳಲ್ಲಿ ಕೆಂಪು ಸೈನ್ಯ ಕೊಮಿಂಟಾಂಗ್ ಸೈನ್ಯವನ್ನು ಕೊಚ್ಚಿಹಾಕಿತು. ಫೆಬ್ರವರಿ 49 ರಲ್ಲಿ ಬೀಜಿಂಗ್‌ನ್ನು ಕೆಂಪು ಸೈನ್ಯ ಪ್ರವೇಶಿಸಿತು. ಸೆಪ್ಟೆಂಬರ್ ಹೊತ್ತಿಗೆ ಇಡೀ ದೇಶ ವಿಮೋಚನವಾಗಿತ್ತು. ಜಿಯಾಂಗ್-ಕೈ-ಶೇಕ್ ಕೆಲವರು ಬೆಂಬಲಿಗರ ಜೊತೆಗೆ ತೈವಾನ್ ದ್ವೀಪಕ್ಕೆ ಓಡಿಹೋಗಿದ.

ಸೆಪ್ಟೆಂಬರ್ 21 ರಂದು ಒಂದು ರಾಜಕೀಯ ಸಮಾವೇಶ ನಡೆದು ಅದಲ್ಲಿ 'ಎಲ್ಲ ರಾಜರು, ಪಕ್ಷಗಳು, ಸಂಘಟನೆ, ಕೆಂಪು ಸೈನ್ಯದ 600 ಪ್ರತಿನಿಧಿಗಳ ಭಾಗವಹಿಸಿ ಸಾಮಾನ್ಯ ಕಾರ್ಯಕ್ರಮ ಅಂಗೀಕರಿಸಲಾಯಿತು. ಅಧ್ಯಕ್ಷರಾಗಿ ಚುನಾಯಿತರಾದ ಮಾವೋ 'ಮಾನವ ಕುಲದ ಕಾಲು ಭಾಗವಾದ ಚೀನಿಯರು ಇಂದು ಎದ್ದು ನಿಂತಿದ್ದಾರೆ' ಎಂದರು.

ಮಾವೋ ಯೆನಾನ್‌ನಲ್ಲಿ ರೈತರ ಜತೆ ಮಾತನಾಡುತ್ತಿರುವುದು



ಜಾಗತಿಕ ಮಹತ್ವದ ಘಟನೆ

ಐವತ್ತು ವರ್ಷ ತುಂಬಿದ ಕ್ರಾಂತಿಕಾರಿ ಚೀನ

ಚೀನಾ ಇಂದು ವಿಶ್ವದ ಗಮನವನ್ನೇ ತನ್ನೆಡೆಗೆ ಸೆಳೆದಿದೆ. ಅತ್ಯಂತ ಹಿಂದುಳಿದ ದೇಶವೊಂದು ಇಂದು ತ್ವರಿತವಾಗಿ ಬೆಳೆಯುತ್ತಾ ಜಗತ್ತಿನ ಏಳನೇ ದೊಡ್ಡ ಆರ್ಥಿಕ ಬಲವಾಗಿ ರೂಪುಗೊಂಡಿರುವುದು ಇದಕ್ಕೆ ಆಧಾರವಾಗಿ ಈ 50 ವರ್ಷಗಳ ಕಾಲ ಒಟ್ಟು ಸರಾಸರಿ ಶೇ.6 ರಷ್ಟು ವೇಗದಲ್ಲಿ ಬೆಳೆಯುತ್ತಿರುವುದು (ಈ 50 ವರ್ಷಗಳಲ್ಲಿ ವಿಶ್ವದ ಒಟ್ಟು ಬೆಳವಣಿಗೆಯ ವೇಗ ಶೇ. 3ರಷ್ಟು ಹಾಗೂ ಅಭಿವೃದ್ಧಿ ಹೊಂದಿದ ದೇಶಗಳದ್ದು ಕೇವಲ ಶೇ. 1.5ಯಿಂದ 2 ರಷ್ಟು) ಕಳೆದ 20 ವರ್ಷಗಳಲ್ಲಿ ಶೇ 9.6 ರಷ್ಟನೇ ವೇಗದಲ್ಲಿ ಬೆಳೆಯುತ್ತಾ(ಈ ಅವಧಿಯಲ್ಲಿ ವಿಶ್ವದ ಬೆಳವಣಿಗೆಯ ವೇಗ ಹಿಂದಿನ ಅವಧಿಗಿಂತ ಕಡಿಮೆ) ಈ ವೇಗದ ಬಗ್ಗೆ ಜಗತ್ತಿನ ಎಲ್ಲಾ ದೇಶಗಳು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಆಗಿರುವುದು. ಮುಂದುವರಿದ ದೇಶಗಗಳಂತೂ ಹೊಟ್ಟೆಕಿಚ್ಚಿನಲ್ಲಿ ಬೇಯುವಂತೆ ಆಗಿರುವುದು.

ನೆರೆಹೊರೆಯ ಹಾಗೂ ವಿಶ್ವದ ಇತರ ಭಾಗಗಳ ಬಲಾಢ್ಯ ದೇಶಗಳು ಆರ್ಥಿಕ ಬಿಕ್ಕಟ್ಟಿನಲ್ಲಿ ಬಳಲಿ ಕುಸಿದು ಹೋಗಿರುವಾಗಲೂ ಚೀನೀದ ಬೆಳವಣಿಗೆ ಕುಂದದೇ ನಿರಂತರ ಸಾಗಿರುವುದು ಈ ಬೆಳವಣಿಗೆ ಮತಷ್ಟು ಕಣ್ಣಿಗೆ ಹೊಡೆದು ಕಾಣುವಂತಾಗಿದೆ. ಹೀಗಾಗಿ ವಿಶ್ವ ಬ್ಯಾಂಕ್, ಐಎಂಎಫ್, ಮುಂದಿಟ್ಟ ಆರ್ಥಿಕ ಸುಧಾರಣೆಗಳಿಂಗಿಂತ ಭಿನ್ನವಾದ ಆರ್ಥಿಕದಾರಿ, ಹಾಗೂ ಸುಧಾರಣೆಯನ್ನು ಅನುಸರಿಸುತ್ತಾ ಅಭಿವೃದ್ಧಿ ಶೀಲ ದೇಶಗಳು ಮುಂದೆ ಸಾಗಲು ಇರುವ ಪರ್ಯಾಯ ಅಭಿವೃದ್ಧಿ ಪಥದ ಮಾದರಿಯಾಗಿರುವುದು ಹಾಗೂ ವಿಶ್ವದ ಅನೇಕ ಸಮಾಜವಾದಿಗಳು ಮಾರ್ಕ್ಸ್ ವಾದ, ಲೆನಿನ್ ವಾದವನ್ನು ವ್ಯರ್ಥವಾಗಿ ಪಾಲಿಸುತ್ತಿರುವುದು ವಿಶ್ವದ ಗಮನ ಇಂದು ಚೀನಾದ ಕಡೆಗೆ ಕೇಂದ್ರಿಕೃತವಾಗುವುದಕ್ಕೆ ಕಾರಣವಾಗಿದೆ.

ಸಾಮ್ರಾಜ್ಯಶಾಹಿಗಳ ಮತ್ಸರ

ಹೀಗೆ ಭಾರತದಂತಹ ಮಾಜಿವಸಾಹತುಗಳು ಚೀನಾದ ಕಡೆಗೆ ಬೆರಗು ಗಣ್ಣುಗಳಿಂದ ನೋಡುತ್ತಾ ಅದನ್ನೊಂದು ಮಾದರಿಯಾಗಿ ಪರಿಗಣಿಸುವ ಸಂಭವವಿರುವುದರಿಂದಲೇ ಮುಂದುವರೆದ ದೇಶಗಳ ಸಾಮ್ರಾಜ್ಯಶಾಹಿಗಳು ತಮ್ಮ ದೇಶಗಳಲ್ಲಿ ಇವರ ದಬ್ಬಾಳಿಕೆಗೆ ಚೀನಾದ ಮಾದರಿ ಬೆದರಿಕೆಯನ್ನೊಡ್ಡದಿದ್ದರೂ (ಹಿಂದೆ ಸೋವಿಯತ್ ದೇಶ ಹಾಗೂ ಪೂರ್ವ ಯುರೋಪ್ ಸಮಾಜವಾದಿ ದೇಶಗಳ ಮಾದರಿಯಿಂದ ಈ ದೇಶಗಳ ಕಾರ್ಮಿಕರು ಆಕರ್ಷಿತರಾಗುವ ಭಯವಿದ್ದಂತೆ) ಕೂಡ ಈ ವಿಶ್ವಶೋಷಕರ ಮತ್ಸರಕ್ಕೆ ಚೀನಾ ಒಳಗಾಗಿದೆ. ಇಂದು ವಿಶ್ವಾದ್ಯಂತ ಟಿ.ವಿ. ಛಾನಲ್ಗಳೂ ಪತ್ರಿಕೆಗಳು ದೊಡ್ಡ ಅಪ ಪ್ರಚಾರದ ಧಾಳಿಯನ್ನೇ ಸುರಿಮಳೆಗೈದಿವೆ. ಅದನ್ನು ಭಾರತದ ಕೆಲ ಬಂಡವಾಳಶಾಹಿ ಪತ್ರಿಕೆಗಳು ಮಾಧ್ಯಮಗಳು ಗಿಳಿ ಪಾಠದಂತೆ ಪುನರುಚ್ಚರಿಸುತ್ತಿವೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಪತ್ರಿಕೆಗಳಿಗೂ ಈ ರೋಗ ಹಬ್ಬಬಹುದು.

ಅಪಪ್ರಚಾರದ ಧಾಳಿ

ಅಮೇರಿಕಾ ಯುರೋಪ್ ಗಳ ಪತ್ರಿಕೆಗಳು ಟಿ.ವಿ ಗಳ ಮುಖ್ಯಧಾಳಿ ಚೀನಾದ ಸಮಾಡವಾದಿ ವ್ಯವಸ್ಥೆಯ ಬಗ್ಗೆ ಹಾಗೂ ದೃಢವಾಗಿ ಮಾರ್ಕ್ಸ್‌ವಾದವನ್ನು ಅನುಸರಿಸುತ್ತೇವೆಂಬ ಚೀನಾದ ನಾಯಕರು ದೃಢವಾದ ನಿಲುವಿನ ಬಗ್ಗೆ ಚಿನಾ ಕಮ್ಯೂನಿಸ್ಟ್ ಪಕ್ಷದ ಪ್ರಬಾವ ಹಾಗೂ ನಾಯಕರ ಪಾತ್ರದ ಬಗ್ಗೆ.

1978 ರಿಂದ ಚೀನಾದಲ್ಲಿ ನಡೆಯುತ್ತಿರುವ ಆರ್ಥಿಕ ಸುಧಾರಣೆಗಳನ್ನು ಬಂಡವಾಳಶಾಹಿ ಮುಕ್ತಮಾರುಕಟ್ಟೆಯ ಮಾರ್ಗ ಎಂದು ಬಣ್ಣಿಸುಲ ಈ ಪತ್ರಿಕೆಗಳು- ಚೀನಾದಲ್ಲಿ ಆರ್ಥಿಕ ರಂಗದಲ್ಲಿ ಸಮಾಜವಾದ/ ಕಮ್ಯೂನಿಸಂ ಈಗಾಗಲೇ ನಾಶವಾಗಿಬಿಟ್ಟಿದೆ ಎಂದು ಭ್ರಮಿಸುತ್ತಾ ಇನ್ನು ರಾಜಕೀಯ ವ್ಯವಸ್ಥೆಯಲ್ಲಿಯೂ ರಷ್ಯಾ, ಪೂರ್ವ ಜರ್ಮನಿಗಳಂತೆ ಚೀನಾದವೂ ಸಾಮ್ರಾಜ್ಯಶಾಹಿಗಳ ಹಗಲುದರೋಡೆಗೆ ತೆರೆದಂತಾಗುತ್ತದೆ. ಎಂದು ಈ ಶಕ್ತಿಗಳ ದುಷ್ಟಯೋಜನೆ.

ಈ ಧಾಳಿ ಚೀನಾದಲ್ಲಿ ಪ್ರಜಾಪ್ರಭುತ್ವವಿಲ್ಲ, ಅದು ವಿಶ್ವದ ಅತಿದೊಡ್ಡ ಸರ್ವಾಧಿಕಾರಿ ದೇಶ, ಅಲ್ಲಿ ಮಾನವ ಹಕ್ಕುಗಳಿಲ್ಲ ವ್ಯಕ್ತಿ ಸ್ವಾತಂತ್ರ್ಯವಿಲ್ಲ, ಟಿಬೆಟ್ ಮೇಲೆ ದಬ್ಬಾಳಿಕೆ ನಡೆಸುತ್ತಿದೆ. ಟೈವಾನ್‌ಗೆ ಬೆದರಿಕೆಯೊಡ್ಡುತ್ತಿದೆ ಎಂದು ನಿರಂತರವಾಗಿ ಮಾಡುವ ಅಪಪ್ರಚಾರದಲ್ಲಿ ಹಾಗೂ ಅಲ್ಲಿಗೇ ನಿಲ್ಲದೆ ಚೀನಾದ ಒಳಗಡೆಯ ವಿದ್ರೋಹಿಂಗಳಿಗೆ ಟಿಬೆಟಿನ ದಲಾಯಿಲಾಮನಿಗೆ ನೀಡುವ ಧನ ಹಾಗೂ ನೈತಿಕ ಕುಮ್ಮಕ್ಕಿನಲ್ಲಿ ವ್ಯಕ್ತವಾಗುತ್ತಿದೆ.

ಸಮಾಜವಾದವೇ ಚೀನಾದ ಅಡಿಪಾಯ

ಚೀನಾದಲ್ಲಿ ಕ್ರಾಂತಿಗೆ ಮೊದಲೇ ಚಳುವಳಿ ತೀವ್ರವಾಗಿ ಬೆಳೆದ ಪ್ರದೇಶಗಳಲ್ಲಿ, ಕ್ರಾಂತಿಯ ನಂತರ ಇಡೀ ದೇಶದಲ್ಲಿ ಹಿಂದುಳಿಯುವಿಕೆಗೆ, ದಬ್ಬಾಳಿಕೆಗೆ, ಶೋಷಣೆಗೆ ಮೂಲಾಧಾರವಾಗಿದ್ದ ಪಾಳೆಯಗಾರಿ ಪದ್ಧತಿಯನ್ನು ನಿರ್ಮೂಲನ ಮಾಡಲಾಯಿತು. ನೆಪಮಾತ್ರಕ್ಕೆ ಮಾತ್ರ ಮಾಡುವ ಭೂಸುಧಾರಣೆಗಳಿಗೆ ಬದಲಾಗಿ ತೀವ್ರ ಭೂಸುಧಾರಣೆಗಳಿಂದ 30 ಕೋಟಿ ಜನರಿಗೆ 70 ಕೋಟಿ (ಭೂಮಿಯನ್ನು ಅಳೆಯುವ ಚೀನಿ ಪದ್ಧತಿ) ಭೂಮಿಯನ್ನು ಹಂಚಲಾಯಿತು. ಭಾರತತದಲ್ಲಿ ಇದೇ ವಿಷಯದಲ್ಲಿ ಭೂಮಿಯನ್ನು ಜನರಿಗೆ ಹಂಚಲಾಯಿತು. ಇದರಲ್ಲಿಯೂ ಶೇ 80 ರಷ್ಟು ಭೂಮಿಯನ್ನು ಹಂಚಲಾಗಿರುವುದು ಕೇವಲ ಪ.ಬಂಗಾಳ ಕೇರಳಗಳಲ್ಲಿ ಮಾತ್ರ. ಚೀನಾದಲ್ಲಿ ಭೂಮಿಯ ಈ ಹಂಚಿಕೆ ಕೋಟಿಗಟ್ಟಲೆ ಬಡರೈತರನ್ನು ಉತ್ಪಾದನೆಯಲ್ಲಿ ತೊಡಗಿಸಿದ್ದಲ್ಲದೆ, ಅವರ ಮೇಲಿದ್ದ ಬಿಡ್ಡಿ ದುಡಿಮೆ, ಸಾಲ, ಬಡ್ಡಿಗಳ ಹೊರೆಯನ್ನು ತೆಗೆದುಹಾಕಿದಂತಾಗಿ ಉತ್ಪಾದನೆಹೆಚ್ಚಾಯಿತು.

ಗೋಪಾಲಕೃಷ್ಣ ತಮ್ಮ ಕವನವೊಂದರಲ್ಲಿ 'ಇರುವೆಲ್ಲವನು ಎಲ್ಲಿ ಜನತೆ ತೆರವಾಗಿಸುವ ಸಮ ಬಗೆಯ, ಸಮ ಸುಖದ, ಸಮ ದುಃಖದ ಸಾಮರಸ್ಯದ ಸಾಮಗಾನಲಹರಿಯ ಮೇಲೆ' ತೇಲಿಬಂತು. ಇದು ಮೇಲುಕೀಳುಗಳಿಲ್ಲದ ನಿಜವಾದ ಸಮಾನತೆಗೆ, ಆ ಮೂಲಕ ನಿಜವಾದ ಜನತೆಯ ಪ್ರಜಾಪ್ರಭುತ್ವಕ್ಕೆ ಮತ್ತು ಮುಂದೆ ಸಮಾಜವಾದಿ ಸಮಾಜ ನಿರ್ಮಾಣಕ್ಕೆ ತಳಹದಿಯನ್ನು ಹಾಕಿತು.

ಸಮಾಜವಾದಿ ಸಮಾಜ ನಿರ್ಮಾಣವೂ 1958 ರವರೆಗೆ ಹಂತ ಹಂತವಾಗಿ ಆರೋಗ್ಯಕರವಾಗಿ ಸಾಗಿ ಬೆಲೆಯಿತು. ಪರಸ್ಪರ ಸಹಾಯಸಂಘಗಳಿಂದ ಕೆಳಹಂತದ ಉತ್ಪಾದನೆ ಸಹಕಾರಿ ಸಂಘಗಳು, ನಂತರ ಮೇಲಿನ ಹಂತ ಸಹಕಾರ ಸಂಘಗಳು, ಹಾಗೆಯೇ ಕೈಗಾರಿಕೆಯಲ್ಲಿ ಖಾಸಗಿ ಮಾಲಿಕರ ಕೈಗಾರಿಕೆಗಳಿಗೆ ಕೆಲಸಕ್ಕೆ ಆರ್ಡರ್‌ಗಳನ್ನು ನೀಡುವುದು, ಉತ್ಪಾದನೆಯಾದ ವಸ್ತುಗಳನ್ನು ಕೊಳ್ಳುವುದು, ಸರ್ಕಾರಿ ಕೈಗಾರಿಕೆಗಳ ಉತ್ಪಾದನೆಗಳನ್ನು ಖಾಸಗಿ ಅಂಗಡಿಗಳ ಮೂಲಕ ಮಾರುವುದು ನಂತರ ಸರ್ಕಾರ ಹಾಗೂ ಖಾಸಗಿ ವಲಯದ ಜಂಟಿ ಮಾಲಿಕತ್ವ ಇತ್ಯಾದಿಯಾಗಿ ಹಂತ ಹಂತಗಳಲ್ಲಿ ಸಾಗಿ ಸರ್ಕಾರಿ ವಲಯದ ಮೇಲುಗೈ ಪ್ರಧಾನ ಪಾತ್ರ ಏರ್ಪಟ್ಟಿತು.

ತೀವ್ರ ತಪ್ಪುಗಳು

ಈಹಂತದಲ್ಲಿ ಕ್ರಮಬದ್ಧವಾಗಿ ವಿಕಸಿತವಾಗುತ್ತಿದ್ದ ಸಮಾಜವಾದಿ ಸಮಾಜದಲ್ಲಿ ತಪ್ಪುಗಳು ನುಸುಳಿದವು. ವಾಸ್ತವದ ಮೇಲೆ ಆಧಾರಿತವಾದ ಸಮಾಜವಾದಿ ಸಮಾಜ ನಿರ್ಮಾಣವನ್ನು ಆರ್ಥಿಕ ನಿಯಮಗಳನ್ನು ನಿರ್ಲಕ್ಷಿಸಿ ಆತುರಾತುರವಾಗಿ ಮೇಲಿನಹಂತಕ್ಕೊಯ್ಯುವ ಕ್ರಮಗಳು - ಜನತಾ ಕಮ್ಯುನಿ ಪದ್ಧತಿ, ಮಹಾ ಮುನ್ನೆಗೆದ, ಸಾಂಸ್ಕೃತಿಕ ಕ್ರಾಂತಿ ಮೊದಲಾದ ಗಂಭೀರ ತಪ್ಪುಗಳು ಘಟಿಸಿದವು.

ಇದನ್ನು ಚಿನಾದ ಕಮ್ಯುನಿಸ್ಟ್ ಪಕ್ಷ ತನ್ನ ಇತಿಹಾಸದ ಬಗೆಗಿನ ನಿರ್ಣಯದಲ್ಲಿ ವಿವರಿಸಿದಂತೆ

'ಕಾಂ. ಮಾವೋ ಮತ್ತು ಇತರ ನಾಯಕ ವೃಂದ ಕೇಂದ್ರದಲ್ಲಿಯೂ ವಿವಿಧ ದೇಶಗಳಲ್ಲಿಯೂ ಅಲ್ಲಿವರೆಗೆ ಸಾಧಿಸಲಾದ ಯಶಸ್ಸಿನಿಂದ ಬೀಗಿ ಮನುಷ್ಯನ ಇಚ್ಛೆಗೆ ತಕ್ಕಂತೆ ಎಲ್ಲವನ್ನು ಸಾಧಿಸಬಹುದು ಎಂಬ ಭಾವನೆಯಿಂದ ಶೀಘ್ರ ಫಲಕ್ಕಾಗಿ ಆತುರಪಟ್ಟರು. ಎಚ್ಚರದ ಅಧ್ಯಯನ, ಶೋಧಗಳಿಲ್ಲದೆ, ಸರಿಯಾಗಿ ಪ್ರಯೋಗಗಳನ್ನು ನಡೆಸದೇ ಕಮ್ಯೂನ್ ಪದ್ಧತಿ ಹಾಗೂ ಮಹಾ ಮುನ್ನೆಗೆತದ ಕ್ರಮಗಳನ್ನು ತೆಗೆದುಕೊಳ್ಳಲಾಯಿತು.

ಈ ಬಗ್ಗೆ ಟೀಕೆಗಳು ಬಂದಾಗ ಟೀಕೆ ಮಾಡಿದವರನ್ನೇ ದೂಷಿಸಲಾಯಿತು ಹಾಗೂ ಪಕ್ಷ ಸರ್ಕಾರ, ಸೈನ್ಯ, ಸಾಂಸ್ಕೃತಿಕ ವಲಯದಲ್ಲಿದ್ದಾರೆಂದು ಅವರನ್ನು ಹೊರಹಾಕಬೇಕೆಂದು ಸಾಂಸ್ಕೃತಿಕ ಕ್ರಾಂತಿಯನ್ನು ಅತ್ಯಂತ ತಪ್ಪಾಗಿ ಆರಂಭಿಸಲಾಯಿತು. ಇದು ಪಕ್ಷಕ್ಕು ಚೀನಾದ ಮುನ್ನಡೆಗೂ ದೊಡ್ಡ ಹಾನಿಯನ್ನುಂಟುಮಾಡಿತು. ಈ ಬಗ್ಗೆ ನಂತರ ಮಾವೋರವರು ಮಾರ್ಕ್ಸ್‌ವಾದದ ಹಾಗೂ ಚೀನಾದ ವಾಸ್ತವ ಪರಿಸ್ಥಿತಿಗೆ ವಿರುದ್ಧವಾದ ಕ್ರಮವೆಂದು ಪಕ್ಷ ತೀರ್ಮಾನಿಸಿತು. ಕ್ರಾಂತಿಯ ಸಂದರ್ಭದಲ್ಲಿ ಕ್ರಾಂತಿಯ ನಂತರ ಸಮಾಜವಾದೀ ನಿರ್ಮಾಣದಲ್ಲಿ ಮಾವೋ ದೊಡ್ಡ ಕಾಣಿಕೆ ನೀಡಿದರೂ ನಂತರ ಈ ತಪ್ಪುಗಳಿಗೆ ಅವರು ಕಾರಣರಾದರೆಂದು ಸಮತೂಕದ ನಿರ್ಣಯಕ್ಕೆ ಬಂದುದು ಚೀನೀ ಕಮ್ಯುನಿಸ್ಟ್ ಪಕ್ಷದ ಪ್ರೌಢ ಅನುಭವಕ್ಕೆ ಸಾಕ್ಷಿಯಾಗಿದೆ.

ಆರ್ಥಿಕಸುಧಾರಣೆಗಳು

ಚೀನಾ ಕಮ್ಯುನಿಸ್ಟ್ ಪಕ್ಷ 1978 ರಲ್ಲಿ ಮಾವೋರವರ ಬಗ್ಗೆ ತನ್ನ ತಪ್ಪುಗಳ ಬಗ್ಗೆ ಸೂಕ್ತವಾದ ಆರೋಗ್ಯಕರವಾದ ನಿರ್ಧಾರಕ್ಕೆ ಬಂದ ಮೇಲೆ ಚೀನಾದ ಅಭಿವೃದ್ಧಿಗೆ ಸಂಬಂಧಿಸಿ ತೆಗೆದುಕೊಂಡ ವಾಸ್ತವತೆಯಿಂದ ದೂರವಾದ ಆತುರದ ನಿರ್ಧಾರದ ತಪ್ಪುಗಳನ್ನು ತಿದ್ದಿಕೊಳ್ಳಲು ಆರಂಭಿಸಿತು.

ಚೀನಾ ಇನ್ನೂ ಸಾಮಾಜವಾದ ಪ್ರಾಥಮಿಕ ಹಂತದಲ್ಲಿ ಮಾತ್ರ ಇದೆಯೆಂದೂ ಅದ್ದರಿಂದ ಉತ್ಪಾದಕ ಶಕ್ತಿಗಳನ್ನು ಬೆಳೆಸಲು ಶ್ರಮಿಸುವುದಕ್ಕಾಗಿ ಆರ್ಥಿಕ ಸುಧಾರಣೆ ಹಾಗೂ ವಿದೇಶಿ ತಂತ್ರಜ್ಞಾನಕ್ಕಾಗಿ, ವಿದೇಶಿ ಬಂಡವಾಳಕ್ಕೆ ಬಾಗಿಲು ತೆರೆಯಬೇಕೆಂದು ತೀರ್ಮಾನಿಸಿತು. ಇದೆಲ್ಲವೂ ಮಾವೋರ ತಪ್ಪುಗಳ ಬಗ್ಗೆ ಹಾಗೂ ಆರ್ಥಿಕವಾಗಿ ಚೀನಾವನ್ನು ಅಭಿವೃದ್ಧಿಗೊಳಿಸುವ ದಾರಿಯ ಬಗ್ಗೆ ಚೀನಾದ ಕಮ್ಯುನಿಸ್ಟ್ ಪಕ್ಷ ಸರಿಯಾದ ತೀರ್ಮಾನಗಳನ್ನು ಕೈಗೊಳ್ಳಲು ಡೆಂಗ್ ಜಿಯಾಂಗ್ ಪಿಂಗ್ ರವರ ನಾಯಕತ್ವ ಮತ್ತು ವಿಶ್ಲೇಷಣೆ ಸಹಾಯಕವಾದವು.

ಹೀಗೆ ಆರ್ಥಿಕ ಸುಧಾರಣೆಗಳನ್ನು ಮಾಡುವಾಗಲೂ ಈ ಕೆಳಗಿನ ಪ್ರಮುಖ ತತ್ವಗಳನ್ನು ಬಿಡಬಾರದೆಂದು ಪಕ್ಷ ತೀರ್ಮಾನಿಸಿತು.

1. ಸಮಾಜವಾದದ ದಾರಿ 2. ಮಾರ್ಕ್ಸ್‌ವಾದ-ಲೆನಿನ್ ವಾದ ಹಾಗೂ ಮಾವೋ ಚಿಂತನೆ 3. ಜನತಾಪ್ರಜಾಪ್ರಭುತ್ವೀಯ ಸರ್ವಾಧಿಕಾರ ಮತ್ತು ಕಮ್ಯುನಿಸ್ಟ್ ಪಕ್ಷದ ನಾಯಕತ್ವ

ಆದುದರಿಂದ ವಿಶ್ವದ ಮಾಧ್ಯಮಗಳು ಸಾರಿದಂತೆ ಸಮಾಜವಾದಿ ದಾರಿಯನ್ನು ಧಿಕ್ಕರಿಸಿ ಬಂಡವಾಳಶಾಹಿ ಪದ್ಧತಿಯನ್ನು ಸ್ಥಾಪಿಸುವುದಕ್ಕಾಗಿ ಅಲ್ಲ ಚೀನಾದ ಸುಧಾರಣೆಗಳು. ಅದಕ್ಕೆ ಬದಲಾಗಿ ಸಮಾಜವಾದವನ್ನು ಬಲಪಡಿಸಲು ಮಾತ್ರ. ತಮ್ಮ ದೇಶದ ಸ್ವಾತಂತ್ರ್ಯಕ್ಕೆ ಸಮಾಜವಾದಕ್ಕೆ ಯಾವುದೇ ಹಾನಿಯಾಗದಂತೆ, ವಿದೇಶಿ ತಂತ್ರಜ್ಞಾನವನ್ನು ಪಡೆದು ದೇಶದ ಉತ್ಪಾದಕತೆಯನ್ನು ಹೆಚ್ಚಿಸಲು ಮಾತ್ರ ಆರ್ಥಿಕ ಸುಧಾರಣೆಗಳು.

ಡೆಂಗಾ ಜಿಯಾವೋ ಪಿಂಗ್ ಮತ್ತೆ ಮತ್ತೆ ಹೇಳಿರುವಂತೆ ಆರ್ಥಿಕ ಸಧಾರಣೆಯ ಉದ್ದೇಶ ಸಮಾಜವಾದದ ಮೇಲ್ಮೆಯ ಪ್ರಯೋಜನ ಪಡೆದು ಚೀನಾದ ಆಧುನೀಕರಣವನ್ನು ಶೀಘ್ರವಾಗಿ ಸಾಧಿಸುವುದೇ ಆಗಿದೆ.

ಅಷ್ಟು ಮಾತ್ರವೇ ಅಲ್ಲ ಸಮಾಜವಾದದ ಅಡಿಪಾಯವಿಲ್ಲದಿದ್ದರೆ ಆರ್ಥಿಕ ಸುಧಾರಣೆಗಳು ಈಗ ಚೀನಾದಲ್ಲಿ ನೀಡಿರುವ ಫಲವನ್ನು, ವಿಶ್ವದಲ್ಲಿಯೇ ಅತ್ಯಂತ ಶೀಘ್ರ ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ.

ಇತ್ತೀಚಿಗೆ ಅರ್ಥವಿಜ್ಞಾನದ ನೊಬೆಲ್ ಪ್ರಶಸ್ತಿ ಪಡೆದ ವಿಶ್ವವಿಖ್ಯಾತ ಅಭಿವೃದ್ಧಿ ಅರ್ಥಶಾಸ್ತ್ರಜ್ಞ ಚೀನಾದ ಆರ್ಥಿಕ ಸುಧಾರಣೆಯ ಬಗ್ಗೆ ಈ ರೀತಿ ಹೇಳುತ್ತಾರೆ.

'ಚೀನಾದಲ್ಲಿ ಮಾವೋವಾದಿ ಕಾರ್ಯಕ್ರಮ ಪ್ರಯೋಜನ ಮಾರುಕಟ್ಟೆ ಪ್ರೇರಿತ ಆರ್ಥಿಕ ಅಭಿವೃದ್ಧಿಗೆ ಸಿಕ್ಕಿದೆ ... ಎಡಪಂಥೀಯ ಸಾಮೂಹಿಕ ಶಿಕ್ಷಣ ನೀಡಿದ ಸಾಕ್ಷರತೆಯ ಉನ್ನತ ಪ್ರಮಾಣ, ಸಾರ್ವಜನಿಕ ಆರೋಗ್ಯ ರಕ್ಷಣೆ, ಸಾಮಾಜಿಕ ಭದ್ರತೆ ಇವು ಚೀನಾದಲ್ಲಿ ಆರ್ಥಿಕ ಸುಧಾರಣೆಯಲ್ಲಿ ವಿಸ್ತಾರವಾಗಿ ಭಾಗವಹಿಸುವಂತೆ ಹಾಗೂ ಆರ್ಥಿಕ ಸುಧಾರಣೆಗಳ ಪ್ರಯೋಜನ ಪಡೆಯಲು ಸಾಧ್ಯವಾಗುವಂತೆ ಮಾಡಿದೆ.

ಭಾರತದ ಬಗ್ಗೆ ಅಮರ್ತ್ಯಸೆನೆ ಹೇಳುತ್ತಾರೆ

"ಭಾರತ ಆರ್ಥಿಕತೆಯ ಬಹಳ ಮುಖ್ಯ ತೊಡಕು ಮುಂದುವರಿಯುತ್ತಿರುವ ಸಾಮಾಜಿಕ ಸಮಾನತೆ ಮತ್ತು ಹಿಂದುಳಿಕೆ ... ಆರ್ಥಿಕ ಬೆಳವಣಿಗೆ ಶೀಘ್ರವಾಗಿ ನಡೆಯುತ್ತಿರುವಾಗಲೇ ಸಮಾಜದ ಬಹುಸಂಖ್ಯಾತರು ಈ ಬೆಳವಣಿಗೆಯಲ್ಲಿ ಸೇರಲು ಸಾಧ್ಯವಾಗುತ್ತಿಲ್ಲ. ಭಾರತದ ಅತ್ಯಂತ ದೊಡ್ಡ ಸೋಲು ಸಾಮಾಜಿಕ ಅಸಮಾನತೆ. ಅದು ನೇರವಾಗಿ ಜೀವನದ ಗುಣಮಟ್ಟದ ಮೇಲೆ ಅಪ್ರತ್ಯಕ್ಷವಾಗಿ ಜನರಿಗೆ ಸಿಗುವ ಆರ್ಥಿಕ ಅವಕಾಶಗಳ ಮೇಲೆ ಪರಿಣಾಮ ಬೀರುತ್ತದೆ. ನಿರಕ್ಷರತೆ, ಆರೋಗ್ಯ, ರಕ್ಷಣೆಯ ಅನುಕೂಲಗಳು ಇಲ್ಲದಿರುವುದು, ಭೂಸುಧಾರಣೆ ಮಾಡದಿರುವುದು, ಗ್ರಾಮೀಣ ಬಡವರಿಗೆ ಸಣ್ಣ ಸಾಲಗಳು ಸಿಗದಿರುವುದು, ಮಹಿಳೆಯರು-ಪುರುಷರ ನಡುವಣ ಅಸಮಾನತೆ ಇವು ಸಾಮಾಜಿಕ ಅಸಮಾನತೆಯು ಸಮಸ್ಯೆಯನ್ನು ಬೃಹದಾಕಾರವಾಗಿ ಬೆಳೆಸುತ್ತವೆ.

ಹೀಗೆ ಚೀನಾದಲ್ಲಿ ಸಮಾಜವಾದದ ಅಡಿಪಾಯವಿರುವುದರಿಂದಲೇ ಆರ್ಥಿಕ ಸುಧಾರಣೆ ಹೆಚ್ಚು ಪರಿಣಾಮಕಾರಿಯಾದರೆ ಭಾರತದಲ್ಲಿ ಭೂಸುಧಾರಣೆ ಇಲ್ಲದಿರುವುದು ಹಾಗೂ ಸಾಮಾಜಿಕ ಅಸಮಾನತೆ ಆರ್ಥಿಕ ಸುಧಾರಣೆಯನ್ನು ಕುಂಠಿತಗೊಳಿಸಿವೆ.

ಚೀನಾದಲ್ಲಿ ಆರ್ಥಿಕ ಸುಧಾರಣೆಗಳು

ಜನತೆಯ ಜೀವನಮಟ್ಟವನ್ನು ಹಲವು ಪಟ್ಟು ಹೆಚ್ಚಿಸಿದೆ. ಕೃಷಿ ಉತ್ಪಾದನೆ, ಮೀನುಗಾರಿಕೆ, ಮಾಂಸಮೊಟ್ಟೆ, ಹಾಲುಗಳ ಉತ್ಪಾದನೆಯನ್ನು ಹಲವು ಪಟ್ಟು ಹೆಚ್ಚಿಸಿದೆ. ಜನತೆಗೆ ಆಹಾರದ ಲಭ್ಯತೆಯನ್ನು, ಗುಣಮಟ್ಟವನ್ನು ಹೆಚ್ಚಿಸಿದೆ. ಕೈಗಾರಿಕಾ ಉತ್ಪಾದನೆ, ರಸ್ತೆ, ವಿದ್ಯುತ್ ಮೊದಲಾದ ಮೂಲಭೂತ ಸೌಕರ್ಯಗಳನ್ನು ಹಲವು ಪಟ್ಟು ಹೆಚ್ಚಿಸಿದೆ. ಇವುಗಳ ಮುಂದೆ ಭಾರತದ ಸಾಧನೆ ಕುಬ್ಜವಾಗಿ ಕಾಣುತ್ತದೆ.

ಅದೇ ಸಮಯದಲ್ಲಿ ಸಾರ್ವಜನಿಕ ಉದ್ಯಮದ ಪ್ರಾಧಾನ್ಯತೆಯನ್ನು ಉಳಿಸಿಕೊಂಡಿರುವುದು, ಅದನ್ನು ಇನ್ನಷ್ಟು ಖಾಸಗಿ ವಲಯಕ್ಕೆ ಹೆಚ್ಚು ಅವಕಾಶ, ಕಲ್ಪಿಸಿರುವಾಗಲೇ ಸರ್ಕಾರಿ ವಲಯದ ಯಾವುದನ್ನೂ ಖಾಸಗಿಯವರಿಗೆ ನೀಡದಿರುವುದು ಅಥವಾ ಖಾಸಗೀಕರಣ ಎಂಬ ಪದವೇ ಇಲ್ಲದಿರುವುದು, ದೇಶದ ಭದ್ರತೆ ಹಾಗೂ ಸ್ವಾವಲಂಬನೆಗೆ ಅತೀ ಅಗತ್ಯವಾದ ಟೆಲಿಫೋನ್, ಬಂದರು, ವಿಮಾನನಿಲ್ದಾಣ, ಗಣಿಗಳು ಖಾಸಗಿ ಬಂಡವಾಳಕ್ಕೆ ಒಪ್ಪಿಸದಿರುವುದು, ಸಂಶೋಧನೆ ಮತ್ತು ತಂತ್ರಜ್ಞಾನ ಅಭಿವೃದ್ಧಿಗೆ ಅತಿ ಹೆಚ್ಚು ಪ್ರಾಮುಖ್ಯತೆ, ಸಂಪನ್ಮೂಲಗಳು, ಇತ್ಯಾದಿ ಕ್ರಮಗಳಿಂದ ಸಮಾಜವಾದದ ಮೂಲಭೂತ ಲಕ್ಷಣವನ್ನು ಉಳಿಸಿಕೊಂಡಿರುವುದು ಚೀನಾದ ದೊಡ್ಡ ಯಶಸ್ಸು.

ಇದೆಲ್ಲವನ್ನು ಅತ್ಯಂತ ಪ್ರತಿಕೂಲವಾದ ಜಾಗತಿಕ ಸನ್ನಿವೇಶದಲ್ಲಿ - ಸೋವಿಯತ್ ದೇಶದ ಇತರ ಸಮಾಜ ವಾದಿ ದೇಶಗಳು ಕುಸಿದುಬಿದ್ದ ಸಾಮ್ರಾಜ್ಯಶಾಹಿ ಸೊಕ್ಕಿನಿಂದ ಮೆರೆಯುತ್ತಿರುವ ಸನ್ನಿವೇಶದಲ್ಲಿ ಸಾಧಿಸಲಾಗಿದೆ.

ಸದಾ ಎಚ್ಚರದ ಅವಶ್ಯಕತೆ

ಸಮಾಜವಾದದ ಹಿಡಿಯಲ್ಲಿಯೇ ಮಾರುಕಟ್ಟೆಯನ್ನು ಬೆಳೆಸುವಂತಹ ಕೆಲಸ ಯಾವುದೇ ಸಿದ್ಧ ಮಾದರಿಯಿಲ್ಲದ ಅತ್ಯಂತ ಕ್ಲಿಷ್ಟಕರವಾದ ಹಾಗೂ ವಿಶಿಷ್ಟವಾದ ಕೆಲಸ. ವಿವಿಧ ಪ್ರಯೋಗಗಳನ್ನು ನಡೆಸುತ್ತಾ ಅನುಭವದ ಆಧಾರದ ಮೇಲೆ ತಿದ್ದಿ ಕೊಳ್ಳುತ್ತಾ ಸುಧಾರಣೆಗಳನ್ನು ವಿಕಾಸಗೊಳಿಸುತ್ತಾ ಸಾಗ ಬೇಕಾಗಿದೆ. ಇದು ಕತ್ತಿಯ ಮೇಲೆ ನಡೆಯುವಂತಹ ಅನಿವಾರ್ಯ ಸರ್ಕಸ್ಸು. ಇದರಲ್ಲಿ ಸದಾ ಮಾರ್ಕ್ಸ್‌ವಾದೀ ಎಚ್ಚರದಿಂದ ವಾಸ್ತವ ಪರಿಸ್ಥಿತಿಯ ಆಧಾರದಲ್ಲಿ ಪರೀಕ್ಷಿಸಿಕೊಳ್ಳುತ್ತಾ ದಾರಿಯನ್ನು ಕಂಡುಕೊಳ್ಳಬೇಕಾಗಿದೆ.

ಇದರ ಜೊತೆಗೆ ಆರ್ಥಿಕ ಸುಧಾರಣೆಯ ಭಾಗವಾಗಿ ವಿದೇಶಿ ಬಂಡವಾಳಶಾಹಿ ದೇಶಗಳ ಅತ್ಯಂತ ಕೀಳು ಸಂಸ್ಕೃತಿ, ಅಭಿರುಚಿಗಳು ಸಮಾಜವಾದಿ ಸಮಾಜದ ಮೌಲ್ಯಗಳಿಗೆ ಹಾನಿ ಮಾಡದಂತೆ ಕೂಡ ಎಚ್ಚರವಹಿಸಬೇಕಾಗಿದೆ. ಚೀನಾಕ್ರಾಂತಿಯ ವಿಶ್ವ ಪ್ರಾಮುಖ್ಯತೆ ಮತ್ತು ಅದರ ಮುಂದಿರುವ ಸವಾಲುಗಳನ್ನರಿತು ನಮ್ಮ ಸೌಹಾರ್ದ ಬೆಂಬಲವನ್ನು ನೀಡಬೇಕು.

ಇನ್ನೊಂದು ಸರಣಿ ಆರಂಭ

ಬಳ್ಳಾರಿ ತಾಲ್ಲೂಕಿನಲ್ಲಿ ಮತ್ತೆರಡು ಆತ್ಮಹತ್ಯೆ ಪ್ರಕರಣಗಳು

ಬಳ್ಳಾರಿ ಜಿಲ್ಲೆಯು ಕೆಲವೇ ದಿನಗಳ ಹಿಂದೆ ಇಡೀ ದೇಶದ ಮಾತ್ರವಲ್ಲ ಜಗತ್ತಿನ ಗಮನ ಸೆಳೆಯಿತು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಸೋನಿಯ ಗಾಂಧಿ ತಮ್ಮ ಗೆಲುವನ್ನು ಬಯಸಿ ಲೋಕಸಭೆಗೆ ಈ ಕ್ಷೇತ್ರದಿಂದ ಸ್ಪರ್ಧಿಸಿದ್ದರು.

ಇದೀಗ ಚುನಾವಣೆ ಮುಗಿದಿದೆ! ಮತ್ತೊಂದು ವಿಷಾದದ ಪ್ರಕರಣ ರಾಜ್ಯದ- ದೇಶದ ಗಮನ ಸೆಳೆದಿದೆ. ಈ ಬಾರಿ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಳೆದ ವರ್ಷ ದೇಶದಾದ್ಯಂತ ಸಾಲದ ಬಾಧೆ ತಾಳಲಾರದೇ 500 ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡ ನಂತರ ಇದೀಗ 2 ನೇ ಸರಣಿ ಆರಂಭವೇನೋ ಎನ್ನುವಂತೆ ಈ ಆತ್ಮಹತ್ಯೆಗಳು ಬೆಳಕಿಗೆ ಬಂದಿವೆ.

ಗೇಣಿ ಗೇಯ್ದು ಹೋರಾಡಿದ:

ಬಳ್ಳಾರಿ ತಾಲ್ಲೂಕಿನ ಅಲಕುಂದಿ ಗ್ರಾಮಕೆ ಸೇರಿದ ಮೂಲತಃ ಆಂಧ್ರದಿಂದ 15-20 ವರ್ಷಗಳ ಹಿಂದೆಯೇ ರಾಮರಾವ್ ವಿಷ ಕುಡಿದುದು ಮೊದಲಿಗೆ ಹೊರಬಂದಿತ್ತು. ಇವರಿಗೆ ಸ್ವಂತ ಜಮೀನು 11 ಎಕರೆ ಇದೆ. ಸಾಧಾರಣ 3 ಇಂಚು ನೀರು ಬರುವ ಕೊಳವೆ ಬಾವಿ ಇಟ್ಟುಕೊಂಡಿದ್ದರು. ಕಳೆದ 1992 ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ಪಡೆದ 60 ಸಾವಿರ ರೂಪಾಯಿಗಳ ಸಾಲ ತೀರಿಸಲು ಇನ್ನು ಸಾಧ್ಯವಾಗಿಲ್ಲ. ಈಗದು ಕೆಲ ಲಕ್ಷಗಳಾಗಿ ಬೆಂಬಿಡದೆ ಕಾಡಿದೆ. ನ್ಯಾಯಾಲಯದಲ್ಲಿ ವ್ಯಾಜ್ಯವಾಗಿ 4-5 ವರ್ಷಗಳಿಂದ ಅಲೆಯುವಂತೆ ಮಾಡಿದೆ.

ನಂತರ ಸ್ವಂತ ಭೂಮಿಯ ಸಾಗುವಳಿಗಾಗಿ ಖಾಸಗೀ ಸಾಲವನ್ನು ಅವಲಂಬಿಸಬೇಕಾಯಿತೆಂದು ದುಃಖತಪ್ತೆ ಶ್ರೀಮತಿ ರಾಮ್ ರಾವ್ ನೀರು ತುಂಬಿದ ಕಣ್ಣುಗಳಿಂದ ವ್ಯಥೆಯಾದ ಕಥೆಯನ್ನು ವಿವರಿಸಿದರು.

ಖಾಸಗೀ ಸಾಲವೆಂದರೆ ಬ್ಯಾಂಕ್‌ನಂತೆ ಹಣ ಕೊಡುವುದಿಲ್ಲ! ಜಮೀನಿಗೆ ಬೇಕಾದ ಬೀಜ, ಗೊಬ್ಬರ ಕ್ರಿಮಿನಾಶಕ ಮುಂತಾಗಿ ಕೊಡುವುದೇ ಆಗಿದೆ. ಬಡ್ಡಿಯು ಕೇವಲ ತಿಂಗಳೊಂದಕ್ಕೆ 3 ರೂ ಮಾತ್ರವೇ. ವರುಷಕ್ಕೊಮ್ಮೆ ಚಕ್ರಬಡ್ಡಿಯೂ ಸೇರುತ್ತದೆ. ಬಿತ್ತಿ ಬೆಳೆಯಲು ಯತ್ನಿಸಿದ್ದು ಈಚಿನವರೆಗೆ ಹತ್ತಿ ಒಣಮೆಣಸಿನಕಾಯಿ ಹೇಗಾದರೂ ಮಾಡಿ ಸಾಲ ತೀರಿಸಬೇಕೆಂಬ ಛಲದಿಂದ ಹೆಂಡತಿ-ಮಕ್ಕಳ ಸಹಾಯದಿಂದ ಮತ್ತಷ್ಟು ಭೂಮಿ ಗೇಣಿಗೆ ಪಡೆದ ಗರಿಷ್ಠ 25 ಎಕರೆವರೆಗೆ ಗೇಣಿಗೆ ಸಾಗುವಳಿ ಮಾಡಿದ್ದಾಗಿ ಬಿಎಸ್ಸಿ 2 ನೇ ವರುಷ ಓದುತ್ತಿರುವ ಮಗ ಯುಗಂಧರ್ ತಿಳಿಸಿದ! ಈ ವರ್ಷವೂ 8 ಎಕರೆ ಗೇಣಿಗೆ ಭೂಮಿ ಪಡೆಯಲಾಗಿದೆ.

ಕಳೆದ ವರ್ಷ 16 ಎಕರೆಗೆ ಕೇವಲ 16 ಕ್ವಿಂಟಲ್ ಹತ್ತಿ ಪಡೆದ 3 ವರ್ಷ ಕೆಳಗೆ 20'ಎಕರೆಗೆ 30 ಕ್ವಿಂಟಲ್ ಹತ್ತಿ ಪಡೆದಿದ್ದ. ಇದು ಇಳುವರಿ ಸಮಸ್ಯೆಯಾದರೇ ಕಳೆದ 7-8 ವರ್ಷಗಳಿಂದ ಹತ್ತಿ ಬೆಳೆಗೆ ಕನಿಷ್ಠ 12 ಸಾವಿರ, ಒಣಮೆಣಸಿನಕಾಯಿ ಬೆಳೆಗೆ ಕನಿಷ್ಠ 25 ಸಾವಿರ ರೂಪಾಯಿನಂತೆ ಪ್ರತಿ ಎಕರಿಗೆ ಖರ್ಚು ಮಾಡಿದ ಬೆಳೆಗೆ ಅಂಟಿದ ರೋಗ ನಿವಾರಣೆಗಾಗಿ ಕ್ರಿಮಿನಾಶಕ ಸಿಂಪಡಿಸಿದಾ..... ಸಿಂಪಡಿಸಿದಾ..... ಸಿಂಪಡಿಸಿದಾ! ಕ್ರಿಮಿನಾಶಕ ಗುಣಮಟ್ಟದ ಬಗ್ಗೆಯೇ ಅನುಮಾನ ಪಟ್ಟ! ಬೀಜ ಹಾಗೂ ರಸಗೊಬ್ಬರ ಬದಲಾಯಿಸಬೇಕೆನಿಸುತ್ತಿತ್ತು. ಆದರೆ ಸಾಲಗಾರ ಕೊಟ್ಟಿದ್ದನ್ನೇ ಬಳಸುವ ಒತ್ತಾಯವಿತ್ತು! ಬೇರೆ ದಾರಿ ಇರಲಿಲ್ಲ.

ಸರಾಸರಿ 10 ಕ್ವಿಂಟಲ್ ಗಿಂತ ಹೆಚ್ಚಿಗೆ ಇಳುವಳಿ ಬಾರದ ಒಣಮೆಣಸಿನಕಾಯಿಗೆ ಕಳೆದ 3-4 ವರ್ಷಗಳಿಂದ ಸಿಕ್ಕಿದ ದರ ಕೇವಲ ಒಂದೂವರೆಯಿಂದಯಿಂದ 2 ಸಾವಿರ ಮಾತ್ರ ಹತ್ತಿ ಬೆಲೆಯೂ ಅಷ್ಟಕ್ಕಷ್ಟೆ!

ಇದರ ಜೊತೆ ಪ್ರಕೃತಿಯ ಆಟ ಬೇರೆ, ಒಂದೆರಡು ವರ್ಷ ಮಳೆ ಬಂದು ಹಾಳು ಮಾಡಿದರೇ, ಮತ್ತೆರಡು ವರ್ಷ ಮಳೆ ಬಾರದೆ ಹಾಳಾದದ್ದಿದೆ ಪರಿಣಾಮ ಸಾಲದ ಅಸಲೊಂದೇ 4 ಲಕ್ಷವಾಗಿ ಅಣಕಿಸುತ್ತಿದೆ. ಈ ಬಾರಿಯು ಕನಿಷ್ಠ 100 ಕ್ವಿಂಟಲ್ ಹತ್ತಿ ಹಾಗೂ ಒಳ್ಳೆಯ ಮಿರ್ಚಿ ಬೆಳೆಯ ನಿರೀಕ್ಷೆಯಲ್ಲಿದ್ದವನಿಗೆ ಕಳಪೆ ಬೀಜ ಹಾಗೂ ಮಳೆಯ ಅಭಾವದಿಂದಾಗಿ ಕನಿಷ್ಠ 50 ಕ್ವಿಂಟಲ್ ಹತ್ತಿಯೂ ಬಾರದೆಂದು ಈ ವರ್ಷದ ಸಾಲವೂ ಮರಳಿ ಭಾರವಾಯಿತೆಂದು ಮುಂದಿನ ದಿನಗಳ ಬದುಕು ದುಸ್ತರವಾಗಿ ಕಾಣಿಸಿ ತೀರ್ಮಾನಿಸಿಯೇಬಿಟ್ಟಾ!

ಗ್ರಾಮದಲ್ಲಿ ಭೂಮಿ ಮಾರಲು ಕೊಳ್ಳುವವರಾರು! ಕೊಳ್ಳಲು ಬಂದರೂ ಅಡ್ಡಾದಿಡ್ಡಿ. ಇವರಿಂದ ಬಡ್ಡಿಯಾದರೂ ತೀರೀತೆ? ಬೇರೆ ವಿಧಿಕಾಣಿಸದೇ ದೇಶದ ಮಾನ ಮುಚ್ಚಲು ತರಹೇವಾರಿ ಹತ್ತಿ ಬೆಳೆದ ರಾಮ್ ರಾವ್ ತನ್ನ ಮಾನ ಮುಚ್ಚಿಕೊಳ್ಳಲು ಅಥವಾ ಅದರ ಹರಾಜಿನಿಂದ ತಪ್ಪಿಸಿಕೊಳ್ಳಲು ಇಹಲೋಕಕ್ಕೆ ಶರಣು ಹೇಳಿದ! ಹುಳ ಕೊಲ್ಲಲಾಗದ ಕ್ರಿಮೀನಾಶಕ ನಿರ್ಧಯವಾಗಿ 18-09-1999 ರಂದು ರಾಮ್ ರಾವ್‌ನನ್ನು ಕೊಂದುಹಾಕಿತು.

ಹರಾಜು ಹಾಕಿದವರನ್ನು ಕೊಳ್ಳುವವರಿಲ್ಲ!

ರಾಮ್ ರಾವ್‌ಗಿಂತ ಭಿನ್ನವೇನಲ್ಲ ಸಂಗನಕಲ್ ತಿಮ್ಮಪ್ಪನ ವ್ಯಥೆ. ಈತನ ವಯಸ್ಸು ಕೇವಲ 35. 3 ಜನ ಸಹೋದರರಿರುವ ಅವಿಭಕ್ತ ಕುಟುಂಬದ ಆಸ್ತಿ ಒಟ್ಟು 18 ಎಕರೆ ನೀರಾವರಿ ಜಮೀನು (ಒಂದು ಬೆಳೆ ನೀರಾವರಿ) ಬಿತ್ತಿಬೆಳೆದದ್ದು ಹತ್ತಿ 50 ವರ್ಷಗಳ ಹಿಂದೆ; ಇದೀಗ ಒಣಮೆಣಸಿನಕಾಯಿ ಹಾಗೂ ಮೆಕ್ಕೆ ಜೋಳ ಸುಮಾರು 8-10 ವರ್ಷಗಳ ಹಿಂದೆಯೇ ತುಂಗಭದ್ರಾ ಗ್ರಾಮೀಣಾ ಬ್ಯಾಂಕಿನಿಂದ ಪಡೆದ ಸಾಲ. 1.75 ಲಕ್ಷ ಡೀಫಾಲ್ಟರ್ ಆದ ಮೇಲೆ ಇದುವರೆಗೆ ಖಾಸಗಿಯವರಿಂದ ಪಡೆದ ಸಾಲ 2.25 ಲಕ್ಷ ಸಣ್ಣ-ಪುಟ್ಟ ಸಾಲಬೇರೆ ಇದೆ. ಈಗ್ಗೆ ಒಂದೆರಡು ವರ್ಷಗಳ ಹಿಂದೆ ಭೂಮಿ ಹರಾಜು ಹಾಕಲು ಬ್ಯಾಂಕ್ ನಿರ್ಧರಿಸಿ ಕ್ರಮವಹಿಸಿತು. ಬ್ಯಾಂಕಿನ ದುರಾದೃಷ್ಟ ಹರಾಜಿನಲ್ಲಿ ಭೂಮಿಕೊಳ್ಳಲು ಒಬ್ಬರು ಬಾರದೇ ಅಧಿಕಾರಿಗಳು ಸುಸ್ತಾಗಿ ಸೋತು ಹೋದರು! ಯಾರು ಕೊಳ್ಳಬೇಕು? ಊರಿಗೇಊರೇ ಸಾಲಗಾರರದಾಗಿದೆ. ಆದರೆ ತಿಮ್ಮಪ್ಪನ ಮಾನ ಊರಿನೆದುರು ಬೀದಿಯಲ್ಲಿ ಹರಾಜಾಯಿತು. ಕಳೆದ ಒಂದೆರಡು ವರ್ಷಗಳಿಂದ ಖಾಸಗೀ ಸಾಲಗಾರರ ವಿಪರೀತ ಕಿರಿಕಿರಿ ಬೇರೆ! ಖಾಸಗೀ ಸಾಲ ವೆಂದರೆ ಮತ್ತೆ ಹಣ ಕೊಟ್ಟಿದ್ದಲ್ಲ! ಬೀಜ ಗೊಬ್ಬರ ಕ್ರಿಮೀನಾಶಕ ಕೊಟ್ಟದ್ದೇ ಆಗಿದೆ. ಕಳೆದ ಎಳೆಂಟು ವರ್ಷಗಳಿಂದ ಕುಸಿದ ಇಳುವರಿ ಅಣಕಿಸುವ ಬೆಳೆಗಳು, ದುಬಾರಿ ಬಡ್ಡಿಯು ಸೇರುತ್ತಿರುವ ಚಕ್ರಬಡ್ಡಿಯಲ್ಲೂ ಕನಸಿನಲ್ಲೂ ತಿಮ್ಮಪ್ಪನನ್ನು ಕಾಡದೆ ಬಿಟ್ಟಿಲ್ಲ. ಇದರ ಕಿರಿ ಕಿರಿ ಹಲವು ಬಾರಿ ಹಾಸಿಗೆಯಲ್ಲೂ ಬೆಚ್ಚಿ ಬೀಳಿಸಿದೆ. ಕೆಲವು ತಿಂಗಳುಗಳ ಹಿಂದೆ ವಿಷ ಕುಡಿದು ಸಾಯುವುದಾಗಿ ಮನೆಯೊಳಗೆ ಮನೆಯ ಅಡಿಗೆಗಾಗಿ ಹಣ ಕೇಳಿದ್ದಾಗ ಗೊಣಗಿದ್ದನ್ನು ಅದರ ಒತ್ತಡವನ್ನು ತಾಯಿ ನಾಗಮ್ಮ ಹೆಂಡತಿ ಲಕ್ಷ್ಮಿಯು ಅಳುತ್ತಾ ರೈತ ಸಂಘದ ನಿಯೋಗಕ್ಕೆ ತಿಳಿಸಿದರು ಈ ವರ್ಷದ ಬೆಳೆಯು ನೀರಿಲ್ಲದೆಯೋ ಕಳಪೆಬೀಜದಿಂದಲೋ ಒಟ್ಟಾರೆ ಒಣಗಿ ಹೋಗಿ ಭವಿಷ್ಯತ್ತನ್ನು ಗಾಢಾಂದಕರವಾಗಿದೆ. ಪರಿಣಾಮವಾಗಿ ಕ್ರೂರ ಕ್ರಿಮಿನಾಶಕ ಮತ್ತೊಂದು ಆಹುತಿ 19-09-99 ರಂದು ಪಡೆಯಿತು. ಗ್ರಾಮದಲ್ಲಿ ಮಸಣದ ಮೌ... ಸೃಷ್ಟಿಸಿದೆ.

ದೌಢಾಯಿಸಿದರು:

ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಗೊಂಡ ತಕ್ಷಣವೆ ಹಲವು ರಾಜಕೀಯ ಪಕ್ಷಗಳು, ಅವುಗಳ ಮುಖಂಡರು ದುಃಖ ತಪ್ತ ಕುಟುಂಬಗಳಿಗೆ ಸಾಂತ್ವಾನ ಹೇಳಲು ದೌಡಾಯಿಸಿದರು. ವಿರೋಧ ಪಕ್ಷದ ನಾಯಕರಾಗಿದ್ದ ಹೆಚ್.ಕೆ.ಪಾಟೀಲ ಕಾಂಗ್ರೆಸ್ ಮುಖಂಡರು ಮೊದಲಿಗರಾಗಿ ಬೆಂಗಳೂರು ಬಿಟ್ಟರು! ಪಕ್ಷದ ವತಿಯಿಂದ ಪರಿಹಾರದ ಚೆಕ್ ವಿತರಿಸಿ ಸಂತೈಸಿದರು. ಮತ್ತೊ... ವಿಧಾನಸ ಪರಿಷತ್ ಮುಖಂಡರಾದ ಎನ್.ತಿಪ್ಪಣ್ಣನವರು ರೈತರ ಆತ್ಮಹತ್ಯೆಯ ವಿಚಾರದಲ್ಲಿ ರಾಜಕೀಯ ಬೇಡವೆಂದರೂ! ತಮ್ಮ... ಕರೆದೊಯ್ಯಬೇಕಿತ್ತೆಂದು ಹಲುಬಿದರು! ಬಿಜೆಪಿ-ಮಿತ್ರ ಪಕ್ಷಗಳ ಕಾರು ಹಳ್ಳಿಗಳೆಡೆ ಧೂಳೆಬ್ಬಿಸಿದವು ಫೋಟೋ ಕ್ಲಿಕ್ಕಿಸಿದವು ಪತ್ರಿಕೆಗಳಲ್ಲಿ ಸುದ್ದಿಯಾದವು.

ಜಿಲ್ಲಾಧಿಕಾರಿಗಳು ದುಃಖತಪ್ತ ಕುಟುಂಬಗಳನ್ನು ಭೇಟಿ ಮಾಡಿ ಹತ್ತು ಸಾವಿರದಷ್ಟು ಪರಿಹಾರ ನೀಡಿಬಂದರು!

ರಾಜಕೀಯ ಮುಂದಾಳುಗಳೆಲ್ಲಾ ಜಿಲ್ಲಾಧಿಕಾರಿಗಳನ್ನು ಹೆಚ್ಚಿನ ಪರಿಹಾರ ನೀಡಲು ಒತ್ತಾಯಿಸಿದರು. ನಾನು ಅಸಹಾಯಕ. ನನಗಿರುವ ಅಧಿಕಾರ ಉಪಯೋಗಿಸಿ ಇಷ್ಟೇ ಪರಿಹಾರ ನೀಡಲು ಸಾಧ್ಯವೆಂದೂ; ಹೇಗಿದ್ದರೂ ನಿಮ್ಮ ಸರ್ಕಾರ ಅಧಿಕಾರಕ್ಕೆ ಬರುತ್ತದೆಂದು ಹೇಳುತ್ತಿರುವುದರಿಂದ ದಯಮಾಡಿ ಹೆಚ್ಚಿನ ಪರಿಹಾರ ನೀಡುವಂತೆ ಒತ್ತಾಯಿಸಿ ನೆರವಾಗಿರೆಂದು ಜಿಲ್ಲಾಧಿಕಾರಿಗಳು ಕಾಂಗ್ರೆಸ್ ಹಾಗೂ ಎನ್‌ಡಿಎ ಮುಂದಾಳುಗಳಿಗೆ ಮರಳಿ ಒತ್ತಾಯಿಸಿದರು!

ಪ್ರಾಂತ ರೈತ ಸಂಘದ ಒತ್ತಾಯ

ಕರ್ನಾಟಕ ಪ್ರಾಂತ ರೈತ ಸಂಘದ ನಿಯೋಗವೊಂದು ದುಃಖಪೀಡಿತ ಕುಟುಂಬಗಳನ್ನು ಭೇಟಿ ಮಾಡಿ ಸಂತೈಸಿ ಪರಿಸ್ಥಿತಿಯ ಕಾರಣವನ್ನು ಪರಿಶೀಲಿಸಿ ಚರ್ಚಿಸಿತು. ಸತ್ತ ರೈತರ ಕುಟುಂಬಗಳಿಗೆ ತಲಾ 1 ಲಕ್ಷ ರೂ.ಗಳ ಪರಿಹಾರ ನೀಡುವಂತೆ ಆತ್ಮಹತ್ಯೆ ಪ್ರಕರಣದ ಹಿಂದಿರುವ ಕೇಂದ್ರ-ರಾಜ್ಯ ಸರ್ಕಾರಗಳ ನೀತಿಗಳು ಸೇರಿದಂತೆ ಒಟ್ಟು ಅಂಶವನ್ನು ಪರಿಶೀಲಿಸಲು ಸದನ ಸಮಿತಿ ರಚಿಸುವಂತೆ ಬಡರೈತರ ಸಾಲ ಮನ್ನಾ ಮಾಡುವಂತೆ, ಕಳಪೆ ಬೀಜ, ಕ್ರಿಮಿನಾಶ, ರಸಗೊಬ್ಬರಗಳ ಮೇಲೆ ಪರಿಣಾಮಕಾರಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿತು.

ಪರ್ಯಾಯ ಪಕ್ಷವೊಂದನ್ನು ಸ್ವಾಗತಿಸಿದ ಹಾನಗಲ್ ಮತದಾರರು

ಪುಟ 3 ರಿಂದ

ಗೈಬು ಮತ್ತು ಆತನ ಡೋಲಕ್ ಅವರೊಂದಿಗೆ ಲತಾ, ದಾಕ್ಷಾಯಿಣಿ, ಗೀತಾ, ಲೋಕೇಶ್, ಮುಲ್ಲಾ, ಪ್ರಕಾಶಕೋರಿಮಠ, ಬಸವರಾಜ, ಶ್ರೀನಿವಾಸ, ಸೋಮಣ್ಣ, ಜೈರಾಜ, ವೈ.ಐ. ಪಠಾಣ, ಮಹೇಶಪತ್ತಾರ, ಅಶೋಕ ಮೋಹನ ದಾಸ್, ವಿಠ್ಠಲ ಭಂಡಾರಿ, ಮಹಂತೇಶ, ಯುವರಾಜ್, ವಿಜಯೇಂದ್ರ... (ಎಲ್ಲರೂ ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐನ ಸಂಗಾತಿಗಳು) ವಾಹನ ಚಾಲಕನಾಗಿ ಬಂದು ತಂಡದ ಹಾಡುಗಾರನಾದ, ಸಿ.ಪಿ.ಐ(ಎಂ)ನ ಸದಸ್ಯನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಕಲ್ಲಪ್ಪ, ಇನ್ನೊಂದು ತಂಡದಲ್ಲಿ ಸಿ.ಎಂ. ಪಾಟೀಲ, ಹಕ್ಕಲಗೌಡ ಪಾಟೀಲ, ಕಾಂ. ಜಿನ್ನಾ, ಸಹದೇವಪ್ಪ ತುರ್ಕಪ್ಪ,...... ಹೀಗೆ ಅನೇಕ ಜನ ಸಮರೋಪಾದಿಯಲ್ಲಿ ಕೆಲಸದಲ್ಲಿ ತಲ್ಲೀನ ಆಗಿದ್ದರು.

ಹೋದಲ್ಲೆಲ್ಲ ನಮ್ಮ ಹಾಡುಗಾರರು ಕೆಟ್ಟ ವ್ಯವಸ್ಥೆಯನ್ನು ಪರಿಚಯಿಸುವ ಹಾಡು ಹೇಳಿದ್ದಾರೆ. ನಮ್ಮ ಉದ್ದೇಶಗಳನ್ನು ಸಾರುವ 3-4 ರೀತಿಯ ಮನವಿಪತ್ರ (2-3ಪುಟದ್ದು) ಹಂಚಿದ್ದಾರೆ. ಎಲ್ಲಾ ಪಕ್ಷಗಳು ಮೇಲಿಂದ ಮೇಲೆ ಕೂಗುತ್ತಾ ಓಡಾಡಿದರೆ ನಮ್ಮವರು ಜನರ ಮಧ್ಯ ಇಳಿದು 1/2 ಗಂಟೆ 1 ಗಂಟೆ ಸುದ್ದಿ ಹೇಳುತ್ತಿದ್ದರು. ಚರ್ಚಿಸುತ್ತಿದ್ದರು. ಯಾಕೆ ಬೆಲೆ ಏರಿದೆ? ಬಿಜೆಪಿ ಹೇಗೆ ರೈತವಿರೋಧಿ? ದೇಶವನ್ನು ಬಿಜೆಪಿ ಸರ್ಕಾರ ಹೇಗೆ ಮಾರಾಟ ಮಾಡುತ್ತಿದೆ? ಪಟೇಲರ ಹಾರಾಟದ ಹಿನ್ನೆಲೆ ಏನು? ಬಡತನಕ್ಕೆ ಕಾರಣವ್ವೇನು? ನೀವು ಯಾಕೆ ಭೂ ಹೋರಾಟದಲ್ಲಿ ತೊಡಗಬೇಕು? ಯಾಕೆ ಉಳಿದ ಪಕ್ಷಗಳು ಹಣ ಚೆಲ್ಲುತ್ತವೆ? ಸರಾಯಿ ಹಂಚುತ್ತವೆ? ಸಿಪಿಐ(ಎಂ) ಹೇಗೆ ಉಳಿದ ಪಕ್ಷಗಳಿಗಿಂತ ಭಿನ್ನ, ಪಶ್ಚಿಮ ಬಂಗಾಳದ, ಕೇರಳದ ಸಾಧನೆ ಏನು? ಅಲ್ಲಿಯ ಸರ್ಕಾರ ಯಾಕೆ 22 ವರ್ಷದಿಂದ ಅಧಿಕಾರದಲ್ಲಿ ಇವೆ? ಕೋಮು ಸೌಹಾರ್ದತೆ ಅಲ್ಲಿ ಯಾಕೆ ಇದೆ? ಅಲ್ಲಿಯ ರೈತರ ಸ್ಥಿತಿ ಏನು? ಹೀಗೆ ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ತುಂಬುವ ಕೆಲಸವನ್ನು ಮಾಡಲಾಯಿತು. ನಮ್ಮಲ್ಲೂ ಯಾಕೆ ಸಂಘಟನೆ ಮಾಡುವುದಿಲ್ಲ? ನಮ್ಮಲ್ಲಿ ನೀವ್ಯಾಕೆ ಎಲ್ಲಾ ಕ್ಷೇತ್ರದಲ್ಲಿ ಚುನಾವಣೆಗೆ ನಿಲ್ಲುತ್ತಿಲ್ಲ? ಎಂದು ಅಗ್ರಹಿಸುತ್ತಿದ್ದರು ಈ ವರ್ಷ ನಮ್ಮ ನಿರ್ಧಾರವನ್ನು ಬದಲುಮಾಡುತ್ತೇವೆ ಎಂದು ಆಶ್ವಾಸನೆಕೊಟ್ಟರು. ನಿಮ್ಮಂತೆ ಯಾರು ನಮಗೆ ಹೀಗೆ ತಿಳುವಳಿಕೆ ಕೊಟ್ಟಿ... ಎಂದರು. ಮಳೆ ಬಂದಾಗ್ಗ, ಮಾತು ನಿಲ್ಲಿಸಿದಾ... ಮತ್ತೆ ಮಾತನಾಡಲು, ಒಂದೇ ಊರಿನಲ್ಲಿ ಬೇ... ಬೇರೆಕಡೆ ಸಭೆ ಮಾಡಲು ಅನುವು ಮಾಡಿದರು ಕಾಂಗ್ರೆ, ಸಂಯುಕ್ತದಳಗಳ ಸಭೆಗೆ ಜನಸೇರಿದಲ್ಲೆಲ್ಲ ನಮಗೆ ಮಾತನಾಡಲು ಹೇಳಿದರು.

ಹೀಗೆ ಇಡೀ ಕ್ಷೇತ್ರದಲ್ಲಿ ಜನ ಪರ್ಯಾಯವನ್ನು ಅರಿಸಲು ಸಜ್ಜಾಗಿದ್ದಾರೆ. ಇದು ಉದಾಸಿಯ ನಿದ್ದೆಯನ್ನಂತೂ ಕೆಡಿಸಿದೆ.

- ನಿಸಗ...

ಕೆಂಪು ಟಿಕಲಿ (ಬಿಂದಿ) ತಂದುಕೊಟ್ಟ 'ಖಾನ್' ಎಂಬ ಹುಡುಗ

ಅಂದು ಅಕ್ಕಿ ಆಲೂರಿನ ಸಂತೆ. ನಮ್ಮ ಅಭ್ಯರ್ಥಿ ಫಕ್ಕೀರಪ್ಪ ಹೋತನಹಳ್ಳಿಯವರ ಊರು ಕೂಡ. ರಸ್ತೆಯ ಪಕ್ಕದಲ್ಲಿರುವ ಸ್ಥಳದಲ್ಲಿ ನಮ್ಮ ಪ್ರಚಾರದ 'ಟ್ರಾಕ್ಸ' ನಿಲ್ಲಿಸಿದೆವು. ರಾಮದುರ್ಗದ ಸಂಗಾತಿ ಗೈಬು "ಈ ಸರ್ಕಾರ ರೈತರ ನುಂಗೈತೆ" ಎಂದು ಹಾಡುಹೇಳಿದರು. ಕಾಂ. ಮಹಂತೇಶ "ಈ ಬಾವುಟ ಯಾರದೋ.." ಹಾಡಿದರು. ನಮ್ಮ ಉಳಿದ ಎಸ್.ಎಫ್.ಐ, ಡಿ.ವೈ.ಎಫ್.ಐ ಸಂಗಾತಿಗಳು ಧ್ವನಿಸೇರಿಸಿದರು. 5-10 ನಿಮಿಷದಲ್ಲಿ 300-400 ಜನ ಸೇರಿದರು. ವಾಹನಗಳು ಓಡಾಡಲು ಬೇರೆ ರಸ್ತೆಗಳನ್ನು ನೋಡಿಕೊಳ್ಳಬೇಕಾಯಿತು.

ಕಾಂ. ವಿಠ್ಠಲ ಭಂಡಾರಿ ಅಲ್ಲಿ ಸೇರಿದ ಜನರನ್ನು ಉದ್ದೇಶಿಸಿ 1 ಗಂಟೆಗಳ ಕಾಲ ಮಾತನಾಡಿ ಬಿಜೆಪಿಯ ರೈತ ವಿರೋಧಿ ನೀತಿಯ ಬಗ್ಗೆ, ವಾಜಪೇಯಿಯವರ ಭ್ರಷ್ಟಾಚಾರದ ಬಗ್ಗೆ, ಪಟೇಲರ ಕೊಡಂಗಿತನದ ಬಗ್ಗೆ, ಹೆಗಡೆಯ ಕಂತ್ರಿ ಬುದ್ಧಿಯ ಬಗ್ಗೆ, ಪಶ್ಚಿಮ ಬಂಗಾಳ, ಕೇರಳದ ಎಡರಂಗ ಸರ್ಕಾರದ ಸಾಧನೆ ಬಗ್ಗೆ ವಿವರಿಸಿದರು. ಮಾತನಾಡುವಾಗ ಪ್ರಾಥಮಿಕ ಶಿಕ್ಷಣ ಕೂಡ ಈ ದೇಶದಲ್ಲಿ ಕಡ್ಡಾಯ ಆಗದೆ ಬಾಲಕಾರ್ಮಿಕರು ಹೆಚ್ಚಾಗುತ್ತಿರುವ ಬಗ್ಗೆ, ದುಡಿಯುತ್ತಿರುವ ಇಂಥಹ ಮಕ್ಕಳ ಕನಸುಗಳ ಬಗ್ಗೆ ಮಾತನಾಡಿದರು.


ಮಾತು ಮುಗಿದು 5 ನಿಮಿಷದಲ್ಲಿ ಅವರ ಬಳಿ ಪ್ರತ್ಯಕ್ಷನಾದ ಒಬ್ಬ ಹುಡುಗ ಕೈಯಲ್ಲಿ ಒಂದು ಟಿಕಲಿ (ಬಿಂದಿ) ಪ್ಯಾಕ್ ಹಿಡಿದು ತಂದು ವಿಠ್ಠಲ ಭಂಡಾರಿಯರ ಕೈಯಲ್ಲಿ ಕೊಟ್ಟ ಏನಿದು? ಎಂದು ಕೇಳಿದಾಗ "ಇದು ಕೆಂಪು ಟಿಕಲಿ" ಎಂದ ಯಾಕೆ ಎಂದರೆ "ನಿಮಗಾಗಿ ತಂದಿದ್ದೇನೆ" ಎಂದ. 'ಹೆಸರೇನು? ಎಂದರೆ "ನನ್ನ ಹೆಸರು ಖಾನ್. ಅಂಗಡಿ ಮಾಲಿಕ ಬೈಯುತ್ತಾನೆ. ನಾನು ಹೋಗುತ್ತೇನೆ" ಎಂದು ಓಡಿಹೋದ.

2-3ನೇ ಕ್ಲಾಸಿನಲ್ಲಿಯೇ ಶಾಲೆ ಬಿಟ್ಟ ಒಂದು ಅಂಗಡಿಯಲ್ಲಿ ಕೆಲಸಕ್ಕೆ ಸೇರಿದ 12 ವರ್ಷ ಪ್ರಾಯದ ಈ ಖಾನ್ ಇಡೀ ಭಾಷಣ ಕೇಳಿ ಆ ಅಂಗಡಿಯ ಮಾಲಿಕನಿಗೆ ತಿಳಿಯದಂತೆ ಒಂದು ಟಿಕಲಿ ಪ್ಯಾಕೆಟ್‌ನ್ನು ಕೈಯಲ್ಲಿ ಯಾರಿಗೂ ಕಾಣದಂತೆ ಹಿಡಿದು ತಂದು "ಇದನ್ನು ನಿಮಗಾಗಿ ತಂದಿದ್ದೇನೆ ಎನ್ನುವಾಗ" ಅವನ ಕಣ್ಣು ಮಂಜಾಗಿತ್ತು.

ಇಂಥ ಸಾವಿರಾರು 'ಖಾನ್'ಗಳ ಈ ನಡವಳಿಕೆಗೆ ಪ್ರತ್ಯೇಕ ವ್ಯಾಖ್ಯಾನ ಬೇಕಾಗಿಲ್ಲ ಅಲ್ಲವೆ? ಕಳೆದ ಕೆಲವು ದಶಕಗಳಿಂದ ಹಾನಗಲ್ ಕ್ಷೇತ್ರದ ಪ್ರತಿನಿಧಿಗಳಾಗಿ ಆಯ್ಕೆಯಾದ ಮನೋಹರ ತಹಶಿಲ್ದಾರ ಮತ್ತು ಉದಾಸಿಯಂಥವರ ಕಾರ್ಯವೈಖರಿಗಳೇ ಅಲ್ಲವೆ ಇಂಥ ನೂರು ಮುಗ್ಧ ಬಾಲಕರ ಕನಸುಗಳನ್ನು ಕೊಲೆಗೈದಿದ್ದು...

ದೇಶದ ವಿಭಜನೆ, ಸ್ವಾತಂತ್ರ್ಯದ ನಂತರ ಪಕ್ಷದ ನಾಲ್ಕನೇ ರಾಜ್ಯ ಸಮ್ಮೇಳನ, ಬಹುತೇಕ ವಿರೋಧ ಪಕ್ಷವೆಂಬುದೇ ಇರದ ಹೊಸ ವಿಧಾನಸಭೆಯಬಗ್ಗೆ, ಸ್ವಾತಂತ್ರ್ಯದ ನಂತರ ಹಿಡಿದ ದಾರಿಯ ಮೊದಲ ದಿನಗಳ ನೆನಪುಗಳ ಬಗ್ಗೆ ಓದಿದ್ದೀರಿ ಮುಂದೆ ಓದಿ........

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ
ಕನ್ನಡಕ್ಕೆ: ವಿಶ್ವಕುಂದಾಪುರ

ಕಾಂಗ್ರೆಸ್ ಸರಕಾರದ ಪೋಲೀಸರ ದೌರ್ಜನ್ಯ

ನಿರ್ಮಲ ಚಂದ್ರ ಚಟರ್ಜಿ ಅಥವಾ ಶರತ್ ಚಂದ್ರ ಬೋಸ್ ಅವರ ಮನೆಯಲ್ಲಿ ಈ ಸಮಿತಿಯ ಸಭೆಗಳು ನಿಯಮಿತವಾಗಿ ನಡೆಯುತ್ತಿದ್ದವು. ನಗರದಾದ್ಯಂತ ಸಭೆಗಳು, ಮೆರವಣಿಗೆಗಳು ನಡೆದವು. ಶ್ರದ್ಧಾನಂದ ಪಾರ್ಕ್‌ನಲ್ಲಿ ನಡೆದ ಅಂಥ ಒಂದು ಸಭೆ ನನಗೆ ಇನ್ನೂ ನೆನಪಿದೆ. ಮೃಣಾಲ್ ಕಾಂತಿ ಬೋಸ್ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಬೋಸ್ ಮತ್ತು ಚಟರ್ಜಿ ಮಾತನಾಡಿದರು.

ಬಹುಶಃ ಸ್ವತಂತ್ರ ಭಾರತದಲ್ಲಿ ಬಂದ ಪ್ರಪ್ರಥಮ 'ಕರಾಳ ಕಾನೂನು' ಅದಾಗಿತ್ತು. ಅದಕ್ಕೆ ವಿರುದ್ಧವಾಗಿ ಎದ್ದು ಬಂದ ಚಳುವಳಿ ಕಂಡ ಕಾಂಗ್ರೆಸ್ ಸರಕಾರ ಗಾಬರಿಗೊಂಡು ಬೇಕಾಬಿಟ್ಟಿಯಾಗಿ ಕಾರ್ಯಾಚರಿಸತೊಡಗಿತು.

1947 ಡಿಸೆಂಬರ್ 10 ಪಶ್ಚಿಮ ಬಂಗಾಳದ ಇತಿಹಾಸದಲ್ಲಿ ಒಂದು ದುಃಖದ ದಿನ. ಕರಾಳ ಕಾನೂನನ್ನು ವಾಪಸ್ ಪಡೆಯುವಂತೆ ಒತ್ತಾಯಿಸಲು ವಿದ್ಯಾರ್ಥಿಗಳೂ ಇದ್ದ ಭಾರೀ ಜನಸಂದಣಿ ಅಸೆಂಬ್ಲಿ ಕಟ್ಟಡದ ಹೊರಗೆ ಜಮಾಯಿಸಿತ್ತು. ಜನರನ್ನು ಚದುರಿಸಲು ಪೋಲೀಸರು ಮೊದಲು ಲಾಠಿ ಪ್ರಹಾರ ಮಾಡಿದರು; ನಂತರ ಅಶ್ರುವಾಯು ಶೆಲ್ ಸಿಡಿಸಿದರು. ಕೊನೆಗೆ ಯಾವುದೇ ಪ್ರಚೋದನೆಯಿಲ್ಲದೆ ಗೋಲೀಬಾರ್ ನಡೆಸಿದರು. ಡಬ್ಳ್ಯು.ಎಸಿ ಕೆಡೆಟ್ ಶಿಶಿರ್ ಮಂಡಲ್ ಗೋಲಿಬಾರಿನಲ್ಲಿ ಮಡಿದ. ಲಾಠಿ ಏಟಿನಿಂದ ಅನೇಕ ಜನರು ಗಾಯಗೊಂಡರು. ಜನರ ಮೇಲೆ ಹೊಸ ಸರ್ಕಾರ ಹರಿಯಬಿಟ್ಟ ಮೊದಲ ಗೋಲಿಬಾರ್‌ಗೆ ನಾನು ಪ್ರತ್ಯಕ್ಷ ಸಾಕ್ಷಿಯಾಗಿದ್ದೆ. ಈ ದೌರ್ಜನ್ಯಕ್ಕೆ ಒಬ್ಬ ಹುತಾತ್ಮನಾದ.

ಡಿಸೆಂಬರ್ 10 ರ ಬೆಳಿಗ್ಗೆ ಅಸೆಂಬ್ಲಿಯಲ್ಲಿ ಗೇಟ್ ಮುಚ್ಚಿದ್ದನ್ನು ನಾನು ನೋಡಿದೆ. ಅಲ್ಲಿ ನಡೆಯುತ್ತಿದ್ದ ಅವಾಂತರವನ್ನೆಲ್ಲಾ ಹೈಕೋರ್ಟ್ ಕಟ್ಟಡದ ಹತ್ತಿರದಿಂದ ನಾನು ನೋಡುತ್ತಿದ್ದೆ.

ಪೋಲೀಸರ ಹತ್ತಿರ ಲಾಠಿ ಮಾತ್ರವಲ್ಲದೆ ರಿವಾಲ್ವರ್ ಮತ್ತು ಇತರ ಮಾರಕ ಅಸ್ತ್ರಗಳೂ ಇದ್ದವು. ಸಮೀಪದ ಕಟ್ಟಡದ ಮೊದಲ ಮಹಡಿಗೆ ನಾನು ಹೋದೆ. ಎಲ್ಲೆಲ್ಲೂ ಅಶ್ರುವಾಯು ಹಬ್ಬಿತ್ತು. ಅಶ್ವಾರೂಢ (ಕುದುರೆಮೇಲಿನ) ಪೋಲೀಸರು ಜನರನ್ನು ಚದುರಿಸುತ್ತಿದ್ದರು. ಇಬ್ಬರು ಚಿಕ್ಕ ಹುಡುಗಿಯರು ಗಾಯಗೊಂಡರು. ಅದೇ ರೀತಿ ಕೆಲವು ಹುಡುಗರಿಗೆ ಕೂಡ ಗಾಯಗಳಾದವು.

ಅಲ್ಲೆಲ್ಲೂ ಹತ್ತಿರದಲ್ಲಿ ಒಬ್ಬನೇ ಒಬ್ಬ ಮಂತ್ರಿಯೂ ಸುಳಿಯಲಿಲ್ಲ. ಅವರೇ (ಮಂತ್ರಿಗಳು) ಪೋಲೀಸರಿಗೆ ಪ್ರಚೋದನೆ ನೀಡಿದ್ದರೆಂಬುದು ಎಲ್ಲರಿಗೂ ಗೊತ್ತಿತ್ತು. ಪರಿಸ್ಥಿತಿ ಬಿಗಡಾಯಿಸತೊಡಗಿತು. ಜನರು ಪೋಲೀಸರ ಮೇಲೆ ಕಲ್ಲೆಸೆಯಲು ಆರಂಭಿಸಿದರು. ಪೋಲೀಸರ ದಬ್ಬಾಳಿಕೆಯೂ ಹೆಚ್ಚಾಯಿತು. ಜನರು ಸಿಕ್ಕಾಪಟ್ಟೆ ಓಡತೊಡಗಿದರು. ಆಗ ಪೋಲೀಸರು ಗುಂಡು ಹಾರಿಸಲು ಶುರು ಮಾಡಿದರು. ಅದು ಕೂಡ ಅನಗತ್ಯವಾಗಿತ್ತು ಎಂಬುದು ನನಗೆ ಮನವರಿಕೆಯಾಗಿತ್ತು.

ಬ್ಯಾರಿಸ್ಟರ್ ಮೇಲೂ ಗುಂಡು!

ಅನಗತ್ಯ ಗೋಲೀಬಾರಿನ ಒಂದು ಪ್ರಕರಣವನ್ನು ಹೇಳುತ್ತೇನೆ. ಸಾಲಿಸಿಟರ್ ಕೋಣೆಯಿಂದ ಒಬ್ಬ ಬ್ಯಾರಿಸ್ಟರ್ ಹೊರಬರುತ್ತಿದ್ದರು. ಅವರ ಮೇಲೆಯೂ ಗುಂಡು ಹಾರಿಸಲಾಯಿತು!

ಶಿಶಿರ್ ಮಂಡಲ್ ಡಬ್ಲ್ಯು.ಎ.ಸಿ. ಅಂಬುಲೆನ್ಸ್‌ನಲ್ಲಿ ಕುಳಿತಿದ್ದಾಗ ಪೋಲೀಸರು ಗುಂಡು ಹಾರಿಸಿದರು. ಆತನನ್ನು ಕೊಂದರು. ಬರ್ಬರ ಪೋಲೀಸ್ ಪಡೆ ರೆಡ್‌ಕ್ರಾಸ್ ಅನ್ನು ಕೂಡ ಬಿಡಲಿಲ್ಲ. ಆ ಪ್ರದೇಶ ಸಂಜೆವರೆಗೂ ಉದ್ವಿಗ್ನವಾಗಿತ್ತು. ಆನಂತರ, ಅಸೆಂಬ್ಲಿಯ ಮುಂದುಗಡೆ ಶಾಂತಿಯುತ ಪ್ರದರ್ಶನಗಳು ಮುಂದುವರಿದವು.

ವಿಧಾನಸಭೆಯಲ್ಲಿ ಪೋಲೀಸ್ ದೌರ್ಜನ್ಯದ ವಿಷಯವನ್ನು ಪ್ರಸ್ತಾಪಿಸಲು ನಾವು ನಿರ್ಧರಿಸಿದೆವು. ಮರುದಿನ ನಾವು ನಿಲುವಳಿ ಗೊತ್ತುವಳಿಯೊಂದನ್ನು ಮಂಡಿಸಿದೆವು. ಅದನ್ನು ಯಾರೂ ವಿರೋಧಿಸಲಿಲ್ಲ. ಚರ್ಚೆ ಆರಂಭವಾದಾಗ ಕಾಂಗ್ರೆಸ್ ಸದಸ್ಯ ನಿಹರೇಂದು ದತ್ತ ಮಜುಂದಾರ ಇದ್ದಕ್ಕಿದ್ದಂತೆ ನಿಲುವಳಿ ಸೂಚನೆಯನ್ನು ವಿರೋಧಿಸಿದರು; ಆತ ಕಮ್ಯುನಿಸ್ಟರ ವಿರುದ್ಧ ವಿಷಕಾರಿದರು. ಪಕ್ಷಾಂತರಿಯೊಬ್ಬನ ಗುಣಕ್ಕೆ ತಕ್ಕುದಾಗಿಯೇ ಇತ್ತು ಅವರ ಈ ಕ್ರಮ. ಮುಸ್ಲಿಂ ಲೀಗ್‌ನ ಅಬ್ದುಲ್ ಹಸೀಮ್ ನನ್ನ ಗೊತ್ತುವಳಿಯನ್ನು ಬೆಂಬಲಿಸಿ ಪರಿಣಾಮಕಾರಿ ಭಾಷಣ ಮಾಡಿದರು.

ನಿಗದಿಪಡಿಸಿದ ಎರಡು ಗಂಟೆ ಅವಧಿ ಮುಗಿದು ಹೋಗಿದ್ದರಿಂದ ಗೊತ್ತುವಳಿ ಮೇಲೆ ಮತದಾನ ನಡೆಯಲಿಲ್ಲ.

1947 ಡಿಸೆಂಬರ್‌ನಲ್ಲಿ ತೀವ್ರ ಚರ್ಚೆಯ ನಂತರ ಮಸೂದೆ ಅಂಗೀಕಾರವಾಗಿ ಕಾನೂನು ಆಯಿತು. ಅದು 1967 ರ ಮಾರ್ಚ್ ವರೆಗೆ ಸಿಂಧುವಾಗಿತ್ತು. ಆ ವರ್ಷ ಅಧಿಕಾರಕ್ಕೆ ಬಂದ ಸಂಯುಕ್ತ ರಂಗ ಸರಕಾರ ಈ ಕಾನೂನನ್ನು ರದ್ದು ಮಾಡಿತು. ಸುಹ್ರಾವರ್ದಿ ಈ ಸುಗ್ರೀವಾಜ್ಞೆಯನ್ನು ಮಂಡಿಸಿದಾಗ, ಗೂಂಡಾ ಕೃತ್ಯಗಳು ಮತ್ತು ಗಲಭೆಕೋರರನ್ನು ತಡೆಯಲು ಇದು ಅಗತ್ಯ ಎಂದು ನಮಗೆ ಹೇಳಲಾಗಿತ್ತು. ಏನಿದ್ದರೂ ಕೆಲವು ಗೂಂಡಾಗಳನ್ನು ಬಂಧಿಸಿದರೂ ಆ ಸುಗ್ರೀವಾಜ್ಞೆಯ ನಿಜ ಉದ್ದೇಶವೇ ಬೇರೆ ಇತ್ತು. ಕಾರ್ಮಿಕರು, ರೈತರು, ಮಧ್ಯಮವರ್ಗದ ನೌಕರರು ನಡೆಸುವ ಚಳುವಳಿಗಳನ್ನು ಬಗ್ಗು ಬಡಿಯುವುದೇ ಅದರ ಗುರಿಯಾಗಿತ್ತು.

ಈ ಸುಗ್ರೀವಾಜ್ಞೆಯಿಂದಾಗಿ ತೇಭಾಗ ಚಳುವಳಿಗೆ ಏಟು ಬಿತ್ತು. ಚಳುವಳಿಯ ಅನೇಕ ನಾಯಕರು ಬಂಧಿತರಾದರು. ಈ ಕರಾಳ ಕಾಯಿದೆಯ ವಿರುದ್ಧ ಅನೇಕ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಕಾರ್ಯಕರ್ತರೂ ನಮ್ಮ ಜತೆ ಕೈಜೋಡಿಸಿದರು. ಈ ಎಲ್ಲದರ ಮುಂದೆ ಅದನ್ನು ಮಸೂದೆಯಾಗಿ ಸದನದ ಮುಂದಿಡುವ ಧೈರ್ಯ ಸುಹ್ರವರ್ದಿಗೆ ಇರಲಿಲ್ಲ. ಅಲ್ಲದೆ ಅವರು ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳಲಿಲ್ಲ.

ಜನವಿರೋಧಿ ಕ್ರಮಕ್ಕೆ

ಕಾಂಗ್ರೆಸ್ ಬೆಂಬಲ

ಸುಹ್ರವರ್ದಿಯವರ ಸುಗ್ರೀವಾಜ್ಞೆಯನ್ನು ವಿರೋಧಿಸಿದ್ದ ಕಾಂಗ್ರೆಸ್ ನಾಯಕರೇ ಜನವಿರೋಧಿಯಾದ ಮಸೂದೆಯನ್ನು ಸಕ್ರಿಯವಾಗಿ ಬೆಂಬಲಿಸಿದ್ದು ತೀರಾ ಆಶ್ಚರ್ಯದ ಸಂಗತಿ.

ನ್ಯಾಯಸಮ್ಮತ ಕಾರ್ಮಿಕ ಚಳುವಳಿಯ ವಿರುದ್ಧ ಸುಗ್ರೀವಾಜ್ಞೆಯನ್ನು ಬಳಸುವುದಿಲ್ಲ ಎಂದು ಮುಖ್ಯಮಂತ್ರಿ ಡಾ. ಘೋಷ್ ಆಶ್ವಾಸನೆ ನೀಡಿದರು. ಆದರೆ ಮಾಡಿದ್ದು ತದ್ವಿರುದ್ಧವಾದುದನ್ನು.

ದೇವನಾಥ ದಾಸ್(ಐಎಸ್ಐ), ಬೆಂಗಾಲ್ ಮಂಚಿಯರ್ಸ್‌ನ ಸತ್ಯ ಗುಪ್ತ, ದ್ವಾರಕಾನಾಥ ಮಿತ್ರ ಮತ್ತು ಬ್ರೂಕ್‌ಬಾಂಡ್ ಹಾಗೂ ಶ್ರೀ ದುರ್ಗ ಕಾಟನ್ ಮಿಲ್ಸ್ ಕಾರ್ಮಿಕರ ಹೋರಾಟಕ್ಕೆ ನೇತೃತ್ವ ನೀಡಿದ ಕಾರ್ಮಿಕ ಮುಂದಾಳು ಮನೋರಂಜನ್ ಹಜ್ರಾ ಮೊದಲಾದವರನ್ನು ಬಂಧಿಸಲಾಯಿತು.

ಯಾವುದೇ ವಾರಂಟಗಳಿಲ್ಲದೆ ಅವರ ಮನೆಗಳ ಮೇಲೂ ದಾಳಿ ಮಾಡಲಾಯಿತು. ಮನೆಯಲ್ಲಿದ್ದ ಹೆಂಗಸರಿಗೂ ಪೋಲೀಸರು ಕಿರುಕುಳ ಕೊಟ್ಟರು.

ಗೂಂಡಾಗಳ ಬಿಡುಗಡೆ!

ಸುಹ್ರವರ್ದಿ ಸರಕಾರ ಬಂಧಿಸಿದ್ದ ನೂರಾರು ಗೂಂಡಾಗಳನ್ನು ಕಾಂಗ್ರೆಸ್ ನಾಯಕತ್ವ ಬಿಡುಗಡೆ ಮಾಡಿತು.

1947 ನವೆಂಬರ್ 27 ರಂದು ವಿಧಾನಸಭೆಯಲ್ಲಿ ಮಂಡಿಸಿದ್ದ ಮಸೂದೆಯನ್ನು ಕಾಂಗ್ರೆಸ್ ಪಕ್ಷ ಮುಸ್ಲಿಂ ಲೀಗ್, ಕಾಂಗ್ರೆಸ್‌ನ ಒಂದು ಭಾಗ ಮತ್ತು ಗಣ್ಯ ನಾಗರೀಕರು ವಿರೋಧಿಸಿದ್ದರು. ಮಸೂದೆಯನ್ನು ಪರಿಶೀಲಿಸುವ ಆಯ್ಕೆ ಸಮಿತಿಯಿಂದ ನಮ್ಮಿಬ್ಬರೂ ಕಮ್ಯುನಿಸ್ಟ್ ಶಾಸಕರನ್ನು ಕೈಬಿಡಲಾಯಿತು. ವಾಸ್ತವಾಗಿ ಮುಸ್ಲಿಂ ಲೀಗ್ ಸದಸ್ಯ ಮಹಮದ್ ಕುದಾ ಭಕ್ಷ್ ಪ್ರಸ್ತಾವಿಸಿದ್ದ 11 ಜನರ ಪಟ್ಟಿಯಲ್ಲಿ ನನ್ನ ಹೆಸರು ಇತ್ತು. ಕಮ್ಯುನಿಸ್ಟ್ ಶಾಸಕರನ್ನು ಕೈಬಿಟ್ಟ ಪಟ್ಟಿ ಸಹಜವಾಗಿಯೇ ಸರಕಾರಕ್ಕೆ ಪ್ರಿಯವಾಯಿತು.

ಡಾ. ಘೋಷ್ ಪಟ್ಟಿಯಲ್ಲಿ 8 ಕಾಂಗ್ರೆಸ್ಸಿಗರು, ಒಬ್ಬ ಆಂಗ್ಲೋ ಇಂಡಿಯನ್ ಮತ್ತು ಇಬ್ಬರು ಮುಸ್ಲಿಂ ಲೀಗ್ ಸದಸ್ಯರ ಹೆಸರಿತ್ತು. ನಮ್ಮ ಪ್ರಬಲ ಪ್ರತಿಭಟನೆಯಿದ್ದರೂ 1948 ಜನವರಿ 5 ರಂದು ಕಾಂಗ್ರೆಸ್ ಸರ್ಕಾರ ಪರಶೀಲನೆ ಮತ್ತು ಅಂಗೀಕರಾಕ್ಕಾಗಿ ಆ ಮಸೂದೆಯನ್ನು ಮಂಡಿಸಿಯೇ ಬಿಟ್ಟಿತು.

ಇಡೀ ಪಶ್ಚಿಮ ಬಂಗಾಳ ಅದರ ವಿರುದ್ಧ ಸೆಟೆದು ನಿಂತಿತು.

ಮುಷ್ಕರ ಮುರಿಯಲು ಕಾಂಗ್ರೆಸ್ ಗೂಂಡಾಗಿರಿ

ಮಸೂದೆಯ ವಿರುದ್ಧ ಇಡೀ ಪಶ್ಚಿಮ ಬಂಗಾಳ ಏಕವ್ಯಕ್ತಿಯಂತೆ ಎದ್ದುನಿಂತಿತು. ಮೆರವಣಿಗೆಗಳು, ರಾಬರಿಗಳು ದಿನನಿತ್ಯದ ನೋಟಗಳಾಗಿದ್ದವು. ಮಸೂದೆ ಚರ್ಚೆಗೆ ಬಂದ ದಿನ ಒಟ್ಟು ಸುಮಾರು 92 ಸಾವಿರ ಕಾರ್ಮಿಕರು ತಮ್ಮ ತಮ್ಮ ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆಯನ್ನು ದಾಖಲಿಸಿದರು. ಬರ್ಧಮಾನ್‌ನಲ್ಲಿ ಮುಷ್ಕರ ಪೂರ್ಣವಾಗಿತ್ತು. ಕಾಂಗ್ರೆಸ್‌ನ ಅನೇಕ ಸದಸ್ಯರೂ ಅದರಲ್ಲಿ ಸೇರಿದ್ದರು.

ಮುಷ್ಕರವನ್ನು ವಿಫಲಗೊಳಿಸಬೇಕೆಂಬುದು ಕಾಂಗ್ರೆಸ್ ನಾಯಕರ ಹವಣಿಕೆಯಾಗಿತ್ತು. ಅದಕ್ಕಾಗಿ ಯಾವುದಕ್ಕೂ ಹೇಸಲು ಸಿದ್ಧವಿದ್ದ ಅವರು ಮುಷ್ಕರ ಮುರಿಯಲೆಂದು ಗೂಂಡಾಗಳನ್ನು ಛೂ ಬಿಟ್ಟಿದ್ದರು. ಶಾಂತಿಯುತ ಮೆರವಣಿಗೆಗಾರರ ವಿರುದ್ಧ ರಿವಾಲ್ವರ್‌ಗಳು ಮತ್ತು ಲಾಠಿಗಳನ್ನು ಬೇಕಾಬಿಟ್ಟಿ ಪ್ರಯೋಗಿಸಲಾಯಿತು. ಎಲ್ಲ ಕಡೆಗಳಲ್ಲಿ ಪೋಲೀಸರೇ ಕಾಂಗ್ರೆಸಿಗರಿಗೆ ನೆರವು ನೀಡಿದರು. ಅನೇಕ ಕಡೆಗಳಲ್ಲಿ ನಮ್ಮ ಯೂನಿಯನ್ ಕಚೇರಿಗಳನ್ನು ಸುಟ್ಟು ಹಾಕಲಾಯಿತು.

(ಮುಂದುವರಿಯುವುದು)



ಇ.ಎಂ.ಎಸ್. ಭವನ ನಿಧಿ

ಇ.ಎಂ.ಎಸ್.ಭವನ ನಿಧಿ-80 ಜಿ.ಪ್ರಕಾರ ಆದಾಯ ತೆರಿಗೆ ವಿನಾಯಿತಿ

ಪಿ.ಕೆ.ಗೋಪಾಲನ್ ಸೋಷಿಯಲ್ ಎಜುಕೇಶನ್ ಟ್ರಸ್ಟ್‌ನ ವತಿಯಿಂದ ನಿರ್ಮಾಣವಾಗಲಿರುವ ಇ.ಎಂ.ಎಸ್. ಭವನಕ್ಕೆ ನೀಡಲಿರುವ ನಿಧಿಗೆ ಇನ್ನು ಮುಂದೆ (22.9.990ರಿಂದ) ಆದಾಯ ತೆರಿಗೆ ವಿನಾಯಿತಿ ದೊರಕಲಿದೆ. (ಸೆಕ್ಷನ್ 80 ಜಿ. ಪ್ರಕಾರ) ಆದಾಯ ತೆರಿಗೆ ನೀಡಲಿರುವ ವ್ಯಕ್ತಿ, ಸಂಸ್ಥೆಗಳಿಗೆ ಇದು ಅನುಕೂಲವಾಗಲಿದೆ.

ಆದಾಯ ತೆರಿಗೆ ಇಲಾಖೆ, ಕರ್ನಾಟಕ -2 ತನ್ನ ಆರ್ಡರ್ ನಂ. ಟ್ರಸ್ಟ್/718/10ಜಿ/772 99-2000/CIT-II ಮೂಲಕ ಈ ವಿನಾಯಿತಿಯನ್ನು ಘೋಷಿಸಿದೆ. ಇದನ್ನು ಸದುಪಯೋಗ ಪಡಿಸಿಕೊಂಡು ಆದಷ್ಟು ಹೆಚ್ಚಿಗೆ ನಿಧಿ ಸಂಗ್ರಹಿಸಬೇಕಾಗಿ ಕೋರುತ್ತೇವೆ.

ಎಸ್. ಸೂರ್ಯನಾರಾಯಣರಾವ್
ಮ್ಯಾನೇಜಿಂಗ್ ಟ್ರಸ್ಟಿ

ಹಿಂದಿನ ಮೊತ್ತ	ರೂ. 14,44,684.50
ಎನ್.ಕೆ. ಉಪಾಧ್ಯಾಯರ ಮೂಲಕ	5000
ಎನ್.ಮಾರಪ್ಪಮೆಟಾಲಿಕ್ ಪ್ರಿಂಟಿಂಗ್ಸ್-ಬೆಂಗಳೂರು	51
ಕೆ.ವಿ. ಶ್ರೀನಿವಾಸನ್- ಎಲ್.ಐ.ಸಿ. ಮೂಲಕ ಸಂಗ್ರಹ	
ಎಂ. ಚನ್ನಬಸಯ್ಯ-L.I.C ರಾಯಚೂರು	250
ಪಿ.ಆರ್. ವಾಲ್ಮಿ L.I.C ರಾಯಚೂರು	100
ಎಂ. ರವಿ L.I.C ರಾಯಚೂರು	100
ಆರ್. ಅಶೋಕ L.I.C ರಾಯಚೂರು	100
ಕೆ. ಸೋಮಶೇಖರ್ L.I.C ರಾಯಚೂರು	100
ಡಿ. ನರಸಿಂಗ್ ರಾವ್ L.I.C ರಾಯಚೂರು	100
ಡಿ.ಮಧುಶ್ರೀ L.I.C ರಾಯಚೂರು	100
ಜಿ. ಶ್ಯಾಂಸುಂದರ್ L.I.C ರಾಯಚೂರು	100
ಸತ್ಯನಾರಾಯಣ L.I.C ರಾಯಚೂರು	100
ಸನ್ ಫ್ಲೋಲ್ L.I.C ರಾಯಚೂರು	100
ಶೈಲಜಾ ಕುಲಕರ್ಣಿ L.I.C ರಾಯಚೂರು	100
ಪಿ. ಶೇಷಗಿರಿ L.I.C ರಾಯಚೂರು	50
L.I.C ರಾಯಚೂರು ಸಂಗಾತಿಗಳು	450
ಡಿ.ಎನ್. ನಾಗಪ್ಪ L.I.C ಬೆಂಗಳೂರು	201
ವಿಕ್ರಾಂತ್ ಟೈರ್ ಎಂಪ್ಲಾಯೀಸ್ ಯೂನಿಯನ್ ಮೈಸೂರು	1,00,000
ಹಿತೈಷಿವಿರಾಜಪೇಟೆ 2500+2500	5,000
ಜಮೀರ್ 600+600	1,200
ಸೀತಾಲಕ್ಷ್ಮಿ, ದುಡಿಯುವ ಮಹಿಳೆಯರ ಮುಖಂಡರು ಸಂಗ್ರಹ	750
ಚಂದ್ರು, ಅಕ್ಷರ ವಿನ್ಯಾಸ ಮೂಲಕ ಸಂಗ್ರಹ ಇಸ್ಮಾಯಿಲ್,	250
ಗಂಗಾಧರ್	500
ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಸಿ.ಐ.ಟಿ.ಯು ಉತ್ತರ ಕನ್ನಡ	250
ದೇವದುರ್ಗ	100
ಸುಬ್ರಮಣ್ಯಂ, ಬಿ.ಇ.ಎಲ್. ಬೆಂಗಳೂರು	500
ಸಿ.ಆರ್. ಭಟ್ ಸಿಪಿಐ(ಎಂ) ರಾಜ್ಯಸಮಿತಿ ಸದಸ್ಯರ ಮೂಲಕ ಸಂಗ್ರಹ	550
ಸಿ.ಪಿ.ಐ(ಎಂ),ಇಟಿಸಿ ಶಾಖೆ- ಬೆಂಗಳೂರು	1,400
ಡಿ.ವೈ.ಎಫ್.ಐ ಉ.ಕ.ಜಿಲ್ಲಾ ಸಮಿತಿ ಮೂಲಕ ಆರ್.ವಿ.ಭಂಡಾರಿ, ಹೊನ್ನಾವರ	200
ಶ್ರೀಪಾದ ಜಿ. ಭಟ್ಟ, ತಿಳುವಳ್ಳಿ	250
ನಾಗರಾಜ ಧಾರೇಶ್ವರ, ತಿಳುವಳ್ಳಿ	250
ಕಮಲಾಕರ ಭಂಡಾರಿ, ಸಿದ್ದಾಪುರ	50
ವಿಠ್ಠಲ ಭಂಡಾರಿ	50
ಒಟ್ಟು ಮೊತ್ತ	ರೂ.15,62,986.50


ಜನಮನ ಗೆದ್ದ ಸಿಪಿಐ(ಎಂ)

ಈ ತಲೆಬರಹ ನೋಡಿ ಆಶ್ಚರ್ಯ ಆಗಿರಬಹುದು. ನಿನ್ನೆಯಷ್ಟೇ ಚುನಾವಣೆ ಆಗಿದೆ. ಇನ್ನೂ ಎಣಿಕೆ ಆಗಿಲ್ಲ; ಫಲಿತಾಂಶ ಬಂದಿಲ್ಲ. ಇಷ್ಟಿದ್ದೂ ಈ ತಲೆ ಬರಹಕ್ಕೆ ಏನರ್ಥ! ಬಿಜೆಪಿಯವರು ದೂರದರ್ಶನದ ಫಲಿತಾಂಶಪೂರ್ವ ಸಮೀಕ್ಷೆಯ ಮೂಲಕ ಮಾಡಿಸಿಕೊಂಡ ವರದಿಯಂತೆಯೇ ಇದು ಇರಬಹುದೊ? ಮತ ಪೆಟ್ಟಿಗೆಯ ಒಳಗಿರುವ ಚೀಟಿಗಳನ್ನು ಲೆಕ್ಕಹಾಕುವ ಮೂರನೇ ಕಣ್ಣೇನಾದರೂ ಇವರಿಗೆ ಇದೆಯೇ? ಹೀಗೆ ಅನೇಕ ಪ್ರಶ್ನೆ ನಿಮ್ಮಲ್ಲಿ ಎದ್ದಿರಬಹುದು. ಅಥವಾ ಇದು ಅರ್ಥವಿಲ್ಲದ ಬರಹ ಎಂದು ಓದುವ ಮೊದಲೇ ಮೂಗು ಮುರಿದು ಮುಂದಿನ ಪುಟ ತಿರುವಬಹುದು. ಬಾಗೇಪಲ್ಲಿ ಕ್ಷೇತ್ರವನ್ನು ಒಂದೆರಡುದಿನ ಅಡ್ಡಾಡಿದರೆ ನೀವೂ ಇದೇ ಮಾತನ್ನು ಹೇಳುತ್ತಿದ್ದಿರಿ. ನಿಜವಾಗಿಯೂ ಸಿಪಿಐ(ಎಂ) ಗೆದ್ದಿದೆ. ಹೇಗೆ?

ಗೆಲುವು1- ಮೂರುಪಕ್ಷಗಳ ಪ್ರತಿನಿಧಿಗಳು, ಮತ್ತು ಒಬ್ಬ ಬಂಡಾಯ ಅಭ್ಯರ್ಥಿ ಈ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿದ ಪ್ರಮುಖರಾಗಿದ್ದಾರೆ. ಕಾಂಗ್ರೆಸ್ಸಿನಿಂದ ನಾಗರಾಜ ರೆಡ್ಡಿ, ಎನ್.ಡಿ.ಎ.ದಿಂದ ಜೆ.ಕೆ. ರೆಡ್ಡಿ, ಬಂಡಾಯ ಕಾಂಗ್ರೆಸ್ಸಿನಿಂದ ಸಂಪಂಗಿ, ಸಿ.ಪಿ.ಐ(ಎಂ)ನಿಂದ ಕಾಂ.ಜಿ.ವಿ. ಶ್ರೀರಾಮರೆಡ್ಡಿ. ಈ ಎಲ್ಲ ಅಭ್ಯರ್ಥಿಗಳನ್ನು ಆಯಾ ಪಕ್ಷಗಳು ಪ್ರಕಟಿಸಿದಾಗಲೇ ಶ್ರೀರಾಮರೆಡ್ಡಿ ಗೆದ್ದಿದ್ದಾರೆ. ನಾಮಪತ್ರ ಕೊಡುವಾಗಲೇ ಕಾಂಗ್ರೆಸ್ ಪಕ್ಷ ಮಾಮೂಲು ಗುಂಡಾಗಿರಿಯನ್ನು ಪ್ರದರ್ಶನ ಮಾಡಿ ಅಮಾಯಕ ವ್ಯಕ್ತಿಗಳ (ಗೋಳಿಬಾರಿನಿಂದ) ಸಾವಿಗೆ ಕಾರಣವಾಯಿತು. ಚುನಾವಣೆ ಮುಂದೂಡಲ್ಪಟ್ಟಿತು. ಕೊನೆಗೂ ಕಾಂಗ್ರೆಸ್ ನಾಗರಾಜರೆಡ್ಡಿ ಎನ್ನುವ ಅಭ್ಯರ್ಥಿಯನ್ನು ಕಣಕ್ಕಿಳಿಸಿತು. ಇವರು ಕ್ರಿಮಿನಲ್ ಹಿನ್ನೆಲೆ ಇರುವ ಮನುಷ್ಯ. ಹತ್ತಾರು ಕೇಸುಗಳಿವೆ. ಬಂಡಾಯ ಕಾಂಗ್ರೆಸ್ ಅಭ್ಯರ್ಥಿ ಸಂಪಂಗಿ 15 ದಿನದ ಹಿಂದೆ 'ಹಸ್ತ' ಎನ್ನುತ್ತಿದ್ದವನು ಈಗ ಬಸ್ಸು ಎನ್ನುತ್ತಿದ್ದಾನೆ. ಕಳ್ಳ ವ್ಯಾಪಾರಗಳ ಮೂಲಕ ಹಣಗಳಿಸಿ, ಇದಕ್ಕಿಂತ ಒಳ್ಳೆಯದು 'ರಾಜಕೀಯ' ಎಂದು (ಕಾಂಗ್ರೆಸ್ ಕಲಿಸಿದ ಪಾಠ) ಚುನಾವಣಾ ಕಣಕ್ಕೆ ಇಳಿದಿದ್ದಾನೆ. ನನ್ನ ಜೀವ ಇರುವವರೆಗೆ ನಾನು ಕಾಂಗ್ರೆಸ್ಸಿಗ ಎಂದು ಹೇಳುತ್ತಿದ್ದ ಸಂಪಂಗಿ ಈಗ ಅಲ್ಲಿಲ್ಲ.

ಇನ್ನು ಜೆ.ಕೆ. ರೆಡ್ಡಿ ಬಾಣದ ಗುರುತಿನ ಅಭ್ಯರ್ಥಿ. ಆತನ ಊರಿನಲ್ಲಿಯೇ ಆತನಿಗೆ ಪ್ರಚಾರಕ್ಕೆ ಬಿಟ್ಟಿಲ್ಲ. ಎಂದ ಮೇಲೆ ನೀವೇ ಲೆಕ್ಕ ಹಾಕಿ. ಹೀಗೆ ನೈತಿಕವಾಗಿ ಸಂಪೂರ್ಣವಾಗಿ ಅಧಃಪತನದ ಸ್ಥಿತಿಯಲ್ಲಿರುವ ಇವರು ಚುನಾವಣೆಯ ಕಣಕ್ಕೆ ಇಳಿದಾಗಲೇ ರೈತ ಮುಖಂಡ ಶ್ರೀರಾಮರೆಡ್ಡಿ ಗೆದ್ದಿದ್ದಾರೆ.

ಗೆಲುವು 2 : ಶ್ರೀರಾಮರೆಡ್ಡಿಯವರು ಮೊದಲಬಾರಿ ನಾಮಪತ್ರ ಸಲ್ಲಿಸುವಾಗ ಇದ್ದ ಜನರು ಸುಮಾರು 14-15 ಸಾವಿರ. 30 ರಂದು ನಡೆದ ಸಿಪಿಐ(ಎಂ) ಸಾರ್ವಜನಿಕ ಸಭೆಯಲ್ಲಿ ಹಾಜರಿದ್ದವರೂ ಸರಿಸುಮಾರು ಇಷ್ಟೆ. ಬಹುತೇಕರು ಬಾಗೇಪಲ್ಲಿ ತಾಲೂಕಿನವರು. ದೇವೇಗೌಡ, ಸಿದ್ದಾರಾಮಯ್ಯ, ಕಾಂ.ಸೂರಿ, . ರಮೇಶ್ ಕುಮಾರ್, ಸಿ.ಎಂ. ಇಬ್ರಾಹಿಂ, ಪುಟ್ಟಣ್ಣಯ್ಯ- ಹೀಗೆ ರಾಷ್ಟ್ರ, ರಾಜ್ಯದ ಮುಖಂಡರು ಬಂದು ಸಭೆಯಲ್ಲಿ ಭಾಗವಹಿಸಿ ಪಕ್ಷಬೇಧ ಮರೆತು ಶ್ರೀರಾಮರೆಡ್ಡಿಯ ಪರವಾಗಿ ಮತಯಾಚಿಸಿದರು.



ಅಂದೇ ಅಲ್ಲೆ ಪಕ್ಕದಲ್ಲಿ ಬಾಣದ ಗುರುತಿನ ಸಾರ್ವಜನಿಕ ಸಭೆಇತ್ತು. ರಾಷ್ಟ್ರನಾಯಕರಿಂದ ವಂದಿಮಾಗಧರಿಂದ ಪರಾಕು ಹಾಕಿಸಿಕೊಳ್ಳುವ ರಾಮಕೃಷ್ಣ ಹೆಗಡೆ, ಜೀವರಾಜ್ ಆಳ್ವ, ಜಯಂತಿ ಭಾಗವಹಿಸುವವರಿದ್ದರು. ಪಾಪ! ಜನರನ್ನು ಸೇರಿಸಲು ಆರ್ಕೆಸ್ಟ್ರಾವನ್ನು ಪ್ರಾರಂಭಿಸಿದ್ದರು. ಇದರ ಮೂಲಕ ಜನರನ್ನು ಆಕರ್ಷಿಸಬೇಕಾದ ಹೀನ ಸ್ಥಿತಿಇವರದು. ಶ್ರೀರಾಮರೆಡ್ಡಿ ದೇವೇಗೌಡ ಭಾಗವಹಿಸಿದ ಸಭೆಗೆ 10-15 ಸಾವಿರ ಜನ. ಹೆಗಡೆಯವರು ಭಾಗವಹಿಸಿದ ಸಬೆಗೆ 300 ಜನ ಅದೂ ರಸಮಂಜರಿಯ ಹೆಸರಿನಲ್ಲಿ.

ಕಾಂಗ್ರೆಸ್ಸಿನ ನಾಗರಾಜ ರೆಡ್ಡಿಗೆ ಕರ್ನಾಟಕದಲ್ಲಿ ಯಾರೂಸಿಕ್ಕದೆ ಆಂಧ್ರದಿಂದ ಎಂ.ಎಲ್.ಎಯನ್ನು ಸಾರ್ವಜನಿಕ ಸಭೆಗೆ ಕರೆತಂದರೆ ಅವರು ಬರುವಾಗಲೇ ಆಂಧ್ರದಿಂದ 2 ಸಾವಿರ ಜನರನ್ನು ತಂದು ಹಾಗೂ ಹೀಗೂ ಹೀಗೂ ಇವರು ಸೇರಿಸಿದ 2 ಸಾವಿರ ಜನರು ಸೇರಿ ಸುಮಾರು 4000 ಜನಕ್ಕೆ ಭಾಷಣ ಮಾಡಿ ಸ್ಥಳಬಿಟ್ಟರು. ಓಟಿಗಾಗಿ ಜಾತಿ ರಾಜಕಾರಣ, ಪ್ರಾರಂಭಿಸಿದರು.

ಭಾಷಣಕ್ಕಾಗಿಯೂ ಹೊರ ರಾಜ್ಯದಿಂದ ಜನರನ್ನು ತರಿಸುವ, ಜನರನ್ನು ಸೇರಿಸಲು ಆರ್ಕೆಸ್ಟ್ರಾ ಮಾಡುವ ಹೀನ ಸ್ಥಿತಿ ತಲುಪಿದೆ.

ಗೆಲುವು -3 : 45 ವರ್ಷ ಈ ಕ್ಷೇತ್ರವನ್ನು ಆಳಿದವರು ಕಾಂಗ್ರೆಸ್ಸಿಗರು ರಾಜ್ಯದಲ್ಲಿಯೇ ಹೆಚ್ಚು ಹಿಂದುಳಿದ ಪ್ರದೇಶವಾಗಿ ದಿನದಿಂದ ದಿನಕ್ಕೆ ಅಗ್ರ ಪಂಕ್ತಿಗೆ ಹೋಗುತ್ತಿತ್ತು. ಆದರೆ ಸಿಪಿಐ(ಎಂ) 4 1/2 ವರ್ಷದಲ್ಲಿ ಬಾಗೇಪಲ್ಲಿ ಕ್ಷೇತ್ರದ ಸ್ವರೂಪವನ್ನೇ ಬದಲಿಸಿದೆ. ಬಹುತೇಕ ಪ್ರತಿ ಹಳ್ಳಿಗೆ ಕುಡಿಯುವ ನೀರು ಪೂರೈಕೆ, ಪ್ರತಿಹಳ್ಳಿಗೆ ಶಾಲೆ, ಎರಡು ಡ್ಯಾಮ್, ಪಾಲಿಟೆಕ್ನಿಕ್ ಮಹಾವಿದ್ಯಾಲಯ, ಕೋರ್ಟ್ ಸಂಕೀರ್ಣ, ಮಿನಿವಿಧಾನಸೌಧ, ದೇವಕುಂಟೆ ರಸ್ತೆ, ರೈತರಿಗೆ ಪಟ್ಟ - ಹಿಗೆ ಹತ್ತು ಹಲವು ಜನಪರ ಕಾರ್ಯಕ್ರಮಗಳ ಮೂಲಕ ಸಿಪಿಐ(ಎಂ) ಜನ ಪ್ರೀತಿಗಳಿಸಿದೆ.

ಕ್ಷೇತ್ರದ ಯಾವನೇ ಒಬ್ಬ ವ್ಯಕ್ತಿ ಕೂಡ ಸಿಪಿಐ(ಎಂ)ನ ದಣಿವರಿಯದ ಜನಹಿತ ಕಾರ್ಯಕ್ರಮವನ್ನು ಮೆಚ್ಚಿಕೊಳ್ಳುತ್ತಾನೆ. ಇಂಥ ಸಿಪಿಐ(ಎಂ) ಅಭ್ಯರ್ಥಿ ವಿರುದ್ಧ ಕ್ಯಾಂಪೇನ್ ಮಾಡುವುದು ಹೇಗೆ ಎಂಬುದೇ ಉಳಿದ ಅಭ್ಯರ್ಥಿಗಳ ಸಮಸ್ಯೆ. "ಶ್ರೀರಾಮರೆಡ್ಡಿಯವರಿಗೆ ಯಾಕೆ ಮತಕೊಡಬಾರದು ಮತ್ತು ನಮಗೆ ಯಾಕೆ ಮತಕೊಡಬೇಕು" ಎನ್ನುವುದಕ್ಕೆ ಬಾಗೇಪಲ್ಲಿಯಲ್ಲಿ ಸರಿಯಾದ ಕಾರಣವೇ ಸಿಗದಿರುವಾಗಲೇ ವಿದ್ಯಾರ್ಥಿಯುವ ಜನ ಸಂಘಟನೆಯನ್ನು ಕರ್ನಾಟಕದಲ್ಲಿ ಪ್ರಾರಂಭಿಸಿದ ಶ್ರೀರಾಮರೆಡ್ಡಿ ಗೆದ್ದಿದ್ದಾರೆ.

ಗೆಲುವು 4: ಈ ಸಿಪಿಐ(ಎಂ) ಪಕ್ಷವನ್ನು ಇಡೀ ಕ್ಷೇತ್ರದ ಕೃಷಿಕಾರ್ಮಿಕರು, ದುಡಿದು ತಿನ್ನುವ ಜನ, ವಿದ್ಯಾರ್ಥಿಯುವಜನರು ಮಹಿಳೆಯರು, ರೈತರು ನೌಕರರು ಅದೆಷ್ಟು ಪ್ರಿತಿಸುತ್ತಿದ್ದಾರೆಂದರೆ ಸಿಪಿಐ(ಎಂ) ಅಭ್ಯರ್ಥಿ ಹಳ್ಳಿಗಳಿಗೆ ಪ್ರಚಾರಕ್ಕೆ ಹೋದಾಗಲೇ ಇದನ್ನು ನೋಡಬೇಕು. ಪ್ರತಿಸಭೆಯಲ್ಲಿ ಹಳ್ಳಿಯ ಅರ್ಧಕ್ಕರ್ಧ ಜನ, ಕೆಲವು ಹಳ್ಳಿಗಳಲ್ಲಿ ಹಳ್ಳಿಯ ಬಹುತೇಕರು ಸೇರುತ್ತಿದ್ದರು. ಓಣಿಓಣಿಯಲ್ಲಿ ಮೆರವಣಿಗೆ. ರೆಡ್ಡಿಯವರಿಗೆ ಹಾರಹಾಕುವ ಮೂಲಕ, ಹೆಂಗಸರು ಆರತಿ ಎತ್ತುವ ಮೂಲಕ, ತೆಂಗಿನಕಾಯಿ ಒಡೆಯುವ ಮೂಲಕ, ಚೆಂಡುಹೂಗಳನ್ನು ಸುರಿಯುವ ಮೂಲಕ, ಅವರ ಕೈಮುಟ್ಟಿ ನಮಸ್ಕರಿಸುವ ಮೂಲಕ ಕೃತಜ್ಞತೆ ಸಲ್ಲಿಸುತ್ತಿದ್ದರು. ನಿವೊಮ್ಂದಿಗೆ ನಾವಿದ್ದೇವೆ ಎನ್ನುತ್ತಿದ್ದರು; ಸಂತೋಷಪಡುತ್ತಿದ್ದರು. ಯಾವ ಹಳ್ಳಿಗೆ ಹೋದರೂ ಹಬ್ಬದ ವಾತಾವರಣ. ಮನೆಮನೆಯ ಮೇಲೆ ಹಾರುವ ಕೆಂಬಾವುಟ.

ಹಾಡುಗಳನ್ನು ಹೇಳುವ ಕಲಾತಂಡ, ಪ್ರಚಾರ… ಇಳಿದ ಕಾರ್ಯಕರ್ತರು, ವಿದ್ಯಾರ್ಥಿ ಯುವಜನರನ್ನು ಕೇಳಿ… ಹೇಳುತ್ತಾರೆ. ಹಳ್ಳಿಗಳಲ್ಲಿ ಸಿಗುವ ಆತ್ಮೀಯ ಸ್ವಾಗತ, ಬೆಂಬ… ನೋಡಿ ದಿನದಿಂದ ದಿನಕ್ಕೆ ನಮಗೆ ಆಯಾಸ ಆಗುವ… ಬದಲು ಉತ್ಸಾಹ ಉಕ್ಕುತ್ತಿದೆ." ಎನ್ನುತ್ತಾರೆ.

ಯಾಕೆ ಕುಡುಗೋಲು ಸುತ್ತಿಗೆಗೆ ನಿಮ್ಮ ಮತ ಎಂದ… ಮಹಿಳೆಯರನ್ನು ಕೇಳಿದರೆ "ನಮಗೆ ನೀರು ಕೊಟ್ಟಿದ್ದಾರೆ… ನಮ್ಮ ಮಕ್ಕಳಿಗೆ ಹತ್ತಿರದಲ್ಲಿ ಶಾಲೆ ಕಟ್ಟಿಸಿದ್ದಾರೆ" ಎನ್ನುತ್ತಾರೆ… ರೈತರನ್ನು ಕೇಳಿದರೆ "ಭೂಮಿಕೊಡಿಸಿದ್ದಾರೆ, ಪ… ಕೊಡಿಸಿದ್ದಾರೆ" ಎನ್ನುತ್ತಾರೆ. "ಊರಿಗೆ ಈವರೆಗೆ ರಸ್ತೆಯೇ… ಇರಲಿಲ್ಲ, ರಸ್ತೆ ಕೊಟ್ಟಿದ್ದಾರೆ" ಎನ್ನುತ್ತಾರೆ. "ನಮ್ಮ ಮಕ್ಕಳ… ಇವರು ಕಟ್ಟಿಸಿದ ಪಾಲಿಟೆಕ್ನಿಕ್ ನಲ್ಲಿ ಓದುತ್ತಿದ್ದಾರೆ… ಹಾಗಿದ್ದಮೇಲೆ ನಾನು ಇನ್ಯಾರಿಗೆ ಕೊಡಲಿ ಎಂದು ಬಸ… ಗುರುತಿನ ಬಗ್ಗೆ ಪ್ರಚಾರಕ್ಕೆ ಹೋಗುವ ವ್ಯಕ್ತಿಗುಟ್ಟಾ… ಹೇಳುತ್ತಾನೆ. ಇಡೀ ಕ್ಷೇತ್ರದಲ್ಲಿ ಹೋರಾಟದ ಮಾಗ… ಹೇಳಿಕೊಟ್ಟ ಕುಡುಗೋಲು ಸುತ್ತಿಗೆ ನಕ್ಷತ್ರ ಬಿಟ್ಟು ಬೇ… ಪಕ್ಷವನ್ನು ಬೆಂಬಲಿಸಿದರೆ ನಮ್ಮನ್ನೇ ನಾವು ಮೋ… ಮಾಡಿಕೊಂಡಂತಲ್ಲವೆ? ಎಂದು ಕೇಳುತ್ತಾರೆ.

ದೇವ ಕುಂಟೆಯಂತಹ ಹಳ್ಳಿಯಲ್ಲಿ ಕುಡುಗೋಲು… ಸುತ್ತಿಗೆ ಬಿಟ್ಟು ಬೇರೆ ಪಕ್ಷಗಳ ಒಂದೇ ಒಂದು ಬ್ಯಾನರ್… ಪೋಸ್ಟರ್, ಕರಪತ್ರ ನೋಡಲುಸಾಧ್ಯ ಇಲ್ಲ. ಇಂಥ… ಅನೇಕ ಹಳ್ಳಿಗಳಿವೆ. ಊರಿಗೆ ಬಂದ ಬೇರೆ ಪಕ್ಷದ… ಹಳ್ಳಿಯ ಹೆಂಗಸರೇ ಬುದ್ಧಿಹೇಳಿ ವಾಪಾಸು ಕಳಿಸಿದ್ದಾರೆ… ಪ್ರತಿ ಸಭೆಯಲ್ಲಿ ಅರ್ಧಕ್ಕರ್ಧ ಮಹಿಳೆಯರು ಸ್ವ… ನೂರಾರು ಹೆಂಗಸರು ಬಾಗೇಪಲ್ಲಿಗೆ ಬಂದು ಇಡೀದಿ… ಪಾದಯಾತ್ರೆ ಮಾಡಿ ಸಿಪಿಐ(ಎಂ) ಅಭ್ಯರ್ಥಿ… ಮತಕೇಳಿದ್ದಾರೆ. ದಿನನಿತ್ಯ ಎದುರಿಸುವ ಹತ್ತಾರು… ಸಮಸ್ಯೆಗಳನ್ನು ಇಲ್ಲದಂತೆ ಮಾಡಿ… ಶ್ರೀರಾಮರೆಡ್ಡಿಯವರಿಗೆ ಬೆಂಬಲವಾಗಿ ಇಷ್ಟೊಂದು ದೊ… ಸಂಖ್ಯೆಯಲ್ಲಿ ಮಹಿಳೆಯರು ನಿಂತಿರುವಾಗ ಶ್ರೀರಾಮರೆ… ಗೆದ್ದಿದ್ದಾರೆ ಎನ್ನದೆ ಬೇರೆ ಮಾರ್ಗಇಲ್ಲ.

ಹೀಗೆ ಈ ಕ್ಷೇತ್ರದಲ್ಲಿ ಅಪಾರ ಜನ ಬೆಂಬಲ, ಎಲ… ವರ್ಗಗಳ, ಸಮುದಾಯದ ಪ್ರೀತಿಗಳಿಸಿರುವ ಶ್ರೀರಾಮರೆ… ಯವರ ಗೆಲುವನ್ನು ವಿರೋಧಿಗಳಿಗೆ ಸಂತೋ… ವಾಗುವುದಾದರೆ ಅವರ ಸೋಲನ್ನು ತಾಂತ್ರಿಕವಾ… ಅಕ್ಟೋಬರ್ 6 ಅಥವಾ 7 ರಂದು ಘೋಷಿಸ ಬಹುದ… ದರೂ ನಿಜವಾಗಿ ಮೊದಲೇ ಜನಮನಗೆದ್ದವರು ಇವರು… ಜನರ ಆತ್ಮೀಯ ಪ್ರೀತಿ, ವಿಶ್ವಾಸ ಗೌರವ ಗಳಿಸಿ ಕೊಳ್ಳು… ದಕ್ಕಿಂತ ದೊಡ್ಡಗೆಲುವು ಒಬ್ಬ ಕಮ್ಯುನಿಸ್ಟನಿಗೆ ಇನ್ನೇನಿ… ಹೇಳಿ. ಉಳಿದ ಪಕ್ಷಗಳು ಗೆದ್ದಲ್ಲಿ ಸಿಪಿಐ(ಎಂ) ಸೋತಿದ… ಪತ್ರಿಕೆಗಳ ಮೂಲಕ ಸಾಕಷ್ಟು ಪ್ರಚಾರ ಗಿಟ್ಟಿಸಿ ಕೊಳ್ಳುವ… ಇವರು ಸೋತಿದ್ದಾರೆ. ಹಣ, ಹೆಂಡ, ಸೀರೆ, ಮೂಗ… ಬೊಟ್ಟುಗಳನ್ನು ಹಂಚುವಲ್ಲಿ ಸಿಪಿಐ(ಎಂ) ಸೋತಿದೆ.

- ವಿಠ್ಠಲಭಂಡಾ…

ಲಂಕೇಶ್ ವರದಿಗಾರನ ಜಾತಿ ರಾಜಕಾರಣ

ಅಕ್ಟೋಬರ್ 6, 1999 ರ ಸಂಚಿಕೆಯಲ್ಲಿ ಲಂಕೇಶ್ ಪತ್ರಿಕೆಯ ಸಿ.ಎಸ್. ದ್ವಾರಕಾನಾಥ್ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಚುನಾವಣೆಯ ವಿಶ್ಲೇಷಣೆ ಮಾಡಿದ್ದಾರೆ. ಇದನ್ನು ವಿಶ್ಲೇಷಣೆ ಅನ್ನುವುದಕ್ಕಿಂತ ತನ್ನ ನೆಂಟನಿಗೆ ನಾಲ್ಕಾರು ಓಟು ಹಾಕಿಸಲು ಬೆಂಗಳೂರಿನಲ್ಲಿ ಕುಳಿತು ಮಾಡಿದ ಜಾತಿ ರಾಜಕಾರದ ಜಾಣ ಪ್ರಯತ್ನ ಎನ್ನಬಹುದು.

ಮತ್ತೊಮ್ಮೆ ಕಚ್ಚಿದೆ ಫ್ಯಾಸಿಸ್ಟ್ ವಿಷಸರ್ಪ

ಶಾಂತಿ ಸೌಹಾರ್ದದ ಮೈಸೂರಿನಲ್ಲಿ 'ಸಹಮತ್'ನ ಪೋಸ್ಟರ್‌ಗಳನ್ನು ಪ್ರದರ್ಶಿಸುತ್ತಿದ್ದ ಪ್ರಗತಿಪರ ಚಿಂತಕರು, ಕಲಾವಿದರ ಮೇಲೆ ಕೆಲವೇ ದಿನಗಳ ಹಿಂದೆ ಬಿಜೆಪಿ, ಆರ್.ಎಸ್.ಎಸ್. ಗೂಂಡಾಗಳು ನಡೆಸಿದ ಹಲ್ಲೆಯ ಕುರಿತು ಗಮನಿಸಿರುವಿರಿ. ಈ ಘಟನೆ ಮಾಸುವ ಮುನ್ನವೇ ಅದೇ ಫ್ಯಾಸಿಸ್ಟ್ ವಿಷಸರ್ಪ ಲಕ್ನೋದಲ್ಲಿ ಎಡೆ ಎತ್ತಿದೆ. ಮಾತ್ರವಲ್ಲ ನಾಟಕ ಹಾಗೂ ಪೋಸ್ಟರ್‌ಗಳನ್ನು ಪ್ರದರ್ಶಿಸುತ್ತಿದ್ದ 'ಸಹಮತ್' ಕಲಾವಿದರ ತಂಡದ ಮೇಲೆ ಹಲ್ಲೆ ನಡೆಸಿ ವಿಷಕಾರಿದೆ.

ಇದು ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ನಡೆದ ಘಟನೆ . ಸೋಲ್ಲೆತ್ತದೆ ಬಿಜೆಪಿ ಅಭ್ಯರ್ಥಿಗಳನ್ನೇ ಗೆಲ್ಲಿಸಲು ಹೂಡಿರುವ ಭಯೋತ್ಪಾದಕ ತಂತ್ರದ ಒಂದು ತುಣುಕು ಈ ಘಟನೆ.

ಲಕ್ನೋ, ಉತ್ತರ ಪ್ರದೇಶ ಪ್ರತಿಷ್ಠಿತ ಲೋಕಸಭಾ ಕ್ಷೇತ್ರ. ಹೇಗೆಂದಿರಾ, ಈ ಕ್ಷೇತ್ರದಿಂದ ದಕ್ಷ? ಸಮರ್ಥ? ಪ್ರಾಮಾಣಿಕ? ಸಾಧು? ಉಸ್ತುವಾರಿ ಪ್ರಧಾನಿ ವಾಜಪೇಯಿ ಸ್ಪರ್ಧೆಗೆ ಇಳಿದಿರುವುದರಿಂದ. ವಾಜಪೇಯಿಯವರ ಮುಖಾರವಿಂದ ತೋರಿಸಿದರೆ ಸಾಕು ಜನ ಸಾಲುಗಟ್ಟಿ ಗೆಲ್ಲಿಸುತ್ತಾರಂತೆ. ಹೀಗಿರುವಾಗ ಕೊಲೆ, ಹಲ್ಲೆ, ಬೆದರಿಕೆಯ ಮಾರ್ಗ ಹಿಡಿಯುವ ಅಗತ್ಯವಾದರು ಅಲ್ಲೇಕೆ? ಎಂದು ಭಾವಿಸಿದಿರಾ--- ಅವರು ಅಧಿಕಾರ ಹಿಡಿದದ್ದೇ ಹಿಂಸಾಮಾರ್ಗದಿಂದ ಎಂಬುದನ್ನು ನೀವಾದರು ಇಷ್ಟು ಬೇಗ ಮರೆತಿರಲಿಕ್ಕಿಲ್ಲ.

ಸೆಪ್ಟೆಂಬರ್ 21 ರಂದು ಲಕ್ನೋ ಕ್ಷೇತ್ರದಿಂದ ಗಾಂಧಿನಗರದಲ್ಲಿ ಹಲ್ಲೆ ಗೊಳಗಾದ ಸಹಮತ್ ಕಲಾವಿದರು ಮಾಡಿದ ತಪ್ಪಾದರೂ ಏನು?

ಫ್ಯಾಸಿಸ್ಟ್ ಶಕ್ತಿಗಳ ನಿಜಸ್ವರೂಪವನ್ನು ತೋರಿದ್ದು. ಚಿತ್ರಗಳ ಮೂಲಕ ಜನತೆಗೆ ಸರಳವಾಗಿ ಅರ್ಥವಾಗುವಂತೆ ಪೋಸ್ಟರ್ ಪ್ರದರ್ಶನ ಮಾಡಿದ್ದು ತಪ್ಪೇ?.

ಸಾವು-ನೋವು, ಹಸಿವು-ಸಂಕಟ, ನರಳಾಟಗಳಿಗೆ ಯಾರು ಕಾರಣ?. ಹೇಗೆ ಕಾರಣ? ಎಂದು ಜನರಿಗೆ ಮನವರಿಕೆ ಮಾಡುವುದು ತಪ್ಪೇ?.

ಬಿಜೆಪಿಯ ಹದಿಮೂರು ತಿಂಗಳುಗಳ ಅವಮಾನಕಾರಿ ಆಡಳಿತವನ್ನು ಜನರ ಮುಂದಿಡುವ 'ತೀನ್ ತೇರ ಕಾಚಕ್ಕರ್' ಎಂಬ ಬೀದಿ ನಾಟಕವನ್ನು ಹಾಗೂ ಪೋಸ್ಟರುಗಳನ್ನು ಪ್ರದರ್ಶಿಸುತ್ತಿದ್ದ 'ಸಮಹತ್' ಕಲಾವಿದರ ಮೇಲೆ ಬಿಜೆಪಿಯ ಎಂ.ಎಲ್.ಸಿ. ಅಜಿತ್ ಸಿಂಗ್ ಹಾಗೂ ಅವನ ಗೂಂಡಾಸಹಚರರು ಕ್ರೂರವಾಗಿ ಹಲ್ಲೆ ಮಾಡಿ ಕಲಾವಿದರನ್ನು ತೀವ್ರವಾಗಿ ಗಾಯಗೊಳಿಸಿದ್ದಾರೆ. ಈ ಹಲ್ಲೆಯಲ್ಲಿ ಹಲ್ಲೆಕೋರರೊಂದಿಗೆ ಒಬ್ಬ ಸಮವಸ್ತ್ರಧಾರಿ ಪೋಲೀಸ್ ಅಧಿಕಾರಿಯು ಬಾಗಿಯಾಗಿದ್ದರು ಎನ್ನುವುದು ಉತ್ತರ ಪ್ರದೇಶದಲ್ಲಿ ಬಿಜೆಪಿ ಭ್ರಷ್ಟ ಆಡಳಿತದ ಸಂಕೇತ ಎಂದು 'ಸಹಮತ್' ನ ಸಂಚಾಲಕಿ ಶಬ್ನಂ ಹಷ್ಮಿ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಹಾಗೂ ಕಲಾವಿದರ ಮೇಲಿನ ಈ ಪೈಶಾಚಿಕ ಹಲ್ಲೆ ಪೂರ್ವಯೋಜಿತ ಕೃತ್ಯವೆಂಬುದು ಸ್ಪಷ್ಟವೆಂದಿದ್ದಾರೆ.

ಜನತೆಯ ಬದುಕು ಮತ್ತು ಭವಿಷ್ಯವನ್ನು ನಿರ್ಧಾರ ಮಾಡುವ ಚುನಾವಣೆಗಳು ಬಂದಾಗ ಸರ್ವಹಿತಕ್ಕೆ ಸಹಕಾರಿಯಾಗುವ ಜನ ಪ್ರತಿನಿಧಿಗಳನ್ನು ಆಯ್ಕೆಮಾಡಲು ಮತದಾರರಿಗೆ ತಿಳುವಳಿಕೆ ನೀಡುವುದು ಅಪರಾಧವೆ?.

'ಸಹಮತ್'ನ ಕಲಾವಿದರ ಬಗ್ಗೆ ದೇಶವೇ ಮೆಚ್ಚುಗೇ ವ್ಯಕ್ತ ಪಡಿಸುವಾಗ ಚಿಡ್ಡಿಗಳಿಗೇಕೆ ಎಲ್ಲಿಲ್ಲದ ತಾಪ?. ಹೂರಣ ಬಯಲಾಗುವ ಮುಂಚಿಯ ಭಯೋತ್ಪಾದನೆಯ ಮೂಲಕ ಜನಪರರನ್ನು ಹತ್ತಿಕ್ಕಿ, ಜನತೆಯನ್ನು ಸುಳ್ಳು, ಮೋಸ, ಕಪಟಗಳ ಮೂಲಕ ವಂಚಿಸಿ ಗಾದಿಗೇರುವ ಖಾವಿ ಪಡೆಯ ಹವಣಿಕೆಯನ್ನು ಜನತೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಧಿಕ್ಕರಿಸಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆಸುವ ಹಲ್ಲೆ ಖಾವಿಪಡೆಗಳಿಗೆ ಹೊಸದೇನೂ ಅಲ್ಲ. ಇದು ಮತ್ತೊಂದು ತುಣುಕಷ್ಟೆ. ಜನತೆಯ ಛೀಮಾರಿಯನ್ನು ಲೆಕ್ಕಿಸದೆ ಮತ್ತೆ ಮತ್ತೆ ಇದೇ ಫ್ಯಾಸಿಸ್ಟ್ ನೀತಿಯನ್ನು ಅನುಸರಿಸುವ ಗೋಮುಖ ವ್ಯಾಘ್ರಗಳು, ಪಾಠ ಕಲಿಯುವ ಕಾಲ ದೂರವೇನಿಲ್ಲ.

ಈ ಘಟನೆಯನ್ನು ಖಂಡಿಸಿ ಪುಂಡಾಟಿಕೆಗೆ ಪಾಠ ಕಲಿಸುವ ಕನಿಷ್ಟ ಸೌಜನ್ಯವನ್ನು ಸಮರ್ಥ ಪ್ರಧಾನಿಗಳು ತೋರಿಲ್ಲ. ಯಥಾಪ್ರಕಾರ ಮತ್ತದೇ ಮೌನವಹಿಸಿ "ಮುಖವಾಡ" ಪ್ರದರ್ಶಿಸಿದ್ದಾರೆ. ಸಮಸ್ತ ಜನತೆಗೆ ಇವರೊಬ್ಬ ಪ್ರಧಾನಿ ಎಂಥಾ ನಾಚಿಕೆಗೇಡಿನ ವಿಷಯ.

ವಾಜಪೇಯಿಯವರ "ಸಮ್ಮತಿ" ಹಾಗೂ ಕಲಾವಿದರ ಮೇಲಿನ ಹಲ್ಲೆಯನ್ನು ಪ್ರತಿಭಟಿಸಿ ಹಿರಿಯ ಚಿತ್ರನಟ ಸುನಿಲ್‌ದತ್, ಮಾಜಿ ಕೇಂದ್ರ ಸಚಿವ ಅರ್ಜುನ್‌ಸಿಂಗ್, ಸಪ್ದರ್ ಹಷ್ಮಿಯವರ ಸಹೋದರಿ ಶಬ್ನಂ, ಸಾಹಿತಿ-ಕಲಾವಿದರು ಬುದ್ಧಿಜೀವಿಗಳು ಮುಂತಾದವರು ವಾಜಪೇಯಿಯವರ ನಿವಾಸದ ಮುಂದೆ ಪ್ರತಿಭಟನೆ ಮಾಡಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆಯನ್ನು ಖಂಡಿಸಿ ಛೀಮಾರಿ ಹಾಕಿದ್ದಾರೆ.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡನೆ

'ಸಹಮತ್' ಕಲಾವಿದರಮೇಲೆ ಬಿಜೆಪಿಯ ಹಲ್ಲೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಕಲಾವಿದರ ಮೇಲಿಲ ಖಾವಿಪಡೆಗಳ ಈ ರೀತಿಯ ಬರ್ಬರ ಹಲ್ಲೆಗಳು, ಕೋಮುವಾದಿಗಳು ಜನರಿಂದ ತಿರಸ್ಕೃತವಾಗುತ್ತಿರುವುದರಿಂದ ಉಂಟಾಗಿರುವ ಅಸಹನೆಯ ಪ್ರತೀಕ ಆದರೆ ಭಾರತೀಯ ಜನತೆ ಫ್ಯಾಸಿಸ್ಟ್ ಸಂಸ್ಕೃತಿಯ ಈ ಹಲ್ಲೆಗಳನ್ನು ಸಹಿಸಿಕೊಳ್ಳುವುದಿಲ್ಲ ಚುನಾವಣೆಗಳಲ್ಲಿ ಅಂತಹ… ಶಕ್ತಿಗಳನ್ನು ಸೋಲಿಸುವ ಮೂಲಕ ಪಾಠ ಕಲಿಸುತ್ತಾ… ಎಂದು ಪೊಲಿಟ್‌ಬ್ಯೂರೋ ತನ್ನ ಹೇಳಿಕೆಯಲ್ಲಿ ತಿಳಿಸಿದೆ…

ಇದೇ ರೀತಿಯಾಗಿ ದೇಶದ ಹಲವಾರು ಕಡ… ಘಟನೆಯನ್ನು ಖಂಡಿಸಿ ಪ್ರತಿಭಟನೆಯನ… ಸೂಚಿಸಲಾಗಿದೆ. ಹಲ್ಲೆಕೋರರನ್ನು ಬಂಧಿಸಿ ಶಿಕ್ಷಿಸಲು… ಆಗ್ರಹಿಸಲಾಗಿದೆ. ಇದರ ಭಾಗವಾಗಿ ಬೆಂಗಳೂರಿನಲ್ಲಿಯೂ… ಸಹ ಸೆ. 28ರಂದು ನಗರದ ಗಾಂಧಿ ಪ್ರತಿಮೆಯ ಮುಂದ… ವಿವಿಧ ಸಂಘಟನೆಗಳ ಕಾರ್ಯಕರ್ತರು ಮತ್ತು… ಮುಖಂಡರು ಸೇರಿ ಪ್ರತಿಭಟನೆ ನಡೆಸಲಾಯಿತು… ಘಟನೆಯನ್ನು ಖಂಡಿಸಿ ರಾಜ್ಯಪಾಲರಿಗೆ ಮನವಿ ಸಲ್ಲಿಸು… ಮೂಲಕ ಗೂಂಡಾಗಳನ್ನು ಬಂಧಿಸಲು ಆಗ್ರಹ… ಪಡಿಸಲಾಗಿದೆ. ಮನವಿಯನ್ನು ಸ್ವೀಕರಿಸಿದ ರಾಜ್ಯಪಾಲರು… ಫ್ಯಾಸಿಸ್ಟ್ ಶಕ್ತಿಗಳ ಬೆಳವಣಿಗೆಯ ಬಗ್ಗೆ ತೀವ್ರ ಆತಂ… ಹಾಗೂ ಹಲ್ಲೆಯ ಬಗ್ಗೆ ದಿಗ್ಭ್ರಮೆ ವ್ಯಕ್ತಪಡಿಸಿರುತ್ತಾರೆ.

ಪ್ರತಿಭಟನೆಯಲ್ಲಿ ವಿಚಾರ ವೇದಿಕೆ ಕರ್ನಾಟ… (ವಿವೇಕ)ದ ಕೆ.ವಿ. ಶ್ರೀನಿವಾಸ್. ಎಸ್.ಸುರೇಂದ್ರರಾ… ಜೆ.ಎಂ.ಎಸ್.ನ ಪ್ರಭಾ ಡಿ.ವೈ.ಎಫ್.ಐ.ನ … ಶ್ರೀನಿವಾಸ್, ಎಸ್.ಎಫ್.ಐ.ನ ರಮೇಶ. ಶೂದ್ರ… ಪತ್ರಿಕೆಯ ಶೂದ್ರ ಶ್ರೀನಿವಾಸ್ ಮುಂತಾದವರು… ಮಾತನಾಡಿದರು. ವಿವಿಧ ಸಂಘಟನೆಗಳ ಮುಖಂಡರು… ಭಾಗವಹಿಸಿದ್ದರು.

ಜನಾಂಗೀಯ ದ್ವೇಷದ ನಂಜುಕಾರುವ ಫ್ಯಾಸಿಸ… ವಿಷಸರ್ಪದ ಹಲ್ಲನ್ನು ತೆಗೆಯದೇ ಹೋದರ… ಉಳಿಯುವವರಾದರು ಯಾರು? ಯೋಚಿಸಿ.

ವರದಿ ಪ್ರಭಾ ಎನ್…

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ